ಸಂಪುಟ: 14 Volume | ಸಂಚಿಕೆ: 29 Issue | ಪುಟಗಳು 08 Pages | ಸೋಮವಾರ 04 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ , ಕೌಡಾಳೆ

**ಬೆಳಗು**

ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ

# ರಿಸಲ್ಟ್ ಬೆನ್ನಲ್ಲೇ ಬೇಗುದಿ

## ಪಂಚರಾಜ್ಯ ಚುನಾವಣೆ ಫಲಿತಾಂಶ ಬೆನ್ನಲ್ಲೇ ತಳಮಳ | ನಾಯಕತ್ವ ಬದಲಾವಣೆ | ಸಂಪುಟ ಕಸರತ್ತು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೈ ಎಲೆಕ್ಷನ್ ಹಾಗೂ ಪಂಚರಾಜ್ಯ ಚುನಾವಣೆ ಫಲಿತಾಂಶ ಬೆನ್ನಲ್ಲೇ ಬೇಗುದಿ ಶುರುವಾಗಿದೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಗೊಂದಲಕ್ಕೆ ಇನ್ನೂ ಬ್ರೇಕ್ ಬಿದ್ದಿಲ್ಲ. ಮೇ 4ರ ಬಳಿಕ ಎಲ್ಲಾ ಬೆಳವಣಿಗೆಗಳಿಗೆ ಅಂತ್ಯ ಸಿಗಲಿದೆ. ಏತನ್ಮಧ್ಯೆ ಹಿರಿಯ ಶಾಸಕರು ದೆಹಲಿ ಟೂರ್‌ಗೆ ಸಜ್ಜಾಗಿದ್ದು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಹಿರಿಯ ಸಚಿವರ ದೆಹಲಿ ಪ್ರವಾಸದ ಹಿಂದೆ ಅನೇಕ ಉದ್ದೇಶಗಳಿರುವುದು ಕುತೂಹಲ ಕೆರಳಿಸಿದೆ.

**ಕೆಲವರಿಗೆ ಕೊಕ್..?:** ಸಂಪುಟ ಪುನಾರಚನೆ ಆದರೆ ಕೆಲವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ ಯಾರಿಗೆಲ್ಲಾ ಕೊಕ್ ನೀಡುವ ಸಾಧ್ಯತೆಯ ಬಗ್ಗೆ ಸ್ಪಷ್ಟ ಚಿತ್ರಣ ಇಲ್ಲ. ಹೀಗಾಗಿ ಸಂಪುಟದಲ್ಲಿ ಸ್ಥಾನ ಕಳೆದುಕೊಳ್ಳುವ ಆತಂಕ ಇರುವ ಸಚಿವರು ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿ ಮಾತುಕತೆ ನಡೆಸುವ ಸಾಧ್ಯತೆ ಇದೆ.

**ಎಚ್ಚರಿಕೆಯ ಹೆಜ್ಜೆ:** 2028 ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಅತಿ ಎಚ್ಚರಿಕೆಯಿಂದ ಹೆಜ್ಜೆಯಿಡುವ ಸಾಧ್ಯತೆಯಿದೆ, ಆಡಳಿತ ವಿರೋಧಿ ಅಲೆಯನ್ನು ಹೋಗಲಾಡಿಸುವುದು ಕಾಂಗ್ರೆಸ್ ಮುಂದಿರುವ ಸದ್ಯದ ಬಹುದೊಡ್ಡ ಸಮಸ್ಯೆಯಾಗಿದೆ.

### ಹೈಕಮಾಂಡ್ ನಿಲುವು..?

ನಾಯಕತ್ವ ಬದಲಾವಣೆಯ ಬಗ್ಗೆಯೂ ಸ್ಪಷ್ಟ ಚಿತ್ರಣ ನೀಡುವಂತೆ ಹಿರಿಯ ಸಚಿವರು ಹೈಕಮಾಂಡ್ ನಾಯಕರ ಮುಂದೆ ಮನವಿ ಮಾಡಲಿದ್ದಾರೆ. ನಾಯಕತ್ವ ವಿಚಾರವಾಗಿ ಗೊಂದಲದ ವಾತಾವರಣ ಇದೆ. ಈ ಬಗ್ಗೆ ಹೈ ಕಮಾಂಡ್ ನಾಯಕರು ತಮ್ಮ ನಿಲುವು ಸ್ಪಷ್ಟಪಡಿಸಬೇಕು. ಇಲ್ಲಾಂದ್ರೆ ತಪ್ಪು ಸಂದೇಶ ಹೋಗುತ್ತದೆ. ಕಾರ್ಯಕರ್ತರಲ್ಲೂ ಗೊಂದಲ ಮೂಡುತ್ತದೆ ಎಂದು ವಿವರಿಸಲಿದ್ದಾರೆ ಎಂದಿದೆ ಮೂಲ.



### ರಾಜ್ಯದ ಹಲವು ಹಿರಿಯ ಸಚಿವರಿಗೆ ಕೊಕ್?

ಒಂದು ಮೂಲದ ಪ್ರಕಾರ, ಇದೇ ತಿಂಗಳು ಸಂಪುಟ ಪುನಾರಚನೆ ಆಗಲಿದ್ದು, ಕೆಲವು ಹಿರಿಯ ಸಚಿವರಿಗೆ ಕೊಕ್ ಸಾಧ್ಯತೆ ಇದೆ. 12 ರಿಂದ 15 ಸಚಿವರನ್ನು ಬದಲಾವಣೆ ಮಾಡಿ, ಹೊಸ ಮುಖಗಳಿಗೆ ಆದ್ಯತೆ ನೀಡುವುದಕ್ಕೆ ಅಸ್ತು ಎನ್ನಲಾಗಿದೆ. ಯಾರಿಗೆಲ್ಲಾ ಕೊಕ್ ಎಂಬುವುದು ಸ್ಪಷ್ಟತೆ ಇಲ್ಲ. ಸಂಪುಟಕ್ಕೆ ಸೇರ್ಪಡೆ ಆಗಲು ಸಾಕಷ್ಟು ಆಕಾಂಕ್ಷಿಗಳು ಪ್ರಯತ್ನ ನಡೆಸುತ್ತಿದ್ದಾರೆ.

### ಡಿಸಿಎಂ ಡಿಕೆಶಿ ವಿರುದ್ಧ ಮೌನ ತಂತ್ರ

ನವದೆಹಲಿಯಲ್ಲಿ ನಾಯಕತ್ವ ಬದಲಾವಣೆಗಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನವದೆಹಲಿಯ ಹೈ ಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ವರದಿಯಾಗಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ. ಜಾರಕಿಹೊಳಿ ಅವರ "ಮೌನತಂತ್ರ" ಸಿಎಂ ಬದಲಾವಣೆ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿ ಸ್ಥಗಿತಗೊಳಿಸಿದೆ, ಪಕ್ಷದೊಳಗಿನ ಉದ್ವಿಗ್ನತೆಯನ್ನು ತಣ್ಣಗಾಗಿಸಿದೆ ಎಂದು ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

### ಸಿಎಂ, ಬಿಕೆ ಭೇಟಿ ಕುತೂಹಲ

ನಾಯಕ ಬಿಕೆ ಹರಿಪ್ರಸಾದ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ. ಸಿಎಂ ಸರ್ಕಾರಿ ನಿವಾಸ ಕಾವೇರಿಗೆ ಆಗಮಿಸಿದ್ದ ಬಿಕೆ ಹರಿಪ್ರಸಾದ್, ವಿಶೇಷ ಚರ್ಚೆ ನಡೆಸಿದ್ದಾರೆ. ನಾಯಕತ್ವ ಬದಲಾವಣೆ ಚರ್ಚೆಯ ನಡುವೆ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಹರಿಪ್ರಸಾದ್ ಅವರು ದೆಹಲಿಯಲ್ಲಿ ಹೈಕಮಾಂಡ್ ಜೊತೆ ಉತ್ತಮ ಸಂಪರ್ಕ ಹೊಂದಿದ್ದು, ಸಿಎಂ ಜೊತೆ ಭೇಟಿ ಚರ್ಚೆಗೆ ಗ್ರಾಸವಾಗಿದೆ.

### ಸಿಎಂ ಬದಲಾವಣೆ ಪ್ರತಿಕೂಲ

ಸಚಿವ ಸತೀಶ್ ಜಾರಕಿಹೊಳಿ, ಎಚ್‌ಸಿ ಮಹದೇವಪ್ಪ ನೇತೃತ್ವದ ಅಹಿಂದ ನಾಯಕರ ತಂತ್ರ ಫಲಿಸಿದೆ. ಸಚಿವದ್ವಯರು ಹೈಕಮಾಂಡ್ ಜೊತೆ ಮಹತ್ವದ ಚರ್ಚೆಗಳನ್ನು ನಡೆಸಿದ್ದಾರೆ. ಸಿಎಂ ಬದಲಾಯಿಸುವ ವಿರುದ್ಧ ಕಠಿಣ ಸಂದೇಶ ನೀಡಿದ್ದಾರೆ. ಈ ಹಂತದಲ್ಲಿ ನಾಯಕತ್ವ ಬದಲಾವಣೆಯು ಸರ್ಕಾರದ ನಿರೀಕ್ಷೆಗಳ ಮೇಲೆ ಪರಿಣಾಮ ಬೀರಲಿರುವ ಬಗ್ಗೆ ಎಚ್ಚರಿಸಿದ್ದಾರೆಂದು ತಿಳಿದು ಬಂದಿದೆ.

## 20 ರಿಂದ ಅನಿರ್ದಿಷ್ಟಾವಧಿ ಮುಷ್ಕರ

**ಬೆಂಗಳೂರು:** ರಾಜ್ಯ ಸಾರಿಗೆ ಸಂಸ್ಥೆಯ ನೌಕರರು ಇದೇ ತಿಂಗಳ 20ರಿಂದ ಅನಿದಿಷ್ಟ ಅವಧಿ ಮುಷ್ಕರ ನಡೆಸಲಿದ್ದಾರೆ. ತಮ್ಮ ಬೇಡಿಕೆಗಳ ಈಡೇರಿಕೆಗೆ ಅಗ್ರಹಿಸಿ ಸಾರಿಗೆ ಸಂಸ್ಥೆಯ ಎಲ್ಲ ನಾಲ್ಕು ನಿಗಮದ ನೌಕರರು ಈ ತಿಂಗಳ 20 ರಿಂದ ಅನಿರ್ದಿಷ್ಟ ಅವಧಿ ಮುಷ್ಕರ ನಡೆಸಲಿದ್ದಾರೆ ಎಂದು ಸಾರಿಗೆ ನೌಕರರ ಸಂಘ ಘೋಷಿಸಿದ್ದು ಮೇ 20ರಿಂದ ರಾಜ್ಯಾದ್ಯಂತ ಸಾರಿಗೆ ಬಸ್‌ಗಳ ಓಡಾಟದಲ್ಲಿ ವ್ಯತ್ಯಾಯವಾಗುವ ಸಾಧ್ಯತೆಗಳು ಇವೆ. ಸಾರಿಗೆ ನೌಕರರ ಜಂಟಿ ಕ್ರಿಯ ಸಮಿತಿಯ ಸಂಚಾಲಕ ಜಯದೇವರಾಜ ಅರಸ್ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಸರ್ಕಾರಕ್ಕೆ ನೇರವಾಗಿ ಎಚ್ಚರಿಕೆ ನೀಡಿ ನಮ್ಮ ಬೇಡಿಕೆಗಳನ್ನು ಈಡೇರಿಸ ಬೇಕು ಎಂದು ತಿಳಿಸಿದ್ದಾರೆ.



ಕೆಪಿಸಿಸಿ ಕಚೇರಿ ಭಾರತ್ ಜೋಡೋ ಭವನದಲ್ಲಿ ಶುಕ್ರವಾರ ನಡೆದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಮಾತನಾಡಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ ಸಿ ಚಂದ್ರಶೇಖರ್, ವಿಧಾನ ಪರಿಷತ್ ಮುಖ್ಯಸಚೇತಕ ಸಲೀಮ್ ಅಹ್ಮದ್, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್.ಎಂ ರೇವಣ್ಣ, ಕೆಪಿಸಿಸಿ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಮಧ್ಯಾಹ್ನ ಸ್ಪಷ್ಟ ಫಲಿತಾಂಶ

**ಬೆಂಗಳೂರು:** ಪಂಚರಾಜ್ಯ ಚುನಾವಣೆ, ಬೈ ಎಲೆಕ್ಷನ್ ಫಲಿತಾಂಶ ಇಂದು ಪ್ರಕಟವಾಗಲಿದೆ. ಈ ಕುರಿತು ಎಕ್ಸಿಟ್‌ಪೋಲ್‌ಫಲಿತಾಂಶಗಳು ಕೂಡ ಬಂದಿದ್ದು, ಅದು ಯಾವುದೂ ಸರಿಯಾಗಬೇಕಿಲ್ಲ. ಮತ ಎಣಿಕೆಯ ಬಳಿಕವಷ್ಟೇ ಸ್ಪಷ್ಟ ಚಿತ್ರಣ ಬರಲಿದೆ. ಮೇ 4 ರಂದು ಮಧ್ಯಾಹ್ನದ ಮೊದಲು ಸ್ಪಷ್ಟ ಫಲಿತಾಂಶಗಳು ಲಭ್ಯವಾಗಲಿದೆ. ಈಗಾಗಲೇ ಅಭ್ಯರ್ಥಿಗಳು ಮತ್ತು ಪಕ್ಷದ ನಾಯಕರು ಹಲವಾರು ಬೂತ್‌ಮಟ್ಟದ ಅಂಕಿ ಅಂಶಗಳನ್ನು ಆಯಾ ಪಕ್ಷಗಳ ಜಿಲ್ಲಾ ನಾಯಕತ್ವ ಸಭೆಗಳು ವಿಶ್ಲೇಷಿಸಿವೆ.

## ಕಲಬುರಗಿ, ಬೀದರ್‌ಗೆ ವಿಮಾನ ಸೇವೆ

**ಕಲಬುರಗಿ:** ವಿಮಾನ ಸೇವೆ ವಿಷಯದಲ್ಲಿ ಕಲಬುರಗಿ ಬೀದರ್‌ಜಿಲ್ಲೆಯ ಜನರಿಗೆ ಇದೊಂದು ಖುಷಿ ಸುದ್ದಿ. ಎರಡೂ ಜಿಲ್ಲೆಗಳ ಏರ್‌ಪೋರ್ಟ್‌ನಿಂದ ಸ್ಥಗಿತಗೊಂಡಿದ್ದ ವಿಮಾನ ಸೇವೆ ತಿಂಗಳಲ್ಲಿ ಆರಂಭಿಸುವ ಎಲ್ಲ ಸಿದ್ಧತೆಗಳು ನಡೆದಿವೆ. ಕಲಬುರಗಿ ಏರ್‌ಪೋರ್ಟ‌ನಿಂದ 2025 ರ ಅಕ್ಟೋಬರ್ 15ಕ್ಕೆ ಮತ್ತು ಬೀದರ್‌ನಿಂದ 2026 ರ ಏಪ್ರಿಲ್ 16 ರಿಂದ ವಿಮಾನ ಸೇವೆ ಸ್ಥಗಿತವಾಗಿತ್ತು. ಎರಡೂ ಜಿಲ್ಲೆಗಳಿಂದ ಬೆಂಗಳೂರಿಗೆ ಸಂಚರಿಸುತ್ತಿದ್ದ ಸ್ಟಾರ್‌ಏರ್‌ವಿಮಾನ ನಷ್ಟದ ಕಾರಣದಿಂದ ಸ್ಥಗಿತವಾಗಿತ್ತು.

## 14 ರಿಂದ ಭಾರತಕ್ಕೆ ಮುಂಗಾರು

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಮೇ 14 ರಿಂದ 16 ರ ನಡುವೆ ಭಾರತಕ್ಕೆ ಮುಂಗಾರು ಪ್ರವೇಶವಾಗಲಿದೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ. ದೇಶದ್ಯಾಂತ ರಣಬಿಸಿಲಿಗೆ ಶೀಘ್ರದಲ್ಲೇ ಪರಿಹಾರ ಸಿಗುವ ನಿರೀಕ್ಷೆಯಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಮೇ 14 ರಿಂದ 16ರ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ನೈಋತ್ಯ ಮುಂಗಾರು ಆಗಮನವಾಗಲಿದೆ. ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವ ಕರಾವಳಿ ರಾಜ್ಯಗಳು, ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ತನ್ನ ಮಾಸಿಕ ಮುನ್ಸೂಚನೆಯಲ್ಲಿ ತಿಳಿಸಿದೆ. ಮೇ ತಿಂಗಳಲ್ಲಿ ದೇಶಾದ್ಯಂತ ಸರಾಸರಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ಇಲಾಖೆ ಗಮನಿಸಿದೆ. ಆದರೆ ಪೂರ್ವ, ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತದ ಕೆಲವು ಭಾಗಗಳು ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು.

## ಡಿಕೆಶಿ ಹೇಳಿಕೆ ಅಕ್ಷಮ್ಯ: ಬಿಜೆಪಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆಯು ಮುಕ್ತಾಯವಾದ ಬೆನ್ನಲ್ಲೇ, ಉಪಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರು ನೀಡಿರುವ ಹೇಳಿಕೆಗಳು ಕೇವಲ ರಾಜಕೀಯ ಪ್ರೇರಿತವಲ್ಲ, ಅವು ಈ ದೇಶದ ಸಂವಿಧಾನ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಘೋರ ಅಪಮಾನದಂತಿವೆ. ಸೋಲಿನ ಭೀತಿಯಿಂದ ಕಂಗೆಟ್ಟಿರುವ ಕಾಂಗ್ರೆಸ್, ಸತ್ಯವನ್ನು ಒಪ್ಪಿಕೊಳ್ಳಲಾಗದೆ ಸುಳ್ಳಿನ ಕಂತೆಗಳನ್ನು ಹೆಣೆಯುತ್ತಿದೆ. ಮರು ಮತಎಣಿಕೆ ಎನ್ನುವುದು ಗೌರವಾನ್ವಿತ ನ್ಯಾಯಾಲಯದ ನಿರ್ದೇಶನದಂತೆ ನಡೆದ ಪ್ರಕ್ರಿಯೆ. ಅದನ್ನು "ಕ್ರಿಮಿನಲ್ ಆಕ್ಟಿವಿಟಿ" ಎಂದು ಕರೆಯುವ ಮೂಲಕ ಶ್ರೀ ಡಿ.ಕೆ ಶಿವಕುಮಾರ್ ಅವರು ಪರೋಕ್ಷವಾಗಿ ನ್ಯಾಯಾಂಗದ ವಿವೇಚನೆಯನ್ನೇ ಪ್ರಶ್ನಿಸುತ್ತಿದ್ದಾರೆ.




## ಬೀದಿ ಬದಿ ವ್ಯಾಪಾರಿಗಳ ಒಕ್ಕಲು: ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಬೀದಿ ಬದಿ ವ್ಯಾಪಾರಿಗಳನ್ನು ಬೀದಿ ಬದಿಯ ವ್ಯಾಪಾರಿಗಳ ಸಮಿತಿಯಲ್ಲಿ ಚರ್ಚೆ ನಡೆಸದೆ, ಯಾವುದೇ ಮುನ್ಸೂಚನೆ ನೀಡದೆ ಒಕ್ಕಲೇಬ್ಬಿಸುತ್ತಿರುವುದನ್ನು ಕಾನೂನು ಬಾಹಿರವಾಗಿದೆ ಎಂದು ಜಿಲ್ಲಾಧ್ಯಕ್ಷರಾದ ವಿಜಯ್ ದೊರೆರಾಜು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದ ಗಾಂಧಿವೃತ್ತದಲ್ಲಿ ಸಭೆ ಸೇರಿ ನಗರಸಭೆಯ ಕಾನೂನು ಬಾಹಿರ ಕ್ರಮವನ್ನು ಖಂಡಿಸಿ ಮಾತನಾಡಿ, ಕರ್ನಾಟಕ ಪ್ರಗತಿಪರ ಬೀದಿ ಬದಿ ವ್ಯಾಪಾರಿಗಳ ಸಂಘದ ತಾಲೂಕು ಅಧ್ಯಕ್ಷರಾದ ಸೈಯದ್ ಬುರಹಾನ್ನುದ್ದಿನ್ ಮಾತನಾಡಿ ಬೀದಿ ಬದಿ ವ್ಯಾಪಾರಿಗಳಿಗೆ ಸರಿಯಾದ ವ್ಯಾಪಾರದ ಸ್ಥಳಗಳನ್ನು ಗುರುತಿಸದೆ ಬೀದಿ ವ್ಯಾಪಾರಿಗಳಿಗೆ ತೊಂದರೆ ಕೊಡುತ್ತಿರುವುದ ಸರಿಯಾದ ಕ್ರಮವಲ್ಲ ಎಂದಿದ್ದಾರೆ.

ಅಬ್ದುಲ್, ರಮೇಶ, ಹುಲಗಪ್ಪ, ಲಕ್ಷ್ಮಣ, ಬುರಾನುದ್ದಿನ್, ಬಾಷಾಸಾಬ, ಇಮಾಮ್, ಜಾಹಿದ್, ಶರಣಪ್ಪ, ಇತರರು ಇದ್ದರು.



### ಅಂಗಡಿ ಮಾಲಿಕರಿಂದ ಪುಟ್‌ಪಾತ್ ಒತ್ತುವರಿ: ಆರೋಪ

ಕರ್ನಾಟಕ ಪ್ರಗತಿಪರ ಬೀದಿ ಬದಿ ವ್ಯಾಪಾರಿಗಳ ಸಂಘದ ಜಿಲ್ಲಾ ಅಧ್ಯಕ್ಷರಾದ ಸಣ್ಣ ಹನುಮಂತಪ್ಪ ಹುಲಿಹೈದರ ಮಾತನಾಡಿ ನಗರದ ಅಂಗಡಿ ಮಾಲಿಕರು ಪುಟ್ ಪಾತ್ ಒತ್ತುವರಿ ಮಾಡಿಕೊಂಡು ಪಾದಚಾರಿಗಳಿಗೆ ತೊಂದರೆ ಉಂಟು ಮಾಡಿದ್ದರಿಂದ ನಗರದ ಕಾನೂನು ಸೇವಾ ಸಮಿತಿಯು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಏಪ್ರಿಲ್ 17 ರ ಒಳಗೆ ಒತ್ತುವರಿ ತೆರವುಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಸೂಚಿಸಿರುವುದನ್ನೆ ನೆಪವಾಗಿಟ್ಟುಕೊಂಡು, ಬೀದಿ ಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುತ್ತಿರುವುದು ಬೀದಿ ಬದಿಯ ವ್ಯಾಪಾರಿಗಳ ಹೊಟ್ಟೆ ಮೇಲೆ ಒಡೆದಂತೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

## ಬಿಡದಿ ಟೌನ್ ಶಿಪ್ ಯೋಜನೆಯಿಂದ ಕುಮಾರಸ್ವಾಮಿ ಅವರಿಗೆ ಒಳ್ಳೆ ಲಾಟರಿ ಬರಲಿದೆ: ಡಿಸಿಎಂ ಡಿ.ಕೆ.ಶಿವಕುಮಾರ್

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೊ: 9845028349



# ಅಧಿಕಾರಿಗಳು ಪ್ರಾಮಾಣಿಕ ಸೇವೆ ಮಾಡುವುದು ಅತಿ ಅವಶ್ಯಕ

ಸಮಾಜದ ಅಭಿವೃದ್ಧಿಗೆ ಸರಕಾರದ ನೀತಿಗಳು ಮಾತ್ರ ಸಾಕಾಗುವುದಿಲ್ಲ; ಅವುಗಳನ್ನು ಜಾರಿಗೊಳಿಸುವ ಅಧಿಕಾರಿಗಳ ಪ್ರಾಮಾಣಿಕತೆ ಮತ್ತು ನಿಷ್ಠೆ ಅತ್ಯಂತ ಮುಖ್ಯ. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಕೇವಲ ಉದ್ಯೋಗವೆಂದು ನೋಡದೇ, ಸಾರ್ವಜನಿಕ ಸೇವೆಯಾಗಿ ಪರಿಗಣಿಸಿದಾಗ ಮಾತ್ರ ಜನರ ವಿಶ್ವಾಸವನ್ನು ಗಳಿಸಲು ಸಾಧ್ಯವಾಗುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಕೆಲವು ಕಡೆಗಳಲ್ಲಿ ಭ್ರಷ್ಟಾಚಾರ, ವಿಳಂಬ, ನಿರ್ಲಕ್ಷ್ಯತೆ ಇತ್ಯಾದಿ ಸಮಸ್ಯೆಗಳು ಜನರನ್ನು ಕಂಗೆಡಿಸುತ್ತಿವೆ. ಸಾಮಾನ್ಯ ಜನರು ತಮ್ಮ ಸಣ್ಣಸಣ್ಣ ಕೆಲಸಗಳಿಗಾಗಿ ಕಚೇರಿಗಳ ಸುತ್ತಲು ಹೋಗಿ ಸಮಯ, ಹಣ ಮತ್ತು ಶ್ರಮವನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳಿಗೆ ವಿರುದ್ಧವಾಗಿದೆ. ಅಧಿಕಾರಿಗಳು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಬದಲು, ಜನಸೇವೆಗೆ ಬಳಸಬೇಕು.

ಪ್ರಾಮಾಣಿಕತೆ ಎಂಬುದು ಕೇವಲ ಒಂದು ಗುಣವಲ್ಲ; ಅದು ಒಂದು ಹೊಣೆಗಾರಿಕೆ. ಅಧಿಕಾರಿಗಳು ಯಾವುದೇ ಒತ್ತಡಗಳಿಗೆ ಒಳಗಾಗದೆ, ನಿಷ್ಪಕ್ಷಪಾತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಹೀಗಾದಾಗ ಮಾತ್ರ ಸಮಾನತೆ ಮತ್ತು ನ್ಯಾಯವು ಸಮಾಜದಲ್ಲಿ ಸ್ಥಿರವಾಗುತ್ತದೆ. ಜನರು ಅಧಿಕಾರಿಗಳ ಮೇಲೆ ವಿಶ್ವಾಸ ಇಡುವುದಕ್ಕೆ ಪ್ರಮುಖ ಕಾರಣವೇ ಅವರ ಸತ್ಯನಿಷ್ಠ ಸೇವೆ.

ಇದಲ್ಲದೆ, ಅಧಿಕಾರಿಗಳು ಜನರೊಂದಿಗೆ ಸಹಾನುಭೂತಿಯ ಮನೋಭಾವದಿಂದ ನಡೆದುಕೊಳ್ಳುವುದು ಅಗತ್ಯ. ರೈತರು, ಕಾರ್ಮಿಕರು, ಬಡವರು ಎದುರಿಸುವ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ತ್ವರಿತ ಪರಿಹಾರ ನೀಡುವ ಮೂಲಕ ಸರ್ಕಾರದ ಮೇಲೆ ಜನರ ವಿಶ್ವಾಸವನ್ನು ಹೆಚ್ಚಿಸಬಹುದು. ಜನಸೇವೆಯಲ್ಲಿ ಮಾನವೀಯತೆ ಇರಬೇಕು. ಸರ್ಕಾರವು ಸಹ ಪ್ರಾಮಾಣಿಕ ಅಧಿಕಾರಿಗಳಿಗೆ ಉತ್ತೇಜನ ನೀಡಬೇಕು ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪಾರದರ್ಶಕತೆ ಮತ್ತು ಜವಾಬ್ದಾರಿತ್ವವನ್ನು ಹೆಚ್ಚಿಸುವ ಮೂಲಕ ಆಡಳಿತ ವ್ಯವಸ್ಥೆಯನ್ನು ಬಲಪಡಿಸಬಹುದು.

ಒಟ್ಟಿನಲ್ಲಿ, ಅಧಿಕಾರಿಗಳು ಪ್ರಾಮಾಣಿಕ ಸೇವೆ ಸಲ್ಲಿಸುವುದು ದೇಶದ ಅಭಿವೃದ್ಧಿಗೆ ಆಧಾರಸ್ತಂಭವಾಗಿದೆ. ಜನರ ಹಿತಾಸಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಿಷ್ಠೆಯಿಂದ ಕೆಲಸ ಮಾಡಿದಾಗ ಮಾತ್ರ ಸುಶಾಸನ ಸಾಧ್ಯ. ಇದು ಕೇವಲ ಅಧಿಕಾರಿಗಳ ಕರ್ತವ್ಯವಲ್ಲ, ಸಮಾಜದ ಒಟ್ಟು ಪ್ರಗತಿಯ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ.

# ಕೈ ಬೀಸಿ ಕರೆಯುತ್ತಿದೆ ಜೈ ಭವಾನಿ ಸ್ವಿಮ್ಮಿಂಗ್ ಫುಲ್



**ಚಿಟಗುಪ್ಪ:** ಪಟ್ಟಣದ ಹೊರವಲಯದ ಮುಸ್ತರಿ ರಸ್ತೆಯಲ್ಲಿರುವ ಅಂಬರೀಶ್ ರಂಗದಾಳ್ ರವರ ಮಾವಿನ ತೋಟದಲ್ಲಿ ಜೈ ಭವಾನಿ ಸ್ವಿಮ್ಮಿಂಗ್ ಫುಲ್ ಪ್ರಾರಂಭಿಸಲಾಗಿದೆ. ವಿಶೇಷವಾಗಿ ಬೇಸಿಗೆ ಕಾಲದಲ್ಲಿ ಹೆಚ್ಚು ಬಿಸಿಲಿನ ವಾತಾವರಣ ಇರುವುದರಿಂದ ನಮ್ಮ ತೋಟದಲ್ಲಿ ಸೀಮಿಂಗ್ ಫೂಲ್ ಪ್ರಾರಂಭಿಸಿದ್ದೇವೆ. ಪ್ರತಿ ದಿನ ನೂರಾರು ಜನರು ಬಂದು ಸ್ವಿಮ್ಮಿಂಗ್ ಫುಲ್ ನಲ್ಲಿ ದಿನ ಕಳೆಯುತ್ತಿದ್ದಾರೆ ಬೆಳಗ್ಗೆ 10 ರಿಂದ ಸಾಯಂಕಾಲ 6:00 ವರೆಗೆ ಸ್ವಿಮ್ಮಿಂಗ್ ಫುಲ್ ತೆರೆದಿರುತ್ತದೆ. ಈ ಸ್ವಿಮ್ಮಿಂಗ್ ಫುಲ್ ನಲ್ಲಿ ಮಕ್ಕಳಿಗೆ ಈಜು ಕಲಿಯಲು ಕೂಡ ತುಂಬಾ ಅವಕಾಶವಿದೆ. ಈ ಸ್ವಿಮ್ಮಿಂಗ್ ಫುಲ್ ನಲ್ಲಿ ತುಂಬಾ ರಿಯಾಯಿತಿ ಇಡಲಾಗಿದೆ ಎಂದು ತಿಳಿಸಿದ್ದಾರೆ. ಮೇ ತಿಂಗಳು ತುಂಬಾ ಬಿಸಿಲಿನ ತಾಪಮಾನ ಇದ್ದು ತಾಪಮಾನ ತೊಂದರೆ ನಿವಾರಿಸಲು ಈಜುಕೊಳದಲ್ಲಿ ಈಜಾಡಿದರೆ ಬಿಸಿಲಿನ ತಾಪ ನಿವಾರಣೆಯಾಗುತ್ತದೆ ಎಂದರು. ಪಟ್ಟಣದ ಸುತ್ತಮುತ್ತ ಗ್ರಾಮಗಳಿಗೆ ಏಕೈಕ ವೆಮ್ಮಿಂಗ್ ಫುಲ್ ಆಗಿದೆ. ಮಕ್ಕಳಿಗೆ, ಯುವಕರಿಗೆ, ಮಹಿಳೆಯರಿಗೆ, ಜೈ ಭವಾನಿ ಸ್ವಿಮ್ಮಿಂಗ್ ಫುಲ್ ಕೈಬೀಸಿ ಕರೆಯುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ಸ್ವಿಮ್ಮಿಂಗ್ ಫುಲ್ ಮಾಲೀಕ ಅಂಬರೀಶ ರಂಗದಾಳ ಮನವಿ ಮಾಡಿದ್ದಾರೆ.

# ಮೆಡಿಕಲ್ ಶಾಪ್‌ಗೆ ಡಿಸಿ, ಎಸ್ಪಿ ಭೇಟಿ



**ಬಳ್ಳಾರಿ :** ನಗರದ ಮೆಡಿಕಲ್ ಶಾಪ್ ಗಳಲ್ಲಿ ವೈದ್ಯರ ಸೂಚನೆ ಮೇರೆಗೆ ಮಾತ್ರ ಔಷಧಿ, ಮಾತ್ರೆ, ಇಂಜಕ್ಷನ್ ಗಳು ಮಾರಾಟವಾಗುತ್ತಿವೆಯಾ ಎಂಬುದನ್ನು ನಿನ್ನೆ ಡಿಸಿ ಕೆ.ನಾಗೇಂದ್ರ ಪ್ರಸಾದ್, ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್ ನಗರದ ಹಲವು ಮೆಡಿಕಲ್ ಸ್ಟೋರ್ಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ವಹಿವಾಟನ್ನು ಕಂಪ್ಯೂಟರ್, ರಿಜಿಸ್ಟರ್ ಬುಕ್ ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಅಂಗಡಿಗಳ ಮುಂದೆ ಕಡ್ಡಾಯ ಸೂಚನಾ ಫಲಕ ಅಳವಡಿಸಬೇಕು. ವೈದ್ಯರ ರಸೀದಿಯಿಲ್ಲದೇ ಮಾತ್ರೆ, ಔಷಧಿಗಳನ್ನ ನೀಡುವಂತಿಲ್ಲ. ನೀಡಿದರೆ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದ್ದಾರೆ.

ಮೆಡಿಕಲ್ ಸ್ಟೋರ್ಗಳಲ್ಲಿನ ಔಷಧಿಗಳ ಸಂಗ್ರಹ, ಮಾರಾಟದ ಕುರಿತ ದಾಖಲೆಗಳು, ಬಿಲ್ಗಳ ಕುರಿತು ಈ ವೇಳೆ ಪರಿಶೀಲನೆ ನಡೆಸಲಾಗಿದೆ. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಜಿಲ್ಲಾ ಡ್ರಗ್ಸ್ ಕಂಟ್ರೋಲರ್ ಡಾ.ಮಂಜುಳ, ಅಬಕಾರಿ ಇಲಾಖೆ ಎಸ್ಪಿ ಅನಿಲ್ ಕುಮಾರ್, ಡಿಎ ಡಾ.ವೈ.ರಮೇಶ್ ಬಾಬು ಮೊದಲಾದವರು ಇದ್ದರು.

# ಸರಕಾರದಿಂದ ಸಬ್ಸಿಡಿ ಘೋಷಣೆ ಉತ್ತಮ ನಿರ್ಧಾರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಬೆಂಗಳೂರಿನಿಂದ ಬೀದರ್ ಮತ್ತು ಕಲಬುರಗಿಗೆ ವಿಮಾನ ಸೇವೆ ಅಬಾಧಿತವಾಗಿ ಮುಂದುವರಿಸಲು ರಾಜ್ಯ ಸರ್ಕಾರ ಒಟ್ಟು ಯೋಜನಾ ವೆಚ್ಚ 28.47 ಕೋಟಿ ರೂ. ಸಬ್ಸಿಡಿ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ ಎಂದು ದಕ್ಷಿಣ ಕನ್ನಡ ಸಂಘದ ಮಾಜಿ ಅಧ್ಯಕ್ಷರಾದ ಡಾ. ಸದಾನಂದ ಪೆರ್ಲ ಹೇಳಿದ್ದಾರೆ.






ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಏ. 30 ರಂದು ಮೂಲ ಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಒಟ್ಟು ಯೋಜನಾ ವೆಚ್ಚದಡಿ ವಿಮಾನಸೇವೆ ಪುನರಾರಂಭಿಸಲು (ವಿಜಿಎಫ್) 28.47 ಕೋಟಿ. ರೂ. ಸಬ್ಸಿಡಿ ಘೋಷಿಸಿದೆ ಬೀದರ್ ಮತ್ತು ಕಲಬುರಗಿಯಿಂದ ಬೆಂಗಳೂರಿಗೆ ವಿಮಾನ ಸೇವೆ ಒದಗಿಸಲು ಅನುದಾನವನ್ನು 80:20 ಅನುಪಾತದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಡಿ ಅನುಮೋದನೆ ನೀಡಿದೆ.

ಬೆಂಗಳೂರು– ಬೀದರ್– ಬೆಂಗಳೂರು, ಹಾಗೂ ಬೆಂಗಳೂರು–ಕಲಬುರಗಿ–ಬೆಂಗಳೂರು ಮಾರ್ಗಗಳಲ್ಲಿ ವಿಮಾನಯಾನ ಕಾರ್ಯಾಚರಣೆ ಕಾಯ್ದೆ 1999 ಕಲಂ 4 (ಜಿ ) ಅಡಿಯಲ್ಲಿ ವಿನಾಯಿತಿ ಪಡೆದ ನಂತರ ಕೆ ಎಸ್ ಐ ಐ ಡಿ ಸಿ ನಿಗಮವು ಗೋದಾವತ್ ಎಂಟರ್ಪ್ರೈಸಸ್ ಪ್ರೈವೇಟ್ ಲಿಮಿಟೆಡ್ (ಸ್ಟಾರ್ ಏರ್ ಲೈನ್ಸ್) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಂಪುಟ ಸಭೆಯಲ್ಲಿ ಅನುದಾನ ನೀಡಿ ವಿಮಾನ ಸೇವೆ ಆರಂಭಕ್ಕೆ ಒಪ್ಪಿಗೆ ಸೂಚಿಸಿದೆ.

ಈ ಮಾರ್ಗ ನಡುವೆ ನಿಯಮಿತವಾಗಿ ವಿಮಾನ ಸಂಚಾರ ಪುನರಾರಂಭಿಸಿ ಪ್ರಯಾಣ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡಿ ಹೂಡಿಕೆ ಆಕರ್ಷಣೆಗೆ ಪ್ರೋತ್ಸಾಹಿಸಿ ವೃತ್ತಿಪರರು ಮತ್ತು ಅಧಿಕಾರಿಗಳ ತ್ವರಿತ ಪ್ರಯಾಣ ಸಾಧ್ಯತೆ ಹೆಚ್ಚಿಸಿ ಕಲ್ಯಾಣ ಕರ್ನಾಟಕ ಭಾಗದ ಸಂಪರ್ಕ ವ್ಯಾಪಾರ ಉದ್ಯಮ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸರಕಾರದ ಕ್ರಮವು ಶ್ಲಾಘನೀಯವಾದುದು.



ಬೆಂಗಳೂರಿನಿಂದ ಬೀದರ್ ಕಲಬುರಗಿಗೆ ಕನಿಷ್ಠ 12 ತಾಸುಗಳು ಪ್ರಯಾಣ ಅವಧಿ ಇದ್ದು ವಿಮಾನಸೇವೆ ಆರಂಭದೊಂದಿಗೆ ಸಮಯದ ಉಳಿತಾಯದ ಜೊತೆಗೆ ಪ್ರವಾಸಿಗರು ಉದ್ಯಮಿಗಳು ವಿದ್ಯಾರ್ಥಿಗಳು ಸರಕಾರಿ ಅಧಿಕಾರಿಗಳಿಗೆ ಸುಲಭ ಸಂಚಾರ ವಾತಾವರಣ ನಿರ್ಮಾಣಗೊಳ್ಳುತ್ತದೆ. ಇದರಿಂದ ಈ ಭಾಗದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಆರ್ಥಿಕ ಒಳಗೊಳ್ಳುವಿಕೆ ಮತ್ತು ರಾಜಧಾನಿ ಹಾಗೂ ಅಂತರ್ಜಿಲ್ಲಾ ಸಂಪರ್ಕ ಸಾಧ್ಯತೆಯನ್ನು ಹೆಚ್ಚಿಸುತ್ತದೆ ಎಂದು ಡಾ.ಪೆರ್ಲ ಅಭಿಪ್ರಾಯಪಟ್ಟಿದ್ದಾರೆ.

**ಮಂಗಳೂರು, ಮುಂಬೈಗೆ ಹೆಚ್ಚಿದ ಒತ್ತಡ**

ಕಲಬುರಗಿಯಿಂದ ಮಂಗಳೂರು ಮುಂಬೈ ದೆಹಲಿ ತಿರುಪತಿ ಮುಂತಾದಡೆಗಳಿಗೆ ವಿಮಾನ ಸಂಚಾರ ಪ್ರಾರಂಭಿಸುವಂತೆ ಪ್ರಯಾಣಿಕರು ತೀವ್ರ ಒತ್ತಡ ಹೇರುತ್ತಿದ್ದಾರೆ. ಈ ಮಾರ್ಗಗಳಲ್ಲಿ ವಿಮಾನ ಸಂಚಾರ ಆರಂಭಗೊಂಡರೆ ಅಂತರಾಜ್ಯ ಮಟ್ಟದಲ್ಲಿ ಸಂಪರ್ಕ ಸಾಧಿಸಲು ಹಾಗೂ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶಗಳಿವೆ ಎಂದು ಡಾ. ತಿಳಿಸಿದ್ದಾರೆ.

# ಕಾನೂನು ಅರಿವು, ನೆರವು ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಕಾರ್ಮಿಕ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಬೀದರನ ಮೋಹನ ಮಾರ್ಕೆಟನ ಭಾರತ ರತ್ನ ಡಾ. ಬಿ.ಆರ್ ಅಂಬೇಡ್ಕರ ಕಾರ್ಮಿಕ ಸೇವಾಕೇಂದ್ರದಲ್ಲಿ ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮಕ್ಕೆ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಅವರು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ಕಾರ್ಮಿಕರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಮಾತನಾಡಿದರು ಹಾಗೂ ಕಾರ್ಮಿಕರಿಗೆ ಕಿಟ್‌ನ್ನು ವಿತರಣೆ ಮಾಡಿದರು.



ಬೀದರ ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕಅಧಿಕಾರಿ ಮಹೇಶ ಲಕ್ಷ್ಮಣ ಕುಳಲಿ ಅವರು ಅಧ್ಯಕ್ಷತೆ ಭಾಷಣವನ್ನು ಮಾಡಿದರು. ಬೀದರ ವಕೀಲರಾದ ನಾಗೇಂದ್ರ ಬಿರಾದರ ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸವಲತ್ತುಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಬೀದರ ಕಾರ್ಮಿಕ ನಿರೀಕ್ಷಕರಾದ ಶ್ರೀಮತಿ ಕೆ . ಸುವರ್ಣ, ಬೀದರ ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಅರ್ಜುನ ಸಿತಾಳಗೇರ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿಯವರಾದ ಆಕಾಶ ಸಜ್ಜನಶೇಟ್ಟಿ ಹಾಗೂ ಕಾರ್ಮಿಕ ಇಲಾಖೆ, ಬೀದರ ಇವರ ಸಿಬ್ಬಂದಿ ವರ್ಗದವರು ಹಾಗೂ ಕಾರ್ಮಿಕರು ಹಾಜರಿದ್ದರು.



**ಬೀದರ: ಬೇಸಿಗೆಯ ತೀವ್ರತೆಯಿಂದಾಗಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದ್ದು, ಈ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹಾಗೂ ಹಿರಿಯ ಅಧಿಕಾರಿಗಳು ಔರಾದ ತಾಲೂಕಿನ ಸೊರಹಳ್ಳಿ, ಜಂಬಗಿ, ಮಹಾರಾಜವಾಡಿ, ವಿಜಯನಗರ್ ತಾಂಡಾ, ಏಕಲಾರ ತಾಂಡಾ ಸೇರಿದಂತೆ ವಿವಿಧದಡೆ ಭೇಟಿ ನೀಡಿ ಪರಿಶೀಲಿಸಿದರು.**

# ವಿಧಾನ ಪರಿಷತನ ಚುನಾವಣೆಗಾಗಿ ಜಿಲ್ಲಾ ಬಿಜೆಪಿಯಿಂದ ಪೂರ್ವ ಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಈಶ್ಯಾನ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತನ ಸ್ಥಾನಕ್ಕಾಗಿ ಮುಂಬರುವ ಚುನಾವಣೆಗಾಗಿ ಬೀದರ ಜಿಲ್ಲಾ ಭಾರತೀಯ ಜನತಾ ಪಾರ್ಟಿಯ ಪೂರ್ವ ಭಾವಿ ಸಭೆಯನ್ನು ದಿನಾಂಕ 01–05–2026 ರಂದು ಜಿಲ್ಲಾ ಕಾರ್ಯಾಲಯದಲ್ಲಿ ಮಾಡಲಾಯಿತು.



ಈ ಸಭೆಯಲ್ಲಿ ಅಭ್ಯರ್ಥಿಯಾದ ಶಶೀಲ ನಮೋಶಿಯವರು ಕಾರ್ಯಕರ್ತರನ್ನುದ್ದೇಶಿ ಮಾತನಾಡಿ ಕಾರ್ಯಕರ್ತರು ಅರ್ಹ ಶಿಕ್ಷಕರನ್ನು ಗುರುತಿಸಿ ಅವರ ನೋಂದಣಿಯನ್ನು ಮಾಡಬೇಕೆಂದು ಹೇಳಿದರು ಹಾಗೂ ಈ ಚುನಾವಣೆಯ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ಕಾರ್ಯಕರ್ತರಿಗೆ ನೀಡಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಎನ್, ರವಿಕುಮಾರ ಅವರು ಮುಂಬರುವ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿ ತರಬೇಕೆಂದು ಮನವಿ ಮಾಡಿದರು. ಸಭೆ ಅಧ್ಯಕ್ಷತೆ ವಹಿಸುತ್ತಾ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಅವರು ಮುಂಬರುವ ಈಶಾನ್ಯ ಶಿಕ್ಷಕರ ಚುನಾವಣೆಗಾಗಿ ಬೀದರ ಜಿಲ್ಲೆಯ ಎಲ್ಲಾ ನಗರ ಹಾಗೂ ಗ್ರಾಮಾಂತರ ಮಂಡಲಗಳ ಪದಾಧಿಕಾರಿಳಿಗೆ ನಿಯೋಕ್ತ ಮಾಡಲಾಗಿದೆ. ನಿಯುಕ್ತ ಮಾಡಲಾದ ಪ್ರಭಾರಿಗಳು ತಮ್ಮ ಕ್ಷೇತ್ರದಲ್ಲಿ ಶ್ರಮಿಸಬೇಕು ಮತ್ತು ಅಭ್ಯರ್ಥಿಯಾದ ಶಶೀಲ ನಮೋಶಿಯವರನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸ ತರಬೇಕೆಂದು ಕಾರ್ಯಕರ್ತರಿಗೆ ಸೂಚಿಸಿದರು.


ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಹಾಗೂ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಮಾತನಾಡಿ ರಾಜ್ಯದ ಪದವಿಧರ ಹಾಗೂ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವು ಗೆಲ್ಲುತ್ತಾ ಬಂದಿದೆ ಮುಂದೆಯು ಕೂಡ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿ ತರಬೇಕೆಂದು ಕರೆ ನೀಡಿದರು. ದಿನಾಂಕ 09–05–2026 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷ ಅಭಿಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಸುಮಾರು 10 ಸಾವಿರ ಕಾರ್ಯಕರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಈ ಸಭೆಯಲ್ಲಿ ಹುಮನಾಬಾದ ಶಾಸಕರಾದ ಡಾ. ಸಿದ್ದಲಿಂಗಪ್ಪ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಎಮ್.ಜಿ ಮೂಳೆ, ಮಾಜಿ ಶಾಸಕರಾದ ಪ್ರಕಾಶ ಖಂಡ್ರೆ, ವಿಧಾನ ಪರಿಷತ್‌ನ ಮಾಜಿ ಉಪ ಸಭಾಪತಿ ರಘುನಾಥರಾವ ಮಲ್ಕಾಪೂರೆ ಸೇರಿದಂತೆ ಅನೇಕ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧವರಾವ ಹುಸಾರೆ ಸ್ವಾಗತಿಸಿದರು, ಪೀರಪ್ಪ ಔರಾದೆಯವರು ಕಾರ್ಯಕ್ರಮದ ಸಂಚಾಲನೆ ಮಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ವಿಜಯಕುಮಾರ ಪಾಟೀಲ ಗಾದಗಿ ವಂದಿಸಿದರು ಎಂದು ಜಿಲ್ಲಾ ಮಾಧ್ಯಮ ಘಟಕದ ಸಂಚಾಲಕರಾದ ಶ್ರೀನಿವಾಸ ಚೌದರಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುಂಗಭದ್ರಾ ಜಲಾಶಯಕ್ಕೆ ಡಿಸಿಎಂ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜಿಲ್ಲೆಯ ಹೊಸಪೇಟೆಯ ತುಂಗಭದ್ರಾ ಜಲಾಶಯಕ್ಕೆ ಇಂದು ಭೇಟಿ ನೀಡಿದ ಡಿಸಿಎಂ ಡಿ.ಕೆ.ಶಿವಕುಮಾರ್ ಜಲಾಶಯದ ಹೊಸ ಕ್ರಸ್ಟ್ ಗೇಟ್ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿದರು.



19ನೇ ಕ್ರಸ್ಟ್ ಗೇಟ್ ವೀಕ್ಷಣೆ ಮಾಡಿದ ಸಂದರ್ಭದಲ್ಲಿ ಕ್ರಸ್ಟ್ ಗೇಟ್, ಟ್ರಯಲ್ ತೋರಿಸಿದ ಟಿಬಿ ಡ್ಯಾಂ ಆಡಳಿತ ಮಂಡಳಿ ಅಧಿಕಾರಿಗಳು ಈ ಸಂದರ್ಭದಲ್ಲಿ ಮಾತನಾಡಿದ ಡಿಕೆ. ಶಿವಕುಮಾರ್ ರವರು ಎರಡೂವರೆ ಲಕ್ಷ ರೈತರ ಬದುಕಿನ ಜೀವನಾಡಿ ಇದಾಗಿದ್ದು ವಿರೋಧಿಗಳ ಟೀಕೆಗಳಿಗೆ ಉತ್ತರ ನೀಡಲಾಗಿದೆ ಎಂದರು.

ಗೇಟ್ ಅಳವಡಿಕೆ ಯಾವ ಸ್ಟೇಜ್ ಗೆ ಇದೆ ಅಂತ ನಾನು ನೋಡೋಕೆ ಬಂದಿದ್ದೆ ಇನ್ನೂ ಸ್ವಲ್ಪ ಕೆಲಸ ಇದೆ, ಮೇ. 15 ಕ್ಕೆ ಉದ್ಘಾಟನೆಗೆ ಸಾಧ್ಯಾನಾ ಅಂತ ಯೋಚನೆ ಇದೆ 10 ವರೆ ಟಿಎಂಸಿ ನೀರು ಇದೆ, 64: 34 ಅನುಪಾತದಲ್ಲಿ ಅನುದಾನವಿದೆ ಆಡಳಿತ ಮಂಡಳಿಗೆ ಫ್ರೀ ಹ್ಯಾಂಡ್ ಕೊಟ್ಟಿದ್ದೇವೆ ಎಂದು ತಿಳಿಸಿದರು.

ಗೇಟ್ ಅಳವಡಿಸುವಲ್ಲಿ ನಾವು ಮಧ್ಯಪ್ರವೇಶ ಮಾಡೋಲ್ಲ, ಈಡಿ ದೇಶಕ್ಕೆ ಇದು ಮಾದರಿಯಾಗಿದೆ. ದೇಶವೇ ಇಲ್ಲಿ, ನೋಡ್ತಿದೆ, ಅ. 10 –2024 ರಂದು ಗೇಟ್ ಕಿತ್ತೋಗಿತ್ತು ಆಗ ನಾನು ಮರುದಿನ ಬಂದೆ, ನೋಡಿದೆ. ಕನ್ಹಯ್ಯ ನಾಯ್ಡು ಅವರ ಅಭಿಪ್ರಾಯ ಪಡೆದು ಕೆಲಸ ಮಾಡಿ, ಅವರಿಗೆ ಗೌರವ ಕೊಟ್ಟಿದ್ದೇವೆ ಹೊಸ ಚೈನ್ ಅಳವಡಿಕೆಗೆ ನಾವು ಮುಂದಾಗುತ್ತೇವೆ ಚೆನ್ನೈ ನಲ್ಲಿನ ಸಂಸ್ಥೆಗೆ ಚೈನ್ ತಯಾರಿಕೆಗೆ ಕೊಟ್ಟಿದ್ದೇವೆ, ಹೊಸ ಚೈನ್ ಮೇ. 07 ರಂದು ಬರ್ತದೆ, ಮೇ ಎಂಡ್ ಗೆ ಕಂಪ್ಲೀಟ್ ಆಗುತ್ತದೆ ಎಂದರು.

ಮೇ. 15 ಕ್ಕೆ ಕಂಪ್ಲೀಟ್ ಮಾಡಿ ಅಂತ ನಾನು ಹೇಳಿದಿವಿ ಕಾರ್ಯ ಪ್ರಗತಿಯಲ್ಲಿದ್ದರೂ ವಿಪಕ್ಷದವರು ಮಾತಾಡ್ತಾರೆ, ಅವರು ಮಾತಾಡಲಿ, ಟೀಕಿಸಲಿ ಅಭ್ಯಂತರವಿಲ್ಲ ಸರ್ಕಾರ ಜಲಾಶಯದ ವಿಷಯದಲ್ಲಿ ಪ್ರಮಾಣಿಕವಾಗಿ ನಡೆದುಕೊಳ್ಳುತ್ತಿದೆ ಎಂದರು.

ಈಗಿನ ಗೇಟ್ ಅಳವಡಿಕೆಯು 50 ವರ್ಷದವರೆಗೆ ಏನು ಆಗೋಲ್ಲ ಮೇ. 15 ಕ್ಕೆ ಮತ್ತೆ ಬರುವೆ, ಮೂರು ನಾಲ್ಕು ಜಿಲ್ಲೆಯ ರೈತರನ್ನು ಕರೆದು ದೊಡ್ಡ ಕಾರ್ಯಕ್ರಮ ಮಾಡುತ್ತೇವೆ ಎಂದರು.

ತುಂಗಭದ್ರಾ ಜಲಾಶಯಕ್ಕೆ ನವಿಲೆ ಸಮಾನಾಂತರ ಜಲಾಶಯಕ್ಕೆ ಆಂಧ್ರಪ್ರದೇಶದ ಸಿಎಂ ಅವರು ಯಾ–ಕೋ ಟೈಂ ಕೊಡ್ತಿಲ್ಲ ಹೂಳು ತೆಗೆಯೋಕೆ ಡ್ಯಾಂ ಬೋರ್ಡ್ ನಲ್ಲಿ ಇಡ್ತಿವಿ ಪ್ರವೇಟ್ ನವರು ಬಂದು ಲಾಭ ಮಾಡಿಕೊಂಡ್ರೆ ಅಭ್ಯಂತರವಿಲ್ಲ ಮೂರ್ನಾಲ್ಕು ಯೋಜನೆ ಇದೆ, ಸರಿ ಮಾಡ್ತೇವೆ ಆಣೆಕಟ್ಟು ಎತ್ತರ ಮಾಡೋ ಪ್ರಶ್ನೆ ಇಲ್ಲ ರೈತರು ತ್ಯಾಗ ಮಾಡಿದಾರೆ, ಅವರಿಗೆ ಕೋಟಿ ವಂದನೆಗಳು ಎಂದರು.

ವಿಜಯನಗರ ಕಡತ ವಿಲೇವಾರಿ ಬಾಕಿ ವಿಚಾರ ಕುರಿತು ಮಾತನಾಡಿದ ಅವರು, ನಾನು ಯಾವ್ಯಾವ ಡಿಪಾರ್ಟ್ಮೆಂಟ್ ನಲ್ಲಿವೆ ಅಂತ ಕೇಳಿದಿನಿ ಅವನ್ನೆಲ್ಲಾ ವಿಲೇವಾರಿ ಮಾಡೋಕೆ ಹೇಳ್ತೆನೆ ಈಗ ನೀವು ಗಮನಕ್ಕೆ ತಂದಿದಿದ್ದಿರಿ, ವರದಿ ತರಿಸಿಕೊಂಡು ನಾನು ಅದನ್ನು ವಿಲೇವಾರಿಗೆ ಮುಂದಾಗುತ್ತೇನೆ ಎಂದರು.

**ಶೃಂಗೇರಿ ಕುರಿತು**

ಚಿಕ್ಕಮಗಳೂರಿನ ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಏಣಿಕೆಯಲ್ಲಿ ದೊಡ್ಡ ಪ್ರಮಾಣ ಕ್ರೈಂ ನಡೆದಿದೆ ಅಧಿಕಾರಿಗಳನ್ನು ಹಿಡಿದು ಟ್ಯಾಂಪರಿಂಗ್ ಆಗಿದೆ 200 ಕ್ಕೂ ಅಧಿಕ ಮತ ಪತ್ರ ತಿದ್ದಿದ್ದಾರೆ ಕೌಂಟಿಂಗ್ ಆದಾಗ ಸಹಿ ಮಾಡಿದ್ದರು


ಸಂಚು ಮಾಡಿ ಪೋಸ್ಟಲ್ ಟ್ಯಾಂಪರಿಂಗ್ ಮಾಡೋದು ದೇಶ ಅವಮಾನ ಮಾಡಿದೆ ನಮ್ಮ ಎಂಎ ಬಂದಿರುವ ಮತಗಳನ್ನು ತಿದ್ದಿದ್ದಾರೆ ಎಂದು ಆರೋಪಿಸಿದರು. ಈ ಬಗ್ಗೆ ತನಿಖೆಯಾಗಬೇಕು ಜಯನಗರದಲ್ಲಿಯೂ ಈ ರೀತಿ ಟ್ಯಾಂಪರಿಂಗ್ ಮಾಡಿದ್ದಾರೆ ಕಾನೂನು ತನಿಖೆ ಮಾಡುತ್ತವೆ ಪ್ರಜಾಪ್ರಭುತ್ವಕ್ಕೆ ಇದು ಅವಮಾನ ಎಂದರು.

ಈ ಸಂದರ್ಭದಲ್ಲಿ ಸಚಿವರಾದ ಈಶ್ವರ ಖಂಡ್ರೆ, ಕೆ.ಹೆಚ್.ಮುನಿಯಪ್ಪ, ಶಿವರಾಜ ತಂಗಡಗಿ, ಎನ್. ಎಸ್.ಭೋಸರಾಜ್, ಸಂಸದರಾದ ಈ.ತುಕಾರಾಂ, ರಾಜಶೇಖರ ಹಿಟ್ನಾಳ್, ಶಾಸಕರಾದ ಹೆಚ್.ಆರ್. ಗವಿಯಪ್ಪ, ಡಾ.ಟಿ.ಶ್ರೀನಿವಾಸ, ಅನ್ನಪೂರ್ಣ ತುಕಾರಾಂ, ಮಾಜಿ ಸಚಿವ ಅಮರೇಗೋಡ ಬಯ್ಯಾಪುರ, ಡಿಸಿ ಕವಿತಾ ಮನ್ನಿಕೇರಿ, ಎಸ್ಪಿ ಎಸ್.ಜಾಹ್ನವಿ ಮೊದಲಾದವರು ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)

# ಸೌದತ್ತಿ ಎಲ್ಲಮ್ಮ ದರ್ಶನಕ್ಕೆ ಪಾದಯಾತ್ರೆ ಕೈಗೊಂಡ ಭಕ್ತರು



**ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಮೇ.3: ಪಟ್ಟಣದ ಶ್ರೀ ಎಲ್ಲಮ್ಮ ದೇವಿಯ ಭಕ್ತರು ಬೆಳಗಾವಿ ಜಿಲ್ಲೆಯ ಪ್ರಸಿದ್ಧ ಕ್ಷೇತ್ರ, ಸೌದತ್ತಿ ಶ್ರೀ ಎಲ್ಲಮ್ಮ ದೇವಿಯ ದರ್ಶನಕ್ಕೆ ಭಕ್ತರು ಪಾದಯಾತ್ರೆಕೈಗೊಂಡರು. ಶನಿವಾರ ಕುರುಗೋಡಿನ ಶ್ರೀ ದೊಡ್ಡಬಸವೇಶ್ವರ ದೇವಸ್ಥಾನದಿಂದ ಶಿವಶರಣೆ ರೇಣುಕಾ ಯಲ್ಲಮ್ಮದೇವಿಗೆ ಹರಕೆ ಹೊತ್ತು ಬೆಳಗಾವಿ ಜಿಲ್ಲೆಯ ಸವದತ್ತಿಗೆ ಪಾದಯಾತ್ರೆಕೈಗೊಂಡ ಸಿಂಧವಾಳ ಹೊನ್ನಪ್ಪ, ಯಲ್ಲಮ್ಮವ್ವ, ಕಾಳಿಂಗಪ್ಪ, ಮೌನೇಶ, ಪಂಡಿತ ಸೇರಿ ಇತರರು ತಮ್ಮ ಪಾದಯಾತ್ರೆಕೈಗೊಂಡ ಕುರಿತು ಮಾಹಿತಿ ನೀಡಿ, ಬೆಳಗಾವಿ ಜಿಲ್ಲೆಯ ಸೌದತ್ತಿಯ ಎಲ್ಲಮ್ಮ ಕರ್ನಾಟಕದ ತುಂಬಾ ಎಲ್ಲಾ ಜಿಲ್ಲೆಗಳಲ್ಲೂ ತನ್ನ ಭಕ್ತರನ್ನು ಹೊಂದಿದ್ದಾಳೆ. ವಿವಿಧ ಜಿಲ್ಲೆಗಳಿಂದ ಬೇಸಿಗೆಯಲ್ಲಿ ಎಂತಹ ಬಿಸಿಲನ್ನುಲೆಕ್ಕಿಸದೆ ದೇವಿಯ ಮೇಲೆ ಭಕ್ತಿಯಿಂದ ನೂರಾರು ಮೈಲಿ ನಡೆದುಕೊಂಡು ಹೋಗಿ ತಾಯಿಯ ದರ್ಶನ ಪಡೆದಕೊಂಡು ಬರುತ್ತೇವೆ. ಬೆಳಗಿನ ಜಾವದಲ್ಲಿ ಮತ್ತು ಸಂಜೆ–ಯ ಹೊತ್ತು ಹೆಚ್ಚು ನಡೆಯುತ್ತೇವೆ. ಬಿಸಿಲು ಹೆಚ್ಚಾದರೆ ಮರಗಳ ಕೆಳಗೆ ವಿಶ್ರಾಂತಿ ಪಡೆಯುತ್ತೇವೆ. ದೇವಿಯ ಆಶೀರ್ವಾದದಿಂದ ನಮಗೆ ಎಲ್ಲವೂ ಒಳಿತಾಗುತ್ತಿವೆ ಎಂದು ತಿಳಿಸಿದರು. ಸ್ಥಳೀಯ ಭಕ್ತರು ಪಾದಯಾತ್ರೆ ಕೈಗೊಂಡವರಿಗೆ ಶುಭ ಹಾರೈಸಿ ಬಿಳ್ಕೊಟ್ಟರು

# ಪಾಲಿಕೆಯ ಈ ಅರವಟ್ಟಿಗೆಯಲ್ಲಿ ನೀರಿಲ್ಲ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಮೇ.3: ನಗರದ ಇಂದಿರಾ (ಸಂಗಂ) ಸರ್ಕಲ್ ನಲ್ಲಿ ಅರವಟ್ಟಿಗೆ ಇದೆ. ಆದರೆ ನೀರಿಲ್ಲ. ಬಿರು ಬೇಸಿಗೆಯಿಂದ ಬಾಯಾರಿ ಬರುವ ಜನತೆ ನೀರಿಲ್ಲದ್ದನ್ನು ಕಂಡು ನಿರಾಶೆಯಿಂದ ಹೋಗಬೇಕಿದೆ.

ನಗರದಲ್ಲಿ ಬಿಸಿಲಿನ ತಾಪ ಹೆಚ್ಚಿದೆಂದು ಮಹಾನಗರ ಪಾಲಿಕೆಯವರು ಸಾವಿರಾರು ರೂ ವೆಚ್ಚ ಮಾಡಿ, ನಗರದ ಹಲವಡೆ ಇಂತಹ ಅರವಟ್ಟಿಗೆಗಳನ್ನು ತೆರೆದು ಎರೆಡು ನೀರಿನ ಗಡಿಗೆ ಇಟ್ಟು, ಅವುಗಳಿಗೆ ಗೋಣಿ ತಟ್ಟು ಸುತ್ತಿ ನೀರುಹಾಕಿ ಜನತೆ

ತಂಪಾದ ನೀರು ಕುಡಿಯುವಂತೆ ಮಾಡಿದ್ದಾರೆ. ದಿನ ನಿತ್ಯ ನೀರು ಹಾಕಲಾಗುತ್ತಿತ್ತು.

ಆದರೆ ಇಲ್ಲಿ ಕಳೆದ ಎರೆಡು ದಿನದಿಂದ ನೀರು ಹಾಕಿಲ್ಲ. ನೀರು ಬಯಸಿ ಬರುವ ಜನತೆಗೆ ನಿರಾಶೆ ಇದೆ. ಇನ್ನಾದರೂ ಸಂಬಂಧಿಸಿದ ಪಾಲಿಕೆಯ ಅಧಿಕಾರುಗಳು ದಿನನಿತ್ಯ ಇಲ್ಲಿ ನೀರು ಹಾಕುವ ವ್ಯವಸ್ಥೆ ಆಗಬೇಕಿದೆಂದು ಜನತೆ ಆಗ್ರಹಿಸಿದ್ದಾರೆ.

# ದೇಶ ಕಟ್ಟುವ ಕೈಗಳಿಗೆ ಗೌರವ ಕೊಡಬೇಕು

**ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ**



ಮೇ.3: ದೇಶ ಕಟ್ಟುವ ಕೈಗಳಿಗೆ ಗೌರವ ಕೊಡಬೇಕು. ಶ್ರಮಕ್ಕೆ ತಕ್ಕ ವೇತನ ಮತ್ತು ಘನತೆ ಸಿಗಬೇಕು ಎಂದು ಪಟ್ಟಣದ ಪ್ರ.ಹಿ ಸಿ ನ್ಯಾಯಾಧೀಶರಾದ ಶಶಿಧರ ಎಂ ಗೌಡ ಹೇಳಿದರು. ಪಟ್ಟಣದ ತಾಪಂ ಸಭಾಭವನದಲ್ಲಿ ತಾಲೂಕಾ ಕಾನೂನು ಸೇವಾ ಸಮಿತಿ ನ್ಯಾಯವಾದಿಗಳ ಸಂಘ, ತಾಲೂಕಾ ಆಡಳಿತ, ಹಾಗೂ ಕಾರ್ಮಿಕ ಇಲಾಖೆ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ಕಾರ್ಮಿಕ ದಿನಾಚಾರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಾರ್ಮಿಕ ನಿರೀಕ್ಷಕರಾದ ಐ ಎಚ್ ಇನಾಂದಾರ್ ಮಾತನಾಡಿ, 14 ವರ್ಷದೊಳಗಿನ ಮಕ್ಕಳು ಯಾವುದೇ ಕೆಲಸ ಮಾಡಿಸುವುದು ಅಪರಾಧ. ಇದಕ್ಕೆ ಜೈಲು ಹಾಗೂ ದಂಡದ ಶಿಕ್ಷೆ ಇರಲಿದೆ ಎಂದು ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ಸವಿಸ್ತಾರವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ವಾಯ್ ಎಸ್ ಸೋಮನಕಟ್ಟಿ, ತಾಪಂ ಇಓ ವೆಂಕಟೇಶ ವಂದಾಲ, ಕಾರ್ಮಿಕರ ಕಾಯ್ದೆ ಕುರಿತಾಗಿ ನ್ಯಾ ಕೆ.ಜಿ ಕಂದಗಲ್ ಮಾತನಾಡಿದರು. ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿ ವೀರಣ್ಣ.ಬ.ಮರ್ತುರ, ಸ.ಸ ಅಭಿಯೋಜಕ ಬಾಲಚಂದ್ರ ಪೂಜಾರಿ, ನ್ಯಾ. ವಾಯ್.ಎನ್ ಲಂಕೇನವರ, ಮಿರಾಜುದ್ದೀನ್ ಮೈತ್ರಿ, ಬಂದೇನವಾಜ್ ಗಣಿ, ಶಶಿಧರ ಪಾಟೀಲ ಸೇರಿದಂತೆ ಅನೇಕ ಕಾರ್ಮಿಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಅನೇಕ ಕಟ್ಟಡ ಹಾಗೂ ಹೋಟೆಲ್ ಕಾರ್ಮಿಕರನ್ನು ಸನ್ಮಾನಿಸಲಾಯಿತು.

> **ಮಕ್ಕಳನ್ನು ಶಾಲೆಗೆ ಕಳುಹಿಸಿ**
>
> ಬಾಲ ಕಾರ್ಮಿಕ ಕಂಡು ಬಂದರೆ 1098 ಮಕ್ಕಳ ಸಹಾಯವಾಣಿಗೆ ಕರೆ ಮಾಡಿ. ಮಕ್ಕಳನ್ನು ಶಾಲೆಗೆ ಕಳುಹಿಸಿ ದೇಶವನ್ನು ಬೆಳಗಿಸಿ.
>
> **ಐ ಎಚ್ ಇನಾಂದಾರ್, ಕಾರ್ಮಿಕ ನಿರೀಕ್ಷಕರು.**

# ಬಿಸಿಲಿನ ತಾಪ ತಾಳದೇ ಕೆಳಗೆ ಬಿದ್ದ ವ್ಯಕ್ತಿ ತಲೆಗೆ ಗಂಭೀರ ಗಾಯ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಮೇ.3: ನಗರದ ಓಪಿಡಿ ಆಸ್ಪತ್ರೆಯಲ್ಲಿ ರಕ್ತಪರೀಕ್ಷೆ ವರದಿ ಪಡೆಯಲು ಬೆಳಗ್ಗಿನಿಂದಲೇ ಕಾಯುತ್ತಿದ್ದ ವ್ಯಕ್ತಿಯೊಬ್ಬರು ಬಿಸಿಲಿನ ತಾಪ ಸಹಿಸದೇ ಅಸ್ವಸ್ಥರಾಗಿ ಕೆಳಗೆ ಬಿದ್ದ ಪರಿಣಾಮ ತಲೆಗೆ ಗಂಭೀರ ಗಾಯವಾದ ಘಟನೆ ನಡೆದಿದೆ.

ನಗರದ 105ನೇ ಎಚ್.ಐ.ವಿ ಪರೀಕ್ಷಾ ಕೇಂದ್ರದ ಬಳಿ ಈ ಘಟನೆ ಸಂಭವಿಸಿದೆ. ಬೆಳಿಗ್ಗೆಯಿಂದಲೇ ಬ್ಲಡ್ ರಿಪೋರ್ಟ್ ಪಡೆಯಲು ಕಾಯುತ್ತಿದ್ದ ವ್ಯಕ್ತಿ ತೀವ್ರಬಿಸಿಲಿನಿಂದ ಅಸ್ವಸ್ಥರಾಗಿ ನೆಲಕ್ಕುರುಳಿದ್ದು, ತಲೆಗೆ ಗಾಯವಾಗಿ ಭಾರಿ ರಕ್ತಸ್ರಾವವಾಗಿದೆ ಎಂದು ತಿಳಿದುಬಂದಿದೆ.

ಘಟನೆಯ ತಕ್ಷಣ ಸ್ಥಳದಲ್ಲಿದ್ದವರು ಗಾಯಾಳುವಿಗೆ ಸಹಾಯ ಮಾಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿದ್ದಾರೆ.

ಈ ಘಟನೆಯನ್ನು ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವೆಂದು ಸಾರ್ವಜನಿಕರು ಆರೋಪಿಸಿದ್ದು, ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆಗಳ ಕೊರತೆ, ಕಾಯುವವರಿಗೆ ನೆರಳಿನ ವ್ಯವಸ್ಥೆ ಇಲ್ಲದಿರುವುದು ಇಂತಹ ಘಟನೆಗಳಿಗೆ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗಾಯಗೊಂಡು ವ್ಯಕ್ತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಟ್ರಾಮಾ ಕೇರ್ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ತಿಳುದು ಬಂದಿದೆ.

ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುವ ಸಾಧ್ಯತೆ ಇದ್ದು, ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ.

# ಅಲ್ಪಸಂಖ್ಯಾತರ ವಸತಿ ಶಾಲೆಗೆ ಶೇ.100 ಫಲಿತಾಂಶ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಮೇ.3: ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗೆ ಒಳಪಟ್ಟಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಕ್ಕೆ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಅಭಿನಂದಿಸಿದ್ದಾರೆ.

ಅಲ್ಪಸಂಖ್ಯಾತಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ ಮಾದರಿಯ ಶಾಲೆಗಳಾದ ಬಾದಾಮಿ(ಶೇ.100), ಜಮಖಂಡಿ(ಶೇ.98), ಇಳಕಲ್(ಶೇ.97.77), ಬನಹಟ್ಟಿ(ಶೇ. 97.05, ಮುಧೋಳ(ಶೇ.96.15), ತೇರದಾಳ(ಶೇ.96), ಬೀಳಗಿ (ಶೇ.95.65), ಸೆಕ್ಟರ್ ನಂ 13 ನವನಗರ (ಶೇ. 95.83), ಸೆಕ್ಟರ್ ನಂ.38 ನವನಗರ (ಶೇ. 95.12) ಈ ಎಲ್ಲಾ ಶಾಲೆಯ ವಿದ್ಯಾರ್ಥಿಗಳು ಈ ಬಾರಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಅಲ್ಲದೇ ಎಪಿಜೆ ಅಬ್ದುಲ ಕಲಾಂ ಸಿ.ಬಿ.ಎಸ್.ಸಿ ಹಾಗೂ ನವನಗರ, ಗುಡೂರ ಎಸ್.ಸಿ (ಹುನಗುಂದ), ಬೂದಿಹಾಳ ಎಸ್ಎ(ಬೀಳಗಿ), ಜಮಖಂಡಿ, ತೇರದಾಳ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳು ಮತ್ತು ಜಿಲ್ಲೆಯ ಐದು ಮೇಟ್ರಿಕ್ ಪೂರ್ವ ಅಲ್ಪಸಂಖ್ಯಾತ ವಸತಿ ನಿಲಯದ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಾರೆ. ಈ ಬಾರಿ ಈ ಎಲ್ಲಾ ಶಾಲೆಗಳಿಗೆ ವಿಶೇಷ ಬೋಧನಾ ಕ್ರಮಕ್ಕೆ ಸೂಚಿಸಲಾಗಿತ್ತು. ಪ್ರತಿದಿನ ಒಂದು ಶಾಲೆಗೆ ಭೇಟಿ ನೀಡಿ ಅಲ್ಲಿಯ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಬೇಕೆಂಬ ಉತ್ಸಾಹ ಮೂಡಿಸಿದ್ದರ ಫಲವಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಮ್ಮ ನೀರಿಕ್ಷೆಗೆ ತಕ್ಕಂತೆ ಈ ಬಾರಿ ಸಾಧನೆ ಮಾಡಿದ್ದು, ಸಂತಸ ತಂದಿದೆ ಎಂದು ಪಟ್ಟಣಶೆಟ್ಟಿ ಹೇಳಿದ್ದಾರೆ.

# ಮಕ್ಕಳಿಗೆ ಶಿಕ್ಷಣ ಮತ್ತು ಸಂಸ್ಕಾರ ಅಗತ್ಯ

**ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ**




ಮೇ.3: ಮಕ್ಕಳಿಗೆ ಶಿಕ್ಷಣ ಮತ್ತು ಸಂಸ್ಕಾರಕೊಡುವ ಜೊತೆಗೆ ಮಠಗಳಿಗೆ ಹೋಗುವ ಪರಂಪರೆಯನ್ನು ಮಕ್ಕಳಿಗೆ ಪಾಲಕರು ಕಲಿಸಬೇಕಾದ ಅವಶ್ಯಕತೆ ಇದೆ ಎಂದು ಅಭಿನವ ಸಂಗನಬಸವಶಿವಾಚಾರ್ಯ ಸ್ವಾಮೀಜಿ ಪಾಲಕರಿಗೆ ಕಿವಿ ಮಾತು ಹೇಳಿದರು. ತಾಲೂಕಿನ ಸುಕ್ಷೇತ್ರ ಮನಗೂಳಿ ಹಿರೇಮಠದ ಶ್ರೀ ಶತಾಯುಷಿ ಷ ಬ್ರ ಸಂಗನಬಸವ ಶಿವಾಚಾರ್ಯ ಮಹಾಸ್ವಾಮಿಜಿಯವರ 43ನೇ ಪುಣ್ಯ ಸ್ಮರಣೋತ್ಸವ ಹಾಗೂ ಶ್ರೀ ಶ್ರೀ ಶ್ರೀ 2008 ಜಗದ್ಗುರು ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮಿಜಿಯವರ 13ನೇ ಯಾತ್ರೆ ಮಹೋತ್ಸವ ನಿತ್ಯವಾಗಿ ಶಿವಶರಣೆ ಅಕ್ಕಮಹಾದೇವಿ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಅವರು ಮಾತನಾಡಿದರು. ಪುರಾಣಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ, ಜೆಡಿಎಸ್ ಮುಖಂಡ ಅಪ್ಪುಗೌಡ ಪಾಟೀಲ, ಸಮಾಜದಲ್ಲಿ ಮಠಗಳ ಕೊಡುಗೆ ಅಪಾರವಾಗಿದ್ದು. ಟಿವಿಯಿಂದ ಮನುಷ್ಯನಿಗೆ ನೆಮ್ಮದಿ ಇಲ್ಲ. ಪುರಾಣ ಪ್ರವಚನಯಿಂದ ನೆಮ್ಮದಿ ಇದೆ ಎಂದು ಹೇಳಿದರು. ಮುಖಂಡ ಚಂದ್ರಶೇಖರಗೌಡ ಪಾಟೀಲ ಮಾತನಾಡಿ, ಈ ಭಾಗದಲ್ಲಿ ಇತಿಹಾಸವನ್ನು ಹೊಂದಿರುವ ಹಿರೇಮಠ ಹಿಂದಿನ ಲಿಂ. ಗುರು ಸಂಗನಬಸವ ಶಿವಾಚಾರ್ಯರು ಬೇಡಿದ ಭಕ್ತರಿಗೆ ಬೇಡಿದ ವರವನ್ನು ನೀಡಿದವರಾಗಿದ್ದರು. ಪಟ್ಟಣ ಪಂಚಾಯತ್ ಹಂಗಾಮಿ ಅಧ್ಯಕ್ಷ ಶೇಖಪ್ಪಗೌಡ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಮಾಮಲ್ಲಪ್ಪ ತಪಶೆಟ್ಟಿ, ಈರಪ್ಪ ಹುಣಸಿಕಟ್ಟಿ, ಶರಣಯ್ಯ ಶಾಸ್ತ್ರಿಗಳು, ಕುಮಾರ್ ಬಾವಿಮನಿ. ಬಸನಗೌಡ ಬಿರಾದಾರ ಸೇರಿದಂತೆ ಅನೇಕರು ಹಾಜರಿದ್ದರು.

# ಪ್ರಾಥಮಿಕ ಶಿಕ್ಷಕರ ಸಂಘದ ನಿರ್ದೇಶಕರ ಚುನಾವಣೆ

## ಬಸವರಾಜ್ ದಾನ ನೇತೃತ್ವದ ಸ್ವಾಭಿಮಾನಿ ಶಿಕ್ಷಕರ ಪೆನಾಲ್ ಗೆ ಭರ್ಜರಿ ಗೆಲುವು



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಮೇ.3: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶುಕ್ರವಾರ ನಡೆದ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ನಿರ್ದೇಶಕರ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಶಿಕ್ಷಕ ಬಸವರಾಜ್ ದಾನ ನೇತೃತ್ವದ ಸ್ವಾಭಿಮಾನಿ ಶಿಕ್ಷಕರ ಪೆನಾಲ್ ನ ನಿರ್ದೇಶಕರು ಭರ್ಜರಿ ಗೆಲುವು ಸಾಧಿಸಿದ್ದಾರೆ. ಸಂತೋಷ್ ವಾಡೆ ನೇತೃತ್ವದ ಸ್ವಾಮಿ ವಿವೇಕಾನಂದ ಪೇನಲ್ ಮತ್ತು ಬಸವರಾಜ ದಾನ ನೇತೃತ್ವದ ಸ್ವಾಭಿಮಾನಿ ಪೇನಲ್ ಗಳ ಮಧ್ಯ ಭಾರಿ ಪೈಪೋಟಿ ನಡೆದಿದೆ. ಒಟ್ಟು 13 ನಿರ್ದೇಶಕರನ್ನು ಆಯ್ಕೆ ಮಾಡಬೇಕಿತ್ತು, ಅವರಲ್ಲಿ ಎರಡು ಪೇನಲ್ ಅಭ್ಯರ್ಥಿಗಳು ಹಾಗೂ ಓರ್ವ ಸ್ವತಂತ್ರ ಅಭರ್ಥಿ ಸೇರಿ 27 ಜನರು ಕಣದಲ್ಲಿದ್ದರು. ಸಾಮಾನ್ಯ ಕ್ಷೇತ್ರಕ್ಕೆ 9 ನಿರ್ದೇಶಕರು, ಮಹಿಳಾ ಕ್ಷೇತ್ರಕ್ಕೆ 4 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆದಿದೆ. ಇವರಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ವಾಭಿಮಾನಿ ಶಿಕ್ಷಕರ ಪೆನಾಲ್ ನ ಬಸವರಾಜದಾನ, ದತ್ತು ಮೂದಾಳೆ, ಸತ್ಯವಾನ ಕಾಂಬಳೆ, ಸುಧಾಕರ್ ಗಾಯಕವಾಡ, ರಾಮರಾವ್ ಬಾನಾ, ಗಣಪತಿ ಭಕ್ತ 6 ನಿರ್ದೇಶಕರು ಹಾಗು ಸ್ವಾಮಿ ವಿವೇಕಾನಂದ ಪೇನಲ್ ನ ಸಂತೋಷಕುಮಾರ ವಾಡೆ, ಚಂದ್ರಕಾಂತ ತಳವಾಡೆ, ಸೂರ್ಯಕಾಂತ್ ಸುಂಟೆ 3 ನಿರ್ದೇಶಕರು ವಿಜಯ ಸಾಧಿಸಿದರೆ, ಮಹಿಳಾ ಕ್ಷೇತ್ರದಿಂದ ಸ್ವಾಭಿಮಾನಿ ಪೇನಲ್ ನ ನಿರ್ಮಲ ಚಲವ, ಅನಿತಾ ಎಸ್ ಮುಧೋಳೆ 2 ನಿರ್ದೇಶಕರು ಹಾಗು ಸ್ವಾಮಿ ವಿವೇಕಾನಂದ ಪೇನಲ್ ನ ರತ್ನಮ್ಮ ಹಾಲಕುಡೆ, ಅನ್ನಪೂರ್ಣ ಮೇತ್ರೆ 2 ನಿರ್ದೇಶಕರು ವಿಜಯ ಸಾಧಿಸಿದ್ದಾರೆ, ಹೀಗಾಗಿ ಒಟ್ಟು 13 ನಿರ್ದೇಶಕರಿರುವ ಸಂಘದಲ್ಲಿ ಸ್ವಾಭಿಮಾನಿ ಪೇನಲ್ ನಾ 8 ನಿರ್ದೇಶಕರು ಹಾಗು ಸ್ವಾಮಿ ವಿವೇಕಾನಂದ ಪೇನಲ್ ನ 5 ನಿರ್ದೇಶಕರು ವಿಜಯ ಸಾಧಿಸಿದ್ದಾರೆ. ಹೀಗಾಗಿ ಸ್ವಾಭಿಮಾನಿ ಶಿಕ್ಷಕರ ಪೆನಾಲ್ ಗೆ ಸ್ಪಷ್ಟ ಬಹುಮತ ದೊರೆತಿದ್ದು ಮುಂದಿನ ಅಧ್ಯಕ್ಷರಾಗಿ ಬಸವರಾಜ್ ದಾನ ಚುಕ್ಕಾಣಿ ಹಿಡಿಯುವಲ್ಲಿ ಯಾವುದೇ ಅನುಮಾನ ವಿಲ್ಲ ಎನ್ನುವುದು ಎಲ್ಲ ಶಿಕ್ಷಕ ಬಾಂಧವರ ಅಭಿಮತವಾಗಿದೆ. ಚುನಾವಣೆ ಫಲಿತಾಂಶ ಹೊರಬೀಳುತ್ತಿದ್ದಂತೆ ಸ್ವಾಭಿಮಾನಿ ಶಿಕ್ಷಕರ ಪೆನಾಲ್ ಅಭ್ಯರ್ಥಿಗಳು ಚನ್ನಬಸವ ಆಶ್ರಮ, ಬೌಧ ಮಂದಿರ, ಭಾಲ್ಕೇಶ್ವರ ಮಂದಿರಗಳಿಗೆ ತೆರಳಿ ದರ್ಶನ ಪಡೆದು ವಿಜಯೋತ್ಸವ ಆಚರಿಸಿದರು. ಈ ಸಂಧರ್ಭದಲ್ಲಿ ಗೋವಿಂದರಾವ್ ಬಿರಾದಾರ, ದತ್ತಾತ್ರಿ ಕಾಟ್ಕರ್, ಸಂದೀಪ್ ಉಮಾಜೀ, ಕಾಶಿನಾಥ ಚಲವ, ಬಾಲಾಜಿ ಬೈರಾಗಿ ಸೇರಿದಂತೆ ಹಲವು ಪ್ರಮುಖರು ಇದ್ದರು.

# ರಸಗೊಬ್ಬರ ಮಾರಾಟ ಪರವಾನಿಗೆ ಅಮಾನತ್ತು

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಮೇ.3: ರಸಗೊಬ್ಬರ ನಿಯಂತ್ರಣ ಕಾಯ್ದೆ 1985ರ ಆದೇಶ ಉಲ್ಲಂಘನೆಯಡಿ ತಾಲೂಕಿನ ಗದ್ದನಕೇರಿ ಕ್ರಾಸ್‌ನಲ್ಲಿರುವ ಬಸವೇಶ್ವರ ಟ್ರೇಡರ್ಸ್ ರಸಗೊಬ್ಬರ ಮಳಿಗೆಯ ಮಾರಾಟ ಪರವಾನಿಗೆಯನ್ನು ಅಮಾನತ್ತು ಮಾಡಿ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಸಕ್ಷಮ ಪ್ರಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ತಿಳಿಸಿದ್ದಾರೆ.

ಕಲಾದಗಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು ಇತ್ತೀಚೆಗೆ ಗದ್ದನಕೇರಿ ಕ್ರಾಸ್‌ನಲ್ಲಿರುವ ಬಸವೇಶ್ವರ ಟ್ರೇಡರ್ಸ್ ಮಳಿಗೆಯನ್ನು ತಪಾಸಣೆ ಮಾಡಿ, ರಸಗೊಬ್ಬರ ನಿಯಂತ್ರಣ ಆದೇಶ 1985 ಉಲ್ಲಂಘಿಸಿರುವುದಾಗಿ ಸಹಾಯಕ ಕೃಷಿ ನಿರ್ದೇಶಕರಿಗೆ ವರದಿ ಸಲ್ಲಿಸಿದ್ದರು. ಸದರಿ ವರದಿ ಮೇರೆಗೆ ಸಹಾಯಕ ಕೃಷಿ ನಿರ್ದೇಶಕರು ಹಾಗೂ ರಸಗೊಬ್ಬರ ಪರವಾನಿಗೆಯ ಸಕ್ಷಮ ಪ್ರಾಧಿಕಾರಿಗಳು ಪರವಾನಿಗೆ ಅಮಾನತ್ತು ಮಾಡಿ ಈ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಕೃಷಿ ಪರಿಕರ ಮಾರಾಟಗಾರರು ರಸಗೊಬ್ಬರ ವಿತರಣೆಯನ್ನು ರಸಗೊಬ್ಬರ ನಿಯಂತ್ರಣ ಆದೇಶದ ಮತ್ತು ಕೃಷಿ ಇಲಾಖೆಯ ನಿರ್ದೇಶನಗಳನ್ವಯ ಕೈಗೊಳ್ಳಲು ವಿನಂತಿಸಲಾಗಿತ್ತು. ರಸಗೊಬ್ಬರದ ವಿತರಣೆಗೆ ರೈತರ ಎಫ್ಐಡಿ ಕಡ್ಡಾಯಗೊಳಿಸಲಾಗಿದ್ದು, ಎಲ್ಲ ರೈತ ಬಾಂಧವರು ತಮ್ಮ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ತಮ್ಮ ಎಫ್ಐಡಿಗೆ ಎಲ್ಲ ಸರ್ವೆ ನಂಬರ್‌ಗಳನ್ನು ಜೋಡಣೆ ಮಾಡಿಟ್ಟುಕೊಳ್ಳುವಂತೆ ಈ ಮೂಲಕ ಕೋರಿಲಾಗಿದೆ.

ರಸಗೊಬ್ಬರ ಮಾರಾಟದಲ್ಲಿ ಯಾವದೇ ಅಕ್ರಮಗಳು ಮತ್ತು ಗರಿಷ್ಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕೃಷಿ ಇಲಾಖೆಯ ಗಮನಕ್ಕೆ ತರಲು ರೈತ ಬಾಂಧವರಿಗೆ ವಿನಂತಿಸಿದೆ. ರಸಗೊಬ್ಬರದ ಅಕ್ರಮ ದಾಸ್ತಾನು, ಸಾಗಾಣಿಕೆ ಮತ್ತು ಬಳಕೆ ಕಂಡುಬಂದಲ್ಲಿ ಅಂತಹವರ ವಿರುದ್ಧ ರಸಗೊಬ್ಬರ ನಿಯಂತ್ರಣ ಆದೇಶ 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆಯನ್ವಯ ಕಾನೂನು ಕ್ರಮ ಜರುಗಿಸಲಾಗುವುದೆಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

**CITATION**

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2314/2026.**

**Petitioners:**

1.Sheetal D/o Ganapati, Age: 33-yrs. Occu: House hold. R/o Village Markhal. Tq. Humnabad.

2.Smt. Anita D/o Ganapati W/o Prabhu, Age : 35-yrs. Occu: House hold R/o Markhal. Now at Hippargaon Tq. Humnabad.

3.Smt. Sunita D/o Ganapati W/o Sheshan, Age: 40-yrs. Occu: House hold R/o Markhal. Now at Sitalgera Tq. Humnabad.

**Respondent:**

The Registrar of Birth and Death through The Tahasildar Humnabad.

**Sub:- Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1 3 by namely LATE. GANAPATI S/O BEERAPPA, whowasdiedon15.04.2017atVillageMarkhal. Tq. Humnabad. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 06.06.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 02-06-2026

//By order of the court//

**Chief Ministerial Officer,**
**Prl. Civil Judge & JMFC Court,**
**Humnabad.**

# ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧವೇ ಇಲ್ಲ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಮೇ.3– ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಪಕ್ಷದ ವಿರೋಧವಿಲ್ಲ ಎಂದು ಜಿ.ಪಂ. ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಹೇಳಿದರು. ಶನಿವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಹೇಳಿದ್ದಾರೆ ಆದರೆ ಇದಕ್ಕೆ ಕಾಂಗ್ರೆಸ್ ವಿರೋಧವಿಲ್ಲ. ಮಹಿಳಾ ಮೀಸಲಾತಿ ಜೊತೆಗೆ ಲೋಕಸಭೆ ಮತಕ್ಷೇತ್ರ ವಿಂಗಡಣೆಗೆ ಕೈಹಾಕಿರುವುದು ಸರಿಯಲ್ಲ. ಅದನ್ನು ಕಾಂಗ್ರೆಸ್ ಒಪ್ಪುವುದಿಲ್ಲ ಎಂದರು.

ಲೋಕಸಭಾ ಮತ ಕ್ಷೇತ್ರ ವಿಂಗಡಣೆಯಲ್ಲಿ ಕೇಂದ್ರವು ತಾರತಮ್ಯ ಮಾಡಿದೆ. ಅದಕ್ಕಾಗಿ ನಮ್ಮದು ವಿರೋಧವಿದೆ. ಇದನ್ನು ವಿರೋಧಿಸಿದರೆ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧ ಮಾಡಿದೆ ಎಂದು ನಮ್ಮ ಮೇಲೆ ಗೂಬೆ ಕೂರಿಸುವಂತಹ ಕೆಲಸ ಮಾಡುತ್ತಿದೆ ಎಂದು ವೀಣಾ ಕಾಶಪ್ಪನವರ ಹೇಳಿದರು.

ಮುಂಬರುವ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಖಚಿತ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸುಮಿತ್ರಾ ಗುಳಬಾಳ, ರೇಣುಕಾ ನ್ಯಾಮಗೌಡ, ಮೇನಕಾ ಲಮಾಣಿ, ವಿಜಯಲಕ್ಷ್ಮೀ ಪೂಜಾರ, ಅನುರಾಧ ದೊಡಮನಿ ಮತ್ತಿತರರು ಇದ್ದರು.

## ಅತ್ಯಧಿಕ ಆಮ್ಲಜನಕ ಬಿಡುಗಡೆ ಮಾಡುವ ಅರಳಿ ವೃಕ್ಷ ಸಂರಕ್ಷಿಸಿ: ಕಾವಡಿ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಮೇ.3: ತಾಲೂಕಿನ ಮನ್ನಾಏಳ್ಳಿ ಗ್ರಾಮದ ಹೊರವಲಯದಲ್ಲಿರುವ ರೇಕುಳಗಿ ಮೌಂಟ್ ಮೇಲಿನ ಅನಾಥ ಪಿಂಡಕ್ ಬುದ್ಧ ವಿಹಾರದಲ್ಲಿ 2570ನೇ ವೈಶಾಖ ಬುದ್ಧ ಪೂರ್ಣಿಮೆ ಅಂಗವಾಗಿ ಗೌತಮ ಬುದ್ಧರ ಜಯಂತಿ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಪರಿಸರವಾದಿ ಶೈಲೇಂದ್ರ ಕಾವಡಿ ಅರಳಿ ವೃಕ್ಷ ಸಂರಕ್ಷಣಾ ಅಭಿಯಾನ ಕಾರ್ಯಕ್ರಮವನ್ನು ಬಿಕ್ಕುಗಳಾದ ರೇವತ್ ಭಂತೆ. ಧರ್ಮಪಾಲ್ ಭಂತೆ ಇವರ ಅಮೃತ ಹಸ್ತದಿಂದ ಅರಳಿ ಸಸಿಗಳನ್ನು ವಿತರಿಸಿ ಅಭಿಯಾನ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಯ ಆಯದ ಗ್ರಾಮಗಳಲ್ಲಿಹಗಲು ಇರುಳು ಎನ್ನದೆ ಶುದ್ಧ ಗಾಳಿ ಕೊಡುವ ಅರಳಿ ವೃಕ್ಷ ಅತ್ಯಧಿಕ ಆಮ್ಲಜನಕ ಬಿಡುಗಡೆ ಮಾಡುವ ವೃಕ್ಷವಾಗಿದೆ. ಈ ವೃಕ್ಷ ಸಂರಕ್ಷಣೆ ಅಭಿಯಾನ ಅಂಗವಾಗಿ ಜೂನ್ ತಿಂಗಳಲ್ಲಿ ಗ್ರಾಮದ ಬಂಜರಭೂಮಿ ಸೇರಿದಂತೆ ಇತರೆ ಸ್ಥಳಗಳಲ್ಲಿ ಸಸಿಗಳನ್ನು ನಡೆಸಲಾಗುವುದೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಧರ್ಮಪಾಲ್ ಬಂತೆ ಹಾಗೂ ಬುದ್ಧ ವಿಹಾರದ ಕಾರ್ಯಕರ್ತರು, ಭಕ್ತಾಧಿಗಳು ಉಪಸ್ಥಿತರಿದ್ದರು.



ಕೊಪ್ಪಳ :ಜಿಲ್ಲಾ ವಾರ್ತಾ ಅಧಿಕಾರಿಗಳಾದ ಗವಿಸಿದ್ದಪ್ಪ ಹೊಸಮನಿ ಸರ್ ಅವರಿಗೆ ಮಲ್ಲಮ್ಮ ನುಡಿ ದಿನಪತ್ರಿಕೆ ವಿತರಿಸಲಾಯಿತು.ಕೊಪ್ಪಳ ಜಿಲ್ಲಾ ವರದಿಗಾರರಾದ ವೀರಯ್ಯ ಹಿರೇಮಠ ಅವರು ಇದ್ದರು.

## ಪ್ರತಿಭಾವಂತ ಬಾಲಕಿಯ ಭವಿಷ್ಯದ ಓದಿಗೆ ಡಾ.ಲಕ್ಷ್ಮಿಕಾಂತ ನೆರವು



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ.3:ತಾಲ್ಲೂಕಿನ ಸೈದಾಪುರದ ನೀಲಹಳ್ಳಿ ಗ್ರಾಮದ ವಿದ್ಯಾರ್ಥಿ ಎಸ್ಎಸ್.ಎಲ್.ಸಿ ಯಲ್ಲಿ ಅಧ್ಬುತ ಸಾಧನೆಮಾಡಿದತಂಗಮ್ಮವಿದ್ಯಾರ್ಥಿಗೆ ಬಾಗಲಕೋಟ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ ಲಕ್ಷ್ಮಿಕಾಂತ್ ಒಂಟಿಪೀರ ಮತ್ತು ಸ್ನೇಹಿತ ಗೆಳೆಯರ ಬಳಗದ ವತಿಯಿಂದ ವಿದ್ಯಾರ್ಥಿಯ ಓದಿಗೆ 15000 ರೂ ಧನಸಹಾಯಮತ್ತು ಜೊತೆಗೆ ಅಧ್ಯಯನಮಾಡಲು ತರಗತಿಯ ಅವಶ್ಯಕ ಪಠ್ಯ ಪುಸ್ತಕ ವನ್ನು ಉಚಿತವಾಗಿನೀಡಿಗೌರವಿಸಿದರು.ಈ ಸಂದರ್ಭದಲ್ಲಿವಿದ್ಯಾರ್ಥಿ ಪೋಷಕರು ಹಾಗೂ ಡಾ ಸುನಂದಾ ಕುದುರಿ ಮತ್ತು ಸಕ್ಸಸ್ ಗ್ರಂಥಾಲಯದ ನಿರ್ದೇಶಕ ಮಾಳಪ್ಪ ಯಾದವ ಹಾಗೂಡಾ.ಲಕ್ಷ್ಮಿಕಾಂತ್ ಕುಟುಂಬ ಸದಸ್ಯರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕೇಂದ್ರದಲ್ಲಿ ಬಿಜೆಪಿ ಜನವಿರೋಧಿ ಸರಕಾರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಹಲವು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಮುಗಿದ ಬೆನ್ನಲ್ಲಿಯೇ ಕೇಂದ್ರ ಸರಕಾರ ವಾಣಿಜ್ಯ ಸಿಲಿಂಡರ್ ದರ ಏರಿಕೆ ಮಾಡುವ ಮೂಲಕ ತಾನು ಜನವಿರೋಧಿ ಸರಕಾರ ಎಂಬುದು ಮತ್ತೊಮ್ಮೆ ಸಾಬೀತು ಮಾಡಿದೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ. ಭೀಮಣ್ಣ ಮೇಟಿ ಹೇಳಿದರು.ಈಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಚುನಾವಣೆಗೆ ಮುನ್ನ ಸಿಲಿಂಡರ್ ದರ ಏರಿಕೆ ಮಾಡಿದರೇ ಸೋಲುತ್ತೇವೆ ಅಂದುಕೊಂಡು ಚುನಾವಣೆ ಮುಗಿದ ಬಳಿಕ ಬೆಲೆ ಹೆಚ್ಚಳ ಮಾಡಿದ್ದಾರೆ. ಇದು ಅತ್ಯಂತ ನಾಚಿಗೇಡು ಸಂಗತಿಯಾಗಿದೆ ಎಂದು ತಿಳಿಸಿದರು.ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಸಂಪೂರ್ಣವಾಗಿ ಬಡವರ ವಿರೋಧಿಯಾಗಿದೆ.ಏನಿದ್ದರೂ ಬಿಜೆಪಿ ಉದ್ಯಮಗಳ ಪರವಾಗಿ ಆಡಳಿತ ಮಾಡುತ್ತಿದೆ. ಇವರಿಗೆ ಶ್ರೀಮಂತರನ್ನು ಉದ್ದಾರಮಾಡುವುದೇ ಮೊದಲ ಗುರಿಯಾಗಿದೆ ಎಂದು ವಾಗ್ದಾಳಿ ನಡೆಸಿದರು. ಮೋಸ ಮಾಡುತ್ತಿರುವ ಮತ್ತು ಕುತಂತ್ರದಿಂದ ಆಡಳಿತ ನಡೆಸುತ್ತಿರುವ ಬಿಜೆಪಿಗೆ ಮುಂದಿನ ದಿನಗಳಲ್ಲಿ ಜನರು ತಕ್ಕಪಾಠ ಕಲಿಸುವುದರಲ್ಲಿ ಯಾವುದೇ ರೀತಿಯಿಂದ ಅನುಮಾನವಿಲ್ಲ.

## ರಾಷ್ಟ್ರ ಪ್ರೇಮಕ್ಕೆ ಸಾಕ್ಷಿ ಕವಲೂರಿನ ರಥೋತ್ಸವ

# ಭಕ್ತಿಯ ಒಗ್ಗಟ್ಟಿನಿಂದ ಜಾತ್ರೆ ಸಂಪನ್ನ


• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮೇ.3: ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮದಲ್ಲಿ ಶ್ರೀ ದುರ್ಗಾದೇವಿ ಪಾರ್ವತಿ ಪರಮೇಶ್ವರರ ಜಾತ್ರೆಯು ಮೂರು ದಿನಗಳ ಕಾಲ ಅದ್ದೂರಿಯಾಗಿ ಜರುಗಿ ನಿನ್ನೆ ಸಂಪನ್ನಗೊಂಡಿದ್ದು ಜಾತ್ರೆಯು ರಥೋತ್ಸವದಿಂದ ಪ್ರಾರಂಭವಾಗಿ ಮರುದಿನ ಮುಂಡರಗಿಯ ಜಗದ್ಗುರು ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳ ಅಡ್ಡಪಲ್ಲಕ್ಕಿ ಉತ್ಸವವು ಗ್ರಾಮದ ಪ್ರಮುಖ ಬೀದಿಯಲ್ಲಿ ಕುಂಭ ಮೆರವಣಿಗೆಯಲ್ಲಿ ಸಾಗಿ ಸಂಜೆ ಧರ್ಮಸಭೆ ಜರುಗಿತು.

ಶುಕ್ರವಾರ ಬೆಳಿಗ್ಗೆ ಸಾಮೂಹಿಕ ವಿವಾಹಗಳು ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ ಜರುಗಿತು. ಸಂಜೆ ಪಂಚ ಕಳಸದ ರಾಷ್ಟ್ರ ಪ್ರೇಮ ಸಾರುವ ಮಹಾ ರಥೋತ್ಸವ ಜರುಗಿತು. ನಿನ್ನೆ ದುರ್ಗಾದೇವಿ ಪಾರ್ವತಿ ಪರಮೇಶ್ವರರ ಮೂರ್ತಿ ಮೆರವಣಿಯು ಅತೀ ವಿಜೃಂಭಣೆಯಿಂದ ಸಾಗಿ ಮಧ್ಯಾಹ್ನ ಅಗ್ನಿಕೊಂಡ ಹಾಯ್ದು ದೇವಸ್ಥಾನ ಪ್ರವೇಶಿಸಿಸುವ ಮೂಲಕ ಜಾತ್ರೆ ಸಂಪನ್ನಗೊಂಡಿತು.

**ಸೇವೆ ಮತ್ತು ಭಕ್ತಿ:**

ಮೂರು ದಿನಗಳ ಕಾಲ ನಡೆದ ಜಾತ್ರೆಯಲ್ಲಿಊರಿನಹಿರಿಯರು, ಯುವಕರು,ಮಹಿಳೆಯರು ಗಣ್ಯರು ವಿವಿಧ ಕಾಯಕವನ್ನುಮಾಡುವ ಮೂಲಕ ಇತರರಿಗೂ ಮಾದರಿಯಾದರು. ಶಾಲಾ ಮಕ್ಕಳು, ಕಲಾವಿದರು,ಧಾರ್ಮಿಕ ಸೇವಾ ಕಾರ್ಯಕರ್ತರು, ಮಜಲಿನ ಮೇಳದವರು, ಮಂಗಳವಾದ್ಯದವರು,ದಾಸೋಹ ಸೇವೆ ಮಾಡಿದವರು ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ತಮ್ಮದೇಯಾದ ಭಕ್ತಿಯ ಸೇವೆ ಮಾಡಿದರು. ಜಾತ್ರಾ ನಿಮಿತ್ತವಾಗಿ ಅನ್ನ ಸಂತರ್ಪಣೆ ನಿರಂತರವಾಗಿ ನಡೆಯಿತು. ದೇವಸ್ಥಾನಕ್ಕೆದೀಪಾಲಂಕಾರ,ದೇವರ ಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ ನೈವೇದ್ಯ ಅರ್ಪಿಸಲಾಯಿತು. ಬೇಡಿಕೊಂಡ ಭಕ್ತರು ಹರಕೆ ತೀರಿಸಿಸರು.ಅಳವಂಡಿಯ ಶ್ರೀಮರುಳಾರಾಧ್ಯ ಶಿವಾಚಾರ್ಯರು, ಶ್ರೀ ಸಿದ್ದೇಶ್ವರ ಶಿವಾಚಾರ್ಯರು, ಕುಕನೂರಿನ ಶ್ರೀಮಹಾದೇವ ಸ್ವಾಮಿಗಳು, ಕಂಪಸಾಗರ ನಾಗಭೂಷಣ ಸ್ವಾಮಿಗಳು, ಬಿಸರಳ್ಳಿಯ ಶ್ರೀ ಶಿವಶಾಂತವೀರ ಸ್ವಾಮಿಗಳು ಆಶೀರ್ವಚನ ನೀಡಿದರು. ಕೆ.ಬಸವರಾಜ ಹಿಟ್ನಾಳ, ಬಸವರಾಜ ಕ್ಯಾವಟರ, ಗವಿಸಿದ್ದಯ್ಯ ಹಳ್ಳಿಕೇರಿಮಠ, ಅನಿತಾ ಕಿಲ್ಲೆದ ಸಿಪಿಐ ಚಂದ್ರು ಉಪ್ಪಾರ, ಪಿಎಸ್ ಐ ಪ್ರಹ್ಲಾದ ನಾಯಕ, ಬಸಯ್ಯ ಎಲಿಗಾರ, ತಿಮ್ಮಣ್ಣ ಸಿದ್ನೆಕೊಪ್ಪ,ಹೊನ್ನಕೇರಪ್ಪ ಮುಕ್ಕಣ್ಣನವರ,ಹನುಮಪ್ಪ,ಮಹಾಂತೇಶ ಸಿಂದೋಗಿಮಠ,ವೆಂಕಣ್ಣ ಹಳ್ಳಿ,ಶರಣಪ್ಪ ಯರಾಸಿ,ಕರಿಯಪ್ಪ ಎಮ್ಮಿ,ನಾಗಪ್ಪ ಕಲಾಲ,ಲಕ್ಷ್ಮಣ ಸಿದ್ನೇಕೊಪ್ಪ,ಲಕ್ಷ್ಮಣ ಗುಡಿ,ಭೀಮಪ್ಪ,ಜಯರಾಮ್,ಸಣ್ಣ ಯಂಕಪ್ಪ, ನಾಗಪ್ಪ,ನಾಗಪ್ಪ ವಡ್ಡರ ಗ್ರಾಮದ ಹಿರಿಯರು ಯುವಕರು ಉಪಸ್ಥಿತಿ ಇದ್ದರು



## ಜಯಪ್ರಕಾಶ್ ಕರ್ಜಗಿ ಅವರ ಕಾರ್ಯ ನೈಪುಣ್ಯತೆ ಮೆಚ್ಚಬೇಕು




• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.3: ವಿಶ್ವವಿದ್ಯಾಲಯ ಶೈಕ್ಷಣಿಕ ಸಾಧನೆ ಮತ್ತು ಭೌತಿಕ ಬೆಳವಣಿಗೆಗೆ ಇಂಜಿನಿಯರಿಂಗ್ ವಿಭಾಗ ಆಧಾರ. ಸ್ಥಳೀಯ ಇಂಜಿನಿಯರ್ ಜಯಪ್ರಕಾಶ್ ಕರ್ಜಗಿ ಮೃದು ಸ್ವಭಾವ ಮತ್ತು ಸದಾ ನಗುಮುಖದ ವ್ಯಕ್ತಿ. ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ವಿಶ್ವಾಸ ಉತ್ತಮ ಬಾಂಧವ್ಯ ಬೆಸೆದಿದ್ದರು. ಸುದೀರ್ಘ ಸೇವೆ ನಂತರ ನಿವೃತ್ತರಾಗುತ್ತಿದ್ದಾರೆ. ಅವರ ಪ್ರಾಮಾಣಿಕತೆ ಮತ್ತು ಕಾರ್ಯ ನೈಪುಣ್ಯತೆಯನ್ನು ಎಲ್ಲರೂ ಮೆಚ್ಚಿಕೊಳ್ಳಬೇಕು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕೈಲಾಸಭವನ ಅತಿಥಿಗೃಹದ ಸಭಾಂಗಣದಲ್ಲಿ ಇಂಜಿನಿಯರಿಂಗ್ ವಿಭಾಗದ ಸ್ಥಳೀಯ ಅಭಿಯಂತರ ಜಯಪ್ರಕಾಶ್ ಕರ್ಜಗಿ ಅವರು ನಿವೃತ್ತಿ ನಿಮಿತ್ತ ಸಿಬ್ಬಂದಿಗಳು, ಗುತ್ತಿಗೆದಾರರು ಮತ್ತು ಹಿತೈಷಿಗಳು ಆಯೋಜಿಸಿದ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ ಎಂ.ಟೆಕ್ ಪದವಿ ಪೂರೈಸಿ ಸ್ಥಳೀಯ ಇಂಜಿನಿಯರ್ ಹುದ್ದೆಯ ಪರಿಪೂರ್ಣ ಜ್ಞಾನ, ವೃತ್ತಿ ನೈಪುಣ್ಯತೆ, ನಿರ್ವಹಣೆ ಮತ್ತು ಕಾರ್ಯಪರತೆ ಬಗ್ಗೆ ಕಾಳಜಿಯಿತ್ತು. ವಿಶ್ವವಿದ್ಯಾಲಯದ ಅಗತ್ಯ ಕಟ್ಟಡ, ರಸ್ತೆ, ವಿದ್ಯುತ್, ಅಗತ್ಯ ಸೌಲಭ್ಯಗಳ ವಿತರಣೆ ಮತ್ತಯ ನಿರ್ವಹಣೆ ಮಾಡುತ್ತಿದ್ದರು ಎಂದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ರಮೇಶ್ ಲಂಡನಕರ್ ಮಾತನಾಡಿ ಇಂಜಿನಿಯರ್ ವಿಭಾಗದ ವಿವಿಧ ಶಾಖೆಗಳ ಸಿಬ್ಬಂದಿಗಳಿಗೆ ಒಗ್ಗಟ್ಟು ಮತ್ತು ಸಹನೆ ಬಹಳ ಮುಖ್ಯ. ವಿಭಾಗಗಳ ಕೊರತೆಯನ್ನು ಕಾಳಜಿಯಿಂದ ಮಾಡಬೇಕು. ಒತ್ತಡಗಳ ಮಧ್ಯೆ ಜಯಪ್ರಕಾಶ್ ಕರ್ಜಗಿ ಅವರು ವಾದವಿಲ್ಲದೆ ನೈಜವಾಗಿ ಪ್ರತಿಕ್ರಿಯೆ ನೀಡಿ ಕೆಲಸ ಪೂರೈಸುತ್ತಿದ್ದರು. ಅಧಿಕಾರಿಗಳಿಗೆ ಘಾಷಿ ಮಾಡದೆ ಕಾನೂನು ಪರಿಧಿಯಲ್ಲಿ ಸೇವೆ ಪೂರೈಸಿದ್ದಾರೆ. ಅವರ ಕೆಲಸ ಮತ್ತು ವ್ಯಕ್ತಿತ್ವವನ್ನು ಸಿಬ್ಬಂದಿಗಳು ಪಾಲಿಸಬೇಕು. ಕರ್ಜಗಿ ಅವರ ನಿವೃತ್ತಜೀವನ ಸಂತೋಷದಿಂದರಲಿ. ವಿಶ್ವವಿದ್ಯಾಲಯದ ಜೊತೆಗೆ ಅವರ ಸಂಪರ್ಕ ಮತ್ತು ಸಹಕಾರವಿರಲಿ ಎಂದರು.

ಮೌಲ್ಯಮಾಪನ ಕುಲಸಚಿವ ಡಾ. ಎನ್ ಜಿ. ಕಣ್ಣೂರು ಮಾತನಾಡಿ ವಿಶ್ವವಿದ್ಯಾಲಯದ ಬೆನ್ನೆಲುಬಾಗಿ ಇಂಜಿನಿಯರ್ ವಿಭಾಗ ಕೆಲಸ ಮಾಡುತ್ತದೆ.

ನಿವೃತ್ತರಾಗುತ್ತಿರುವ ಸ್ಥಳೀಯ ಅಭಿಯಂತರ ಜಯಪ್ರಕಾಶ ಕರ್ಜಗಿ ಅವರ ಕೆಲಸದಲ್ಲಿ ದೂರದೃಷ್ಟಿ ಮತ್ತು ಜಾಣ್ಮೆಯಿತ್ತು. ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಪೂರಕವಾಗಿ ಬಗೆಹರಿಸುತ್ತಿದ್ದರು. ಅವರ ವೃತ್ತಿ ಸೇರಿಕೆ ಮತ್ತು ನಿವೃತ್ತಿ ನಡುವಿನ ಸೇವೆ ಎಂದಿಗೂ ನೆನಪಿನಲ್ಲಿಳುತ್ತವೆ. ಅವರ ಮುಂದಿನ ಜೀವನದಲ್ಲಿ ನೆಮ್ಮದಿಯಿಂದಿರಲಿ ಎಂದರು.

ಸ್ಥಳೀಯ ಅಭಿಯಂತರ ಜಯಪ್ರಕಾಶ್ ಕರ್ಜಗಿ ಮಾತನಾಡಿದರು. ನಿವೃತ್ತ ಎಇಇ ವೆಂಕಟೇಶ್ ಮುದಗಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಇಇಗಳಾದ ಅಶೋಕ ಜಿಗಳಮಡಿ ಮತ್ತು ರಾಜಪ್ಪ ಜಿ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಇಂಜಿನಿಯರ್ ವಿಭಾಗದ ಸಿಬ್ಬಂದಿಗಳು, ಗುತ್ತಿಗೆದಾರರು, ಹಿತೈಷಿಗಳು ಮತ್ತು ಕುಟುಂಭವರ್ಗದವರಿದ್ದರು. ರಿಷಿಕುಮಾರ್ ಅತಿಥಿಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಸೂರ್ಯಕಾಂತ್ ಅಮರೆ ಪರಿಚಯಿಸಿದರು. ಶರಣುನಾವಿ ಗಾಣಗಾಪುರ ವಂದಿಸಿದರು.

ಜಯಪ್ರಕಾಶ್ ಕರ್ಜಗಿ ಅವರು ವಿಶ್ವವಿದ್ಯಾಲಯದ ಆಯೋಜನೆಯ ಘಟಿಕೋತ್ಸವ, ಯುವಜನೋತ್ಸವ, ಕ್ರೀಡೋತ್ಸವ, ವಿಚಾರಸಂಕಿರಣ, ಸಮ್ಮೇಳನಗಳು ಯಶಸ್ವಿಗೊಳ್ಳಲು ಶ್ರಮಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣದಲ್ಲಿ ಅವರ ಜಾಣತನ, ಕಾಳಜಿ ಮತ್ತು ಕ್ರಿಯಾಶೀಲತೆ ಕಾಣುತ್ತದೆ. ವಿಶ್ವವಿದ್ಯಾಲಯಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಭವನ ಮುಕುಟದಂತಿದೆ. ಕಟ್ಟಡ, ಮುಖ್ಯ ಸಭಾಂಗಣ, ಆಸನ ವ್ಯವಸ್ಥೆ ಚನ್ನಾಗಿದೆ. ಸ್ವಚ್ಛತೆ ಅಲ್ಲಿನ ಸೌಲಭ್ಯಗಳನ್ನು ಆಧುನೀಕರಿಸಿ ಮತ್ತಷ್ಟು ಹೈಟೆಕ್ ಮಾಡಬೇಕು. ಕಾನ್ಫರೆನ್ಸ್ ಕಾಂಪ್ಲೆಕ್ಸ ರೀತಿ ಸುಸಜ್ಜಿತಗೊಳಿಸಬೇಕು.

–ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ಕುಲಪತಿಗಳು

# ಮಲೇರಿಯಾ ಮುಕ್ತ ಮಾಡಲು ಸಾರ್ವಜನಿಕರ ಸಹಕಾರ ಮುಖ್ಯ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ



ಮೇ.3: ಪ್ರತಿಯೊಬ್ಬರೂ ತಮ್ಮ ಕುಟುಂಬಗಳಲ್ಲಿ ನೀರು ಶೇಖರಣೆ ಮಾಡುವ ಪರಿಕರಗಳನ್ನು ಮುಚ್ಚಿಟ್ಟು ಹಾಗೂ ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ನಮ್ಮ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಘನ ತ್ಯಾಜ್ಯ ವಸ್ತುಗಳನ್ನು ಸೂಕ್ತವಾದ ರೀತಿಯಲ್ಲಿ ವಿಲೇವಾರಿ ಮಾಡಿ ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸಿ ಸೊಳ್ಳೆನಿರೋಧಕಗಳನ್ನು ಬಳಸಿ ನಮ್ಮ ಸುತ್ತಲಿನ ಪರಿಸರ ಸ್ವಚ್ಛತೆಯಿಂದ ಮಲೇರಿಯಾ ರೋಗಗಳನ್ನು ತಡೆಗಟ್ಟಿ ಮಲೇರಿಯಾ ಮುಕ್ತ ಮಾಡಲು ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಸುರೇಂದ್ರ ಬಾಬು ಹೇಳಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಯಚೂರು, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರ ಸಹಯೋಗದಲ್ಲಿ ತಾಲೂಕಿನ ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ವಿಶ್ವ ಮಲೇರಿಯಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಚಳಿ ಜ್ವರ ನಡುಕು ತಲೆನೋವು ವಾಂತಿ ಇಂತಹ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸಂಪೂರ್ಣ ಚಿಕಿತ್ಸೆಯಿಂದ ಮಲೇರಿಯ ಗುಣಮುಖವಾಗುತ್ತಿದೆ. ಮಲೇರಿಯಾ ಅನಾದಿಕಾಲದಿಂದಲೂ ಇದೆ ಜಿಲ್ಲೆಯ ಬೇರೆಬೇರೆ ತಾಲೂಕುಗಳಲ್ಲಿ ಮಲೇರಿಯಾ ಇತ್ತು ಕಳೆದ ಒಂದು ದಶಕದಿಂದ ನಮ್ಮ ಇಲಾಖೆಯ ಸಿಬ್ಬಂದಿಗಳ ಪರಿಶ್ರಮ ಹಾಗೂ ಜಾಗರೂಕತೆಯ ಕಾರ್ಯದಿಂದಾಗಿ ಈಗ ಶೇ.90 ರಷ್ಟು ನಿರ್ಮೂಲನೆಯಾಗಿದೆ. ತಾಲೂಕಿನ ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಲದುರ್ಗ ಹಾಗೂ ಗೊರೆಬಾಳ , ಉಪ ಕೇಂದ್ರಗಳಲ್ಲಿ ಮಲೇರಿಯಾ ಇದೆ. ಮುಂಜಾಗ್ರತೆ ಕ್ರಮವಾಗಿ ನಾವು ಸ್ವಚ್ಛತೆ ಬಗ್ಗೆ ಕ್ರಮ ವಹಿಸಬೇಕು. ತಗ್ಗು ಪ್ರದೇಶಗಳಲ್ಲಿ ನೀರು ನಿಂತ ಸ್ಥಳಗಳಲ್ಲಿ ನಾವು ದ್ವಿಚಕ್ರವಾಹನಗಳಿಗೆ ಬಳಸುವ ಸುಟ್ಟ ಆಯಿಲ್, ಸೀಮೆಎಣ್ಣೆ, ಅಥವಾ ಬೇವಿನ ಸೊಪ್ಪಿನ ರಸ ಎರಡು ಹನಿ ಹಾಕಿದರೆ ಸಾಕು ಆ ತಗ್ಗು ಪ್ರದೇಶದಲ್ಲಿ ಉತ್ಪತ್ತಿಯಾಗುತ್ತಿರುವ ಸೊಳ್ಳೆಗಳಿಗೆ ಆಕ್ಸಿಜನ್ ಹೋಗದೆ ಅವು ನಾಶವಾಗುತ್ತಿವೆ. ಈಗಾಗಲೇ ಸೊಳ್ಳೆ ಪೀಡಿತ ಪ್ರದೇಶಗಳಿಗೆ ಇಲಾಖೆಯಿಂದ ಸೊಳ್ಳೆ ಪರದೆ ವಿತರಣೆ ಮಾಡಲಾಗಿದ್ದು ಈಚನಾಳ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಬರುವ 14 ಹಳ್ಳಿಗಳಲ್ಲಿ ಔಷದ ಸಿಂಪರಣೆ ಮಾಡಲಾಗಿದೆ. ಬಿಸಿಲಿನ ತಾಪ ಹೆಚ್ಚುತ್ತಿರುವುದರಿಂದ ಜನರು ಕೆಲಸದಲ್ಲಿ ಎಚ್ಚರಿಕೆ ವಹಿಸಬೇಕು. ಆದಷ್ಟು ಕೆಲಸ ಮಾಡುವ ಅವಧಿಯನ್ನು ಕಡಿಮೆಗೊಳಿಸಬೇಕು ನಮ್ಮ ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಮನೆಮನೆಗೆ ತೆರಳಿ ಮಲೇರಿಯಾ ಕುರಿತು ಮುಂಜಾಗ್ರತೆ ಕ್ರಮ ವಹಿಸಲು ಸೂಚಿಸಬೇಕು ಸಾರ್ವಜನಿಕರು ಸಹ ಅವರೊಂದಿಗೆ ಕೈಜೋಡಿಸಬೇಕು ಎಂದು ಹೇಳಿದರು.

ಆರೋಗ್ಯ ಅಧಿಕಾರಿ ಅಮರೇಶ್ ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಲೇರಿಯಾ ಜಾಗೃತಿ ಮೂಡಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ರಾಜೇಶ್ವರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್ ಜೋಶಿ, ಜಿಲ್ಲಾ ಎಲ್ ಟಿ ಓ ಅಡಿವೆಪ್ಪ, ರೋಗವ್ಯಾಪನ ಶಾಸ್ತ್ರಜ್ಞ ಅಶೋಕ್ ಮಡ್ಡಿಕರ್, ರಾಯಚೂರಿನ ಹಿರಿಯ ಆರೋಗ್ಯ ಸಹಾಯಕ ಶರಣಬಸವ, ಬಸವರಾಜ್, ಕಿರಿಯ ಆರೋಗ್ಯ ಸಹಾಯಕ ಅಶೋಕ್, ಫಾರ್ಮಸಿ ಅಧಿಕಾರಿ ಮಹಮ್ಮದ್ ಜುಬೇರ, ಗ್ರಾಮದ ಮುಖಂಡರಾದ ಪೀರ್ ಸಾಬ್ ಪಂಚಮ, ಆದಪ್ಪ ಎನ್ ಮೇಟಿ, ಹನುಮೇಶ ಮಸೂತಿ, ಸಿಬ್ಬಂದಿಗಳಾದ ಜಗದೀಶ್, ಅಲಿ, ಅಮರೇಶ, ಚನ್ನಕೇಶವ, ಹುಲುಗಪ್ಪ, ಜಿಶಾ ಸೇರಿದಂತೆ

ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

## ಮೇ 10 ರಂದು ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ

# ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಮೇ.3: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮೇ 10ರಂದು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲು ಶಿಷ್ಠಾಚಾರದ ತಹಶೀಲ್ದಾರ್ ಉಮಾಶಂಕರ್ ಹಿಳ್ಳೆ ಅವರ ಸಭೆಯಲ್ಲಿ ನಿರ್ಧರಿಸಲಾಯಿತು. ಇತ್ತೀಚಿಗೆ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಮೇ 10 ರಂದು ರವಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಎಸ್ ಎಂ ಪಂಡಿತ ರಂಗಮಂದಿರದಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕುಮಟ್ಟದ ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು ಹಾಗೂ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಡಾ . ಎಸ್. ಬಿ. ಕಾಮರೆಡ್ಡಿ, ನಿರೂಪಕರಾಗಿ ಜಿ.ಜಿ. ವಣಿಕ್ಯಾಳ ಮುಖ್ಯಗುರುಗುಳು ಸರಕಾರಿ ಪ್ರೌಢಶಾಲೆ ಅಂಬಲಗಾ ಹಾಗೂ ಉಪನ್ಯಾಸಕರನ್ನಾಗಿ ಶೇಖರ್ ಗಿರೆಡ್ಡಿ ಮುಖ್ಯಗುರುಗಳು ಸರಕಾರಿ ಪ್ರೌಢಶಾಲೆ ಇಲಕಲ್ ಅವರನ್ನು ಸಮಾಜದ ಮುಖಂಡರನ್ನೊಳಗೊಂಡ ಸಭೆಯಲ್ಲಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆರಳಚುಗಾರರಾದ ಗೌರಮ್ಮ ವಿ. ಅವರು ಅಧಿಕಾರಿಗಳನ್ನ ಸ್ವಾಗತಿಸಿ ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಲಕ್ಷ್ಮಿಕಾಂತ್ ರೆಡ್ಡಿ, ಮಹೇಶ್ ರೆಡ್ಡಿ, ಮಹೇಶ್ ಹೊಸೂರಕರ, ಅಮರನಾಥ ರೆಡ್ಡಿ, ಮಲ್ಲಿಕಾರ್ಜುನ್ ರೆಡ್ಡಿ, ಸಂತೋಷ್ ರೆಡ್ಡಿ ಹಾಗೂ ಸುನಿಲ್ ರೆಡ್ಡಿ ಮುಂತಾದ ಸಮಾಜ ಬಾಂಧವರು, ಸಾರ್ವಜನಿಕರು ಉಪಸ್ಥಿತರಿದ್ದರು.

# ವಿವಿಧ ಸಿಸಿ ರಸ್ತೆ ಕಾಮಗಾರಿ ಭೂಮಿ ಪೂಜೆ ನೆರವೇರಿಸಿದ ಶಾಸಕ ; ಮಾನಪ್ಪ ಡಿ ವಜ್ಜಲ್

ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಮೇ.3: ಸಮೀಪದ ಛತ್ರಗ್ರಾಮ, ನಾಗಲಾಪುರ, ವ್ಯಾಕರನಾಳ ಹಾಗೂ ಬೆಳ್ಳಿಹಾಳ ಗ್ರಾಮಗಳಲ್ಲಿ 2025-26ನೇ ಸಾಲಿನ ಕೆಕೆ-ಆರ್ಡಿಬಿ ಅನುದಾನದ ಸಿಸಿ ರಸ್ತೆ ಕಾಮಗಾರಿಗಳಿಗೆ ರವಿವಾರ ಲಿಂಗಸಗೂರು ಶಾಸಕ ಮಾನಪ್ಪ ಡಿ. ವಜ್ಜಲ್ ಭೂಮಿ ಪೂಜೆ ನೆರವೇರಿಸಿದರು. ವ್ಯಾಕರನಾಳ ಗ್ರಾಮದ ಸಾರ್ವಜನಿಕ ಸ್ಥಳ ಬನ್ನಿಕಟ್ಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಭೂಮಿ ಪೂಜೆ ನೆರವೇರಿಸಿದ ಪ್ರತಿ ಗ್ರಾಮಕ್ಕೆ ತಲಾ 50ಲಕ್ಷ,ರೂ ಮೊತ್ತದ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಭಿವೃದ್ಧಿ ಕಾಮಗಾರಿಗಳ ಕೆಲಸ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮತ್ತು ಸ್ಥಳೀಯ ನಿವಾಸಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಕೆಲಸಗಳನ್ನು ಪೂರ್ಣಗೊಳಿಸಬೇಕು. ಸ್ಥಳಿಯ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಒದಗಿಸುವ ನಿಟ್ಟಿನಲ್ಲಿ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು. ಮುದಗಲ್, ಲಿಂಗಸಗೂರು, ಹಟ್ಟಿ ಪಟ್ಟಣಕ್ಕೆ ಕುಡಿಯುವ ನೀರಿನ ಅನುದಾನಕ್ಕಾಗಿ ಯಾವುದೇ ಸ್ಪಂದನೆ ಸಿಗಲಿಲ್ಲ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಸರಕಾರ ಸಾಲದ ಸುಳಿಯಲ್ಲಿ ಸಿಲುಕಿದೆ. ಸರಕಾರದ ನಡೆಗೆ ಜನರಲ್ಲಿ ಬೇಸರ ವ್ಯಕ್ತವಾಗಿದೆ. 2028ಕ್ಕೆ ರಾಜ್ಯದಲ್ಲಿ ಮತ್ತೇ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುತ್ತದೆ ಎಂದು ತಿಳಿಸಿದರು.ತಾಲೂಕು ಅಧ್ಯಕ್ಷ ಕೆ. ನಾಗಭೂಷಣ, ಗಿರಿಮಲ್ಲನ ಗೌಡ, ಭೀಮನಗೌಡ ಪಾಟೀಲ್, ವಿಜಯ ಇಲ್ಕಲ್, ಮೇಘಪ್ಪ ರಾಠೋಡ್, ಘಟಕ ಅಧ್ಯಕ್ಷ ಕರಿಯಪ್ಪ ಯಾದವ್, ಮಾಜಿ ಉಪಾಧ್ಯಕ್ಷ ಶಿವನಗೌಡ ನಾಗಲಾಪುರ, ಚಂದಾವಲಿಸಾಬ್ ಜಂಗಲಿ, ನಾಗರಾಜ ತಳವಾರ, ನಂದನಗೌಡ ಸೇರಿದಂತೆ ಬಿಜೆಪಿ ಮುಖಂಡರಿದ್ದರು.

# ಸತ್ಯ ಬೋಧಿಸಿದ ಬುದ್ಧ : ಪ್ರವೀಣ್ ಬೋಗಾರ

ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಮೇ.3: ತಥಾಗತ ಗೌತಮ್ ಬುದ್ಧರು ಜಗತ್ತಿಗೆ ಕರುಣೆ, ಮೈತ್ರಿ ಹಾಗೂ ಭಾತೃತ್ವದಂತ ಸರ್ವಕಾಲಿಕ ಮೌಲಿಕ ತತ್ವಗಳನ್ನು ಬೋಧಿಸಿದ ಮಹಾನ್ ದಾಸನಕರಾಗಿದ್ದರು ಎಂದು ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ ಬೋಗಾರ ಹೇಳಿದರು. ಶುಕ್ರವಾರ ತಥಾಗತ್ ಭಗವಾನ್ ಬುದ್ಧರ ಜಯಂತಿ ಪ್ರಯುಕ್ತ ಬುದ್ಧರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು ಪುತ್ತೂರು ಪ್ರಕೃತಿ ಪರವಾದ. ಸಕಲರಲ್ಲಿ ಕರುಣೆ, ಮೈತ್ರಿ, ಬಂಧುತ್ವ ಭಾವ ಬಿತ್ತುವ ಮೂಲಕ, ವೈಜ್ಞಾನಿಕ ನೆಲೆಗಟ್ಟಿನ ವಾಸ್ತವತೆಯ ನೆರೆಯ ಮೇಲೆ ಬೌದ್ಧಧರ್ಮ ಬೋಧಿಸಿದರು. ಬುದ್ಧರು ಬೋಧನೆಯಲ್ಲಿ ಇಂದಿನ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು. ಕಚೇರಿ ವ್ಯವಸ್ಥಾಪಕ ಸುರೇಶ್ ಎಸ್ ಹೊನ್ನಳ್ಳಿ, ಮಾಜಿ ಪುರಸಭೆ ಅಧ್ಯಕ್ಷ ರಜ್ಜಬಲಿ ಟಿಂಗ್ರಿ ಸೇರಿದಂತೆ ಪುರಸಭೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಯಾದಗಿರಿ ಜಿಲ್ಲೆಯಲ್ಲಿ ಬಿಸಿಗಾಳಿ ಹೆಚ್ಚಾಗುವ ಕುರಿತು ಹವಾಮಾನ ಇಲಾಖೆಯಿಂದ ಎಚ್ಚರಿಕೆ

## ಸಾರ್ವಜನಿಕರು ಅವಶ್ಯಕ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಿ: ಜಿಲ್ಲಾಧಿಕಾರಿ ಹರ್ಷಲ್ ಭೋಯರ್

ಮಲ್ಲಮ್ಮನುಡಿವಾರ್ತೆಯಾದಗಿರಿ

ಮೇ:3: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಯಾದಗಿರಿ ಜಿಲ್ಲೆಯಲ್ಲಿ ಇದೇ ಮೇ 03 ರಿಂದ 05 ರವರೆಗೆ ಬಿಸಿಗಾಳಿ ಪರಿಸ್ಥಿತಿ ಹೆಚ್ಚಾಗುವ ಸಾಧ್ಯತೆ ಇದೆ (ಯೆಲ್ಲೋ ಅಲರ್ಟ್ ನೀಡಲಾಗಿದೆ). ಈ ಹಿನ್ನಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ಹಾಗೂ ಹೀಟ್ ಸ್ಟ್ರೋಕ್ ನಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ನೀಡಲಾದ ಮುಂಜಾಗ್ರತಾ ಕ್ರಮಗಳನ್ನು, ಸಾರ್ವಜನಿಕರು ಈ ಕೆಳಕಂಡಂತೆ ಅನುಸರಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆದ ಶ್ರೀ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಸಾರ್ವಜನಿಕರ ಗಮನಕ್ಕೆ: ವಿಶೇಷವಾಗಿ ಮಧ್ಯಾಹ್ನ 12.00 ರಿಂದ 4.00 ರವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಬೇಕು. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕು. ಸಾಧ್ಯವಾದಷ್ಟು ಹಗುರವಾದ, ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸಿ. ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಛತ್ರಿ/ಟೋಪಿ, ಬೂಟುಗಳು ಅಥವಾ ಚಪ್ಪಲ್ ಗಳನ್ನು ಬಳಸಬೇಕು. ಹೊರಗಿನ ತಾಪಮಾನ ಹೆಚ್ಚಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಿ. ಮಧ್ಯಾಹ್ನ 12 ರಿಂದ 3 ಗಂಟೆಯವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಿ. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳನ್ನು ತಪ್ಪಿಸಿ. ಹೆಚ್ಚಿನ ಪ್ರೋಟೀನ್ ಆಹಾರವನ್ನು ತಪ್ಪಿಸಿ ಮತ್ತು ಹಳೆಯ ಆಹಾರವನ್ನು ಸೇವಿಸಬೇಡಿ. ನೀವು ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿ ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಬೇಕು. ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕುಪ್ರಾಣಿಗಳನ್ನು ಬಿಡಬೇಡಿ. ನಿಮಗೆ ಮೂರ್ಛೆ ಅಥವಾ ಅನಾರೋಗ್ಯ ಅನಿಸಿದರೆ ತಕ್ಷಣ ವೈದ್ಯರನ್ನು ಭೇಟಿ ಮಾಡಿ. ಓಖಖ, ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ತೋರಣಿ (ಅಕ್ಕಿ ನೀರು), ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ದೇಹವನ್ನು ಮರು– ಜಲೀಕರಣ ಮಾಡಲು ಸಹಾಯ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಅದರಂತೆ ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ, ನಿಮ್ಮ ಮನೆಯನ್ನು ತಂಪಾಗಿ ಇರಿಸಿ, ಪರದೆಗಳು, ಶಟರ್‌ಗಳು ಅಥವಾ ಸನ್‌ಶೇಡ್‌ಗಳನ್ನು ಬಳಸಿ ಮತ್ತು ರಾತ್ರಿಯಲ್ಲಿ ಕಿಟಕಿಗಳನ್ನು ತೆರೆಯಿರಿ. ಫ್ಯಾನ್, ಒದ್ದೆ ಬಟ್ಟೆಗಳನ್ನು ಬಳಸಿ ಮತ್ತು ತಣ್ಣೀರಿನಲ್ಲಿ ಸ್ನಾನಮಾಡಿ ರೈತರು/ಕೃಷಿಕಾರ್ಮಿಕರಿಗೆ: ನೀವು ಹೊಲದಲ್ಲಿ ಕೆಲಸಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿ ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಬಳಸಬೇಕು, ಪ್ರಯಾಣಿಕರ ಗಮನಕ್ಕೆ: ಪ್ರಯಾಣಿಕರು ಪ್ರಯಾಣಿಸುವಾಗ ನಿಮ್ಮೊಂದಿಗೆ ಸಾಕಷ್ಟು ನೀರು ತೆ–ಗೆದುಕೊಂಡಿರಿ. ಬಿಸಿಗಾಳಿ ಮತ್ತು ಆರ್ದ್ರ ಪರಿಸ್ಥಿತಿಗಳಿಗೆ ಸಲಹೆಗಳು: ಸಾಧಾರಣ ತಾಪಮಾನ ಮತ್ತು ಶಾಖವು ಸಾಮಾನ್ಯ ಜನರಿಗೆ ಸಹಿಸಿಕೊಳ್ಳಬಲ್ಲದು. ಆದರೆ ದುರ್ಬಲ ಜನರಿಗೆ ಮತ್ತು ಮಧ್ಯಮ ಆರೋಗ್ಯ ಕಾಳಜಿ ಇರುವ ಜನರು (ಉದಾ, ಶಿಶುಗಳು, ವೃದ್ಧರು, ದೀರ್ಘಕಾಲದ ಕಾಯಿಲೆ ಇರುವ ಜನರು ಸಹಿಸಿಕೊಳ್ಳಲಾಗದ ಬಿಸಿಲಿನಲ್ಲಿ ತಲೆ ಹಾಗೂ ದೇಹವನ್ನು ಸೂರ್ಯನ ಕಿರಣಗಳಿಗೆ ಒಡ್ಡದಿರಿ. ಹಗುರವಾದ, ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ, ಟೋಪಿ ಅಥವಾ ಕೊಡೆ/ಛತ್ರಿ ಬಳಸಿ. ಒಂದು ವೇಳೆ ಹೊರಗೆ ಬಿಸಿಲಿನಿಂದ ಮನೆಗೆ ಬಂದ ತಕ್ಷಣ ಕೂಡಲೇ ಅತಿ ತಂಪಾದ ನೀರು ಕುಡಿಯಬಾರದು ಅಥವಾ ಎ.ಸಿ/ಕೂಲರ್ ಗಳನ್ನು ಕೂಡಲೇ ಬಳಸುವುದು ಸೂಕ್ತವಲ್ಲ. ಜಾನುವಾರುಗಳ ರಕ್ಷಣೆಗೆ ಸಲಹೆಗಳು: ಜಾನುವಾರುಗಳನ್ನು ಮುಂಜಾನೆ ಮತ್ತು ಸಾಯಂಕಾಲ ಸಮಯದಲ್ಲಿ ಮೇಯಿಸಲು ಬಿಡಬೇಕು. ದಿನಕ್ಕೆ 2 ರಿಂದ 3 ಸಾರಿ ಶುದ್ಧವಾದ ನೀರನ್ನು ಕುಡಿಸಬೇಕು. ಮಧ್ಯಾಹ್ನದ ಸಮಯದಲ್ಲಿ ಜಾನುವಾರುಗಳನ್ನು ಹಾಗೂ ಕುರಿ ಮತ್ತು ಆಡುಗಳನ್ನು ಕೊಟ್ಟಿಗೆಯಲ್ಲಿ ಅಥವಾ ಗಿಡದ ನೆರಳಿನಲ್ಲಿ ಕಟ್ಟಬೇಕು. ಜಮೀನು ಉಳಿಮೆ ಮಾಡಲು ಎತ್ತುಗಳನ್ನು ಮುಂಜಾನೆ ಅಥವಾ ಸಾಯಂಕಾಲದ ಸಮಯದಲ್ಲಿ ಮಾತ್ರ ಕೆಲಸಕ್ಕೆ ಉಪಯೋಗಿಸಬೇಕು. ನಿರ್ಜಲೀಕರಣಗೊಂಡ ಜಾನುವಾರುಗಳಿಗೆ ಉಪ್ಪು, ಅಡುಗೆ ಸೋಡಾ, ಬೆಲ್ಲ ಹಾಗೂ ಲಿಂಬೆಹಣ್ಣಿನ ರಸವನ್ನು ನೀರಿನಲ್ಲಿ ಮಿಶ್ರಣ ಮಾಡಿ ದಿನದಲ್ಲಿ 3 ರಿಂದ 4 ಸಾರಿ ಕುಡಿಸಬೇಕು. ಜಾನುವಾರುಗಳಿಗೆ ಮುಂಜಾಗ್ರತೆಯಾಗಿ ಇಲಾಖೆಯಿಂದ ಉಚಿತವಾಗಿ ನೀಡುವ ಸಾಂಕ್ರಾಮಿಕ ರೋಗಗಳಿಗೆ ಲಸಿಕೆಗಳನ್ನು ಕಾಲಕಾಲಕ್ಕೆ ನಿಗದಿತ ಸಮಯದಲ್ಲಿ ಹಾಕಿಸಬೇಕು, ರೈತರು ತಮ್ಮ ಜಮೀನಿನಲ್ಲಿರುವ ಮೇವನ್ನು ಯಾವುದೇ ಕಾರಣಕ್ಕೂ ಸುಟ್ಟು ಹಾಕದೇ ಬಣವೇ ಹಾಕಿ ಅಥವಾ ಸುರುಳಿ ಸುತ್ತಿಟ್ಟುಕೊಂಡು (ಬೇಲಿಂಗ್) ಮೇವುನ್ನು ಸಂಗ್ರಹಿಸಬೇಕು. ಇದ–ರಿಂದ ಭೂಮಿಯ ಫಲವತ್ತತೆ ಹಾಳಾಗದಂತೆ ತಡೆಯಬಹುದು ಜೊತೆಗೆ ವಾಯುಮಾಲಿನ್ಯ ನಿಯಂತ್ರಣ ಮತ್ತು ಜಾನುವಾರುಗಳಿಗೆ ಮೇವಿನ ಕೊರತೆಯನ್ನು ನೀಗಿಸಬಹುದು. ಬಿಸಿಗಾಳಿ ಸಂದರ್ಭಗಳಲ್ಲಿ ಅನುಸರಿಸಬೇಕಾದ (Do's) ಮತ್ತು ಅನುಸರಿಸಬಾರದ (Don'ts) ಕ್ರಮಗಳ ಪಟ್ಟಿ ಅನುಸರಿಸಬೇಕಾದ ಕ್ರಮಗಳು (Do's) ಸಾಧ್ಯವಾದಷ್ಟು ತಂಪಾದ ಸ್ಥಳದಲ್ಲಿ ಇರಿ. ಬಿಸಿಲಿನ ಅವಧಿಯಲ್ಲಿ ಕೊಡೆಗಳನ್ನು ಬಳಸಿ. ಸಾಧ್ಯವಾದಷ್ಟು ಹತ್ತಿ ಉಡುಪುಗಳನ್ನು ಧರಿಸಿ ಹತ್ತಿಯ ಟೋಪಿಗಳನ್ನು ಬಳಸಿ, ಹೆಚ್ಚಿನ ಬಿಸಿಲು ಅವಧಿಯಲ್ಲಿ ವಿಶ್ರಾಂತಿ ಪಡೆಯಿರಿ. ಸಾಕಷ್ಟು ನೀರು, ಮಜ್ಜಿಗೆ ಕುಡಿಯಿರಿ. ವಾಸವಿರುವ ಕೋಣೆಯನ್ನು ತಂಪಾಗಿರಿಸಬೇಕು.

ಅನುಸರಿಸಬಾರದ ಕ್ರಮಗಳು (Don't's): ನೇರಬಿಸಿಲು/ಬಿಸಿಗಾಳಿಗೆ ಒಡ್ಡಿಕೊಳ್ಳಬೇಡಿ. ಬಿಸಿಲಿನ ಅವಧಿಯಲ್ಲಿ ಕೊಡೆ ಇಲ್ಲದೆ ಹೊರಗೆ ಹೋಗಬೇಡಿ. ಕಪ್ಪು ಗಾಢ ಬಣ್ಣದ ತೆಳುವಾದ ಹಾಗೂ ಸಿಂಥಟಿಕ್ ಉಡುಪುಗಳನ್ನು ಧರಿಸಬೇಡಿ. ನೇರವಾಗಿ ಬಿಸಿಲಿನ ಝಳಕ್ಕೆ ತಲೆ ಒಡ್ಡಬೇಡಿ. ಹೆಚ್ಚಿನ ಬಿಸಿಲು ಇರುವ ಅವಧಿಯಲ್ಲಿ ಶ್ರಮದಾಯಕ ದೈಹಿಕ ಕೆಲಸಗಳನ್ನು ಮಾಡಬೇಡಿ. ಬಿಸಿ ಚಹ, ಮದ್ಯ ಸೇವಿಸಬೇಡಿ, ವಾಸವಿರುವ ಕೋಣೆಯಲ್ಲಿ ನೇರವಾಗಿ ಬಿಸಿಲು ಬೀಳುವದನ್ನು ತಪ್ಪಿಸಿ. ಬಿಸಿಗಾಳಿಗೆ ತುತ್ತಾದ ವ್ಯಕ್ತಿಯನ್ನು ಕೂಡಲೇ ತಂಪಾದ ಸ್ಥಳಕ್ಕೆ ರವಾನಿಸಿ. ಬಿಸಿಗಾಳಿ ತುತ್ತಾದ ವ್ಯಕ್ತಿಗೆ ಕೂಡಲೇ ಚಿಕಿತ್ಸೆ ನೀಡಿ, ಬಿಸಿಗಾಳಿ ತುತ್ತಾದವರಿಗೆ ಸಾಕಷ್ಟು ಕುಡಿಯುವ ನೀರು, ಮಜ್ಜಿಗೆ, ದ್ರವಹಾರ ನೀಡಿ ಬೀಳುವುದನ್ನು ತಪ್ಪಿಸಿ. ಬಿಸಿಗಾಳಿಗೆ ತುತ್ತಾದ ವ್ಯಕ್ತಿಯನ್ನು ಕೂಡಲೇ ತಂಪಾದ ಸ್ಥಳಕ್ಕೆ ರವಾನಿಸಲು ತಡಮಾಡಬೇಡಿ. ಬಿಸಿಗಾಳಿ ತುತ್ತಾದ ವ್ಯಕ್ತಿಗೆ ಪ್ರಥಮ ಚಿಕಿತ್ಸೆ ನೀಡುವುದನ್ನು ತಡಮಾಡಬೇಡಿ. ಬಿಸಿಗಾಳಿ ಸಂದರ್ಭಗಳಲ್ಲಿ ಚಹಾ, ಕಾಫಿ ಮತ್ತು ಜೇನು ಸೇವಿಸಬೇಡಿ ಎಂದು ಯಾದಗಿರಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಅಧ್ಯಕ್ಷರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಬಡ್ತಿ ಹೊಂದಿದ ಪ್ರಾಣೇಶ್ ಜೋಶಿಗೆ ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಮೇ.03: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಣೇಶ್ ಜೋಶಿಯವರಿಗೆ ಇತ್ತೀಚೆಗೆ ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಬಡ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ತಾಲೂಕಿನ ಈಚನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೆಡೆದ ವಿಶ್ವಮಲೇರಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಅವರಿಗೆ ಸನ್ಮಾನಿಸಿ ಗೌರವಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ನಾವು ಸಮಾಜದಲ್ಲಿ ಮಾಡುವ ಕೆಲಸ ಕಾರ್ಯಗಳನ್ನು ಜನತೆ ಮೆಚ್ಚಬೇಕು. ಸರಕಾರಿ ಸೇವೆಯಲ್ಲಾಗಲಿ ಅಥವಾ ಸಮಾಜ ಸೇವೆಯಲ್ಲಾಗಲಿ ನಾವು ಮಾಡುತ್ತಿರುವ ಕೆಲಸ ಕಾರ್ಯಗಳು ಪ್ರತಿಯೊಬ್ಬರು ತಮ್ಮ ಉಸಿರು ಹೋದರೂ ಸಹ ಹೆಸರು ಉಳಿಯುವ ಹಾಗೆ ಏನಾದರೊಂದು ಸಮಾಜ ನಮ್ಮನ್ನು ಗುರುತಿಸುವ ರೀತಿಯಲ್ಲಿ ಸೇವೆ ಮಾಡಬೇಕು. ಅಂದಾಗ ಮಾತ್ರ ನಾವು ಸಲ್ಲಿಸಿದ ಸೇವೆಗೆ ನಿಜವಾದ ಒಂದು ಅರ್ಥ ಮತ್ತು ಅದಕ್ಕೊಂದು ಗೌರವದ ಕಳೆ ಬರುತ್ತದೆ.

ಈ ಹಿಂದೆ ನಾನು ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಯಾಗಿದ್ದ ಸಂದರ್ಭದಲ್ಲಿ ನನ್ನ ಸೇವೆಯನ್ನು ತಾವು ತುಂಬಾ ಹತ್ತಿರದಿಂದ ಈ ಹಿಂದಿನಿಂದಲೂ ಗುರುತಿಸಿದ್ದೀರಿ ಈಚನಾಳ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಹಾಗೂ ಈ ಗ್ರಾಮದ ಜನತೆಗೂ ನನಗೂ ಅವಿನಾಭಾವ ಪ್ರೀತಿ ವಿಶ್ವಾಸದ ನಂಟಿದೆ. ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಯಾಗಿ ನಾನು ಬಡ್ತಿ ಹೊಂದಿದರೂ ಸಹ ನನ್ನ ಸೇವೆ ಸದಾಕಾಲ ಹಿಂದಿನಂತೆಯೇ ಮುಂದುವರಿಯುತ್ತಿದೆ. ನಿಮ್ಮ ಪ್ರೀತಿ ವಿಶ್ವಾಸ ಸದಾ ಕಾಲ ನನ್ನ ಮೇಲಿರಲಿ ನಿಮ್ಮ ಪ್ರೀತಿಗೆ ನಾನು ಚಿರಋಣಿಯಾಗಿದ್ದೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಸು–ರೇಂದ್ರ ಬಾಬು, ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಹಾಗೂ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಗಣೇಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ಎಚ್ ದಾಸಪ್ಪನವರ್, ತಾಲೂಕ ಆರೋಗ್ಯ ಅಧಿಕಾರಿ ಅಮರೇಶ್ ಪಾಟೀಲ್, ಈಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಹನುಮಂತ್ ರಾಯ ತಳ್ಳಳ್ಳಿ, ಡಾ. ರಾಜೇಶ್ವರಿ, ಗ್ರಾಮದ ಹಿರಿಯ ಮುಖಂಡರಾದ ಪೀರ್ ಸಾಬ್ ಪಂಚಮ, ಆದಪ್ಪ ಎನ್ ಮೇಟಿ, ಪತ್ರಕರ್ತರಾದ ಮೈಸನ್ ಮಿಯಾ ಅಂಗಡಿ, ಹನುಮೇಶ ಮಸೂತಿ, ಆರೋಗ್ಯ ನಿರೀಕ್ಷಣಾಧಿಕಾರಿ ಅಡಿವೆಪ್ಪ, ಶರಣಬಸವ ಪಾಟೀಲ್, ಅಶೋಕ್ ಮಡ್ಡಿಕರ್, ಫಾರ್ಮಸಿ ಮಹಮ್ಮದ್ ಜುಬೇರಾ ಜಾಗೀರ್ದಾರ್, ಬಸವರಾಜ್, ಶಿವಕುಮಾರ್, ಅಮರೇಶ, ಜಗದೀಶ, ಸಿದ್ದಲಿಂಗ, ಅಲಿ, ಪ್ರತಾಪ್, ಶಾರದಾ, ಅಂಬಮ್ಮ, ರಾಧಾ, ಮಲ್ಲಮ್ಮ, ಜಿಶಾ, ಸುರೇಶ್, ಚನ್ನಕೇಶವ, ಹುಲುಗಪ್ಪ, ಸೇರಿದಂತೆ ಹಾಸ್ಯ ಕಾರ್ಯಕತೆ–ರ್ಯರು ಉಪಸ್ಥಿತರಿದ್ದರು.



# ಡಿಡಿಯು ಸಮೂಹ ಶಿಕ್ಷಣ ಸಂಸ್ಥೆ ವತಿಯಿಂದ ಮೇ 7 ರಂದು ಉಚಿತ ಸಾಮೂಹಿಕ ಅಕ್ಷರಾಭ್ಯಾಸ

ಮಲ್ಲಮ್ಮನುಡಿವಾರ್ತೆಯಾದಗಿರಿ

ಮೇ.3: ಡಿ.ಡಿ.ಯು ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಮೇ 7 ರಂದು ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮ ಸಂಸ್ಥೆಯ ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮೇಟಿ ಹೇಳಿದರು. ಶನಿವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಪ್ರತಿಷ್ಠಿತ ಯಾದಗಿರಿ ನಗರದ ಡಿ.ಡಿ.ಯು ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಸೂರ್ಯವರ್ದನ ಗುರೂಜಿ ಅವರ ಸಮ್ಮುಖದಲ್ಲಿ ಸಾಮೂಹಿಕ ಉಚಿತ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 2 ರಿಂದ 5 ವರ್ಷದೊಳಗಿನ ಮಕ್ಕಳು ಭಾಗವಹಿಸಿ ಅಕ್ಷರಾಭ್ಯಾಸದ ಸದುಪಯೋಗ ಪಡೆದುಕೊಳ್ಳುವಂತೆ ಪಾಲಕ–ಪೋಷಕರಿಗೆ ಮನವಿ ಮಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಅನೇಕ ಪಾಲಕರು ತಮ್ಮ ಮಕ್ಕಳ ಅಕ್ಷರಾಭ್ಯಾಸಕ್ಕಾಗಿ ಶೃಂಗೇರಿ. ಮೈಸೂರು ಮುಂತಾದ ದೂರದ ನಗರಗಳಿಗೆ ತೆರಳುತ್ತಿರುವುದು ಗಮನಾರ್ಹವಾಗಿದೆ ಎಂದರು ಇದೀಗ ಯಾದಗಿರಿಲ್ಲಿಯೇ ಪೂಜ್ಯ ಸೂರ್ಯವರ್ದನ ಗುರೂಜಿಯವರ ಸಾನ್ನಿಧ್ಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುವುದು ಸ್ಥಳೀಯರಿಗೆ ಅನುಕೂಲಕರವಾಗಿದೆ ಎಂದು ಹೇಳಿದರು. ಜಗತ್ತು ಅಕ್ಷರದಿಂದಲೇ ನಿಂತಿದೆ. ಆದಿ ಅಂತ್ಯವಿಲ್ಲದ ಅಕ್ಷರವೇ ಜ್ಞಾನದ ಮೂಲ. ಕಣ್ಣಿಗೆ ಕಾಣುವ ಸಕಲ ಜೀವರಾಶಿಗಳಲ್ಲೂ ಅಕ್ಷರ ಅಡಕವಾಗಿದೆ. ಅನ್ನ ಕೊಡುವ ಯಾವುದೇ ವಿದ್ಯೆಯನ್ನು ಕಲಿಯಲು ಅಕ್ಷರಾಭ್ಯಾಸ ಅಗತ್ಯ. ಅದು ಸುಲಭವಾಗಿ ದೊರೆಯುವುದಿಲ್ಲ; ನಿರಂತರ ಅಭ್ಯಾಸ ಬೇಕು ಎಂದು ತಿಳಿಸಿದರು.

ಮಕ್ಕಳಿಗೆ ಅಕ್ಷರಾಭ್ಯಾಸವು ಸಂಭ್ರಮದ ಕ್ಷಣವಾಗಿದ್ದು, ಅವರ ವಿದ್ಯಾಭ್ಯಾಸದ ಮೊದಲ ಹೆಜ್ಜೆಯಾಗಿದೆ. ಮಕ್ಕಳು ಪ್ರಥಮವಾಗಿ ತಮ್ಮ ತಂದೆ–ತಾಯಿಗಳಿಂದಲೇ ಅಕ್ಷರಗಳನ್ನು ಕಲಿಯುತ್ತಾರೆ. ವಿಶೇಷವಾಗಿ ತಾಯಿಯಿಂದ ದೊರೆಯುವ ಪ್ರಾಥಮಿಕ ಶಿಕ್ಷಣ–ಕ್ಕೆ ಅಪಾರ ಮೌಲ್ಯವಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವಂತೆ ಪಾಲಕರಿಗೆ ಕೋರಿದರು.



# ಮೋದಿ ಸರ್ಕಾರ ಆರಂಭಿಸಿರುವ ಯುದ್ಧಕ್ಕೆ ಯಾವುದೇ ಯುದ್ಧ ವಿರಾಮವಿಲ್ಲ: ಹಿರಿಯ ಚಿಂತಕ ಶಿವಸುಂದರ್

- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮೇ.3: ಜಗತ್ತಿನಲ್ಲಿ ನಡೆಯುವ ಯುದ್ಧಗಳಿಗೆ ಯುದ್ಧ ವಿರಾಮ ಎಂಬುದು ಇರುತ್ತೆ ಆದ್ರೆ, ಮೋದಿ ಸರ್ಕಾರ ಆರಂಭಿಸಿರುವ ಯುದ್ಧ–ಕ್ಕೆ ಯಾವುದೇ ಯುದ್ಧ ವಿರಾಮ ವಿಲ್ಲ, ಜನರ ಮೇಲೆ ನಿರಂತರವಾಗಿ ಒಂದಾದ ಮೇಲೊಂದು ಯುದ್ಧ ಮಾಡುತ್ತಾ ಬಂದಿದೆ ಎಂದು ನಾಡಿನ ಹಿರಿಯ ಚಿಂತಕ ಶಿವಸುಂದರ್ ಅವರು ಹೇಳಿದರು. ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಮೇ ಸಾಹಿತ್ಯ ಮೇಳ ಮತ್ತು ಸಮಾನ ಮನಸ್ಕರ ಸಂಘಟನೆಗಳ ಒಕ್ಕೂಟ ದಿಂದ ಹಮ್ಮಿಕೊಂಡಿದ್ದ ಎಸ್‌ಐಆರ್ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇಶದಲ್ಲಿ ಇಂದು ನಡೆಯುತ್ತಿರುವುದು ಆಘಾತಕಾರಿ ಬೆಳವಣಿಗೆಗಳ ಕುರಿತು ಚರ್ಚೆ ಮಾಡಲೇ ಬೇಕು, ಸಂವಿಧಾನ ಮೂಲ ಆಶಯಗನ್ನು ಬುಡಮೇಲು ಮಾಡುವಂತಹ ಶಕ್ತಿಗಳ ವಿರುದ್ಧ ಗಟ್ಟಿ ಧ್ವನಿ ಮತ್ತು ಪ್ರತಿ ಸ್ಪರ್ಧಿಗಳಾಗುವುದರ ಜೊತೆಗೆ ಪರಿಷ್ಕರಣೆ ಹೆಸರಿನಲ್ಲಿ ತಮ್ಮ ರಾಜಕೀಯ ಅಜೆಂಡಗಳನ್ನು ಜಾರಿಗೊಳಿಸುತ್ತಿರುವ ರಾಜಕೀಯ ಪಕ್ಷಗಳ ನಡೆಗಳ ವಿರುದ್ಧ ನಾವು ಅರಿವು ಮೂಡಿಸುವ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ದೇಶದಲ್ಲಿ ಇಂದು ಇಂತಹವರೇ ವೋಟ್ ಹಾಕಬೇಕು ಇಂತವರಿಗೆ ವೋಟ್ ಹಾಕುವ ಅಧಿಕಾರ ಇಲ್ಲ ಎಂದು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತಿದೆ. ಮತ ಪಟ್ಟಿ ಪರಿಷ್ಕರಣೆ ಮಾಡುದಕ್ಕೆ ನಮ್ಮ ವಿರೋಧವಿಲ್ಲ, ಇದು ಹೊಸಬರನ್ನು ಸೇರಿಸುವ ಮತ್ತು ಸತ್ತವರನ್ನ ಮತ ಪಟ್ಟಿಯಿಂದ ಕೈ ಬಿಡುವ ನಿರಂತರವಾದ ಪ್ರಕ್ರೀಯೆ, ಆದ್ರೆ ಮತ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಪೌರತ್ವ ಪರೀಕ್ಷೆ ಮಾಡುವುದಕ್ಕೆ ನಮ್ಮ ವಿರೋಧ ಎಂದರು.

ವಿದೇಶಿಗರನ್ನು ಹುಡುಕುವ ನೆಪದಲ್ಲಿ ಈ ದೇಶದ ಮೂಲ ನಿವಾಸಿಗಳನ್ನು ಚುನಾವಣೆಯಿಂದ ದೂರ ಇಡುವ ಸಂಚು ಇದಾಗಿದ್ದು, ಆಸ್ತಿ ಅಂತಸ್ತು ಇಲ್ಲದ ಈ ದೇಶದ ದಲಿತರು, ಮುಸಲ್ಮಾನ ಹಾಗೂ ಹಿಂದುಳಿದ ವರ್ಗಗಳು ಸೇರಿದಂತೆ ಹೆಚ್ಚಾಗಿ ಹೆಣ್ಣು ಮಕ್ಕಳ ಹಕ್ಕುಗಳನ್ನು ಕಿತ್ತುಕೊಳ್ಳುವ ಯೋಜನೆ ಇದಾಗಿದ್ದು, ಈ ದೇಶದ ಮೊದಲ ಚುನಾವಣೆ ನಡೆದಿದ್ದು ಅವಾಗ ಸ್ಥಿತಿವಂತರಿಗೆ ಮಾತ್ರ ಮತದಾನ ಮಾಡುವ ಹಕ್ಕಿತ್ತು. ಆದ್ರೆ ಅಂಬೇಡ್ಕರ್ ಅವರ ಶ್ರಮದಿಂದ ದೇಶದಲ್ಲಿ ಹುಟ್ಟಿದ ಎಲ್ಲಾ ನಾಗರಿಕರಿಗೆ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು ಅವಾಗ ನಡೆದ ಚುನಾವಣೆ ಸಾರ್ವತಿಕ ಚುನಾವಣೆ ಆಯಿತು , ಜೊತೆಗೆ ಒಂದು, ಮತ ಒಂದು ಮತಕ್ಕೆ ಮೌಲ್ಯ ಎಂದು ಹೇಳಲಾಯಿತು ಎಂದು ಹೇಳಿದರು. ಎಸ್‌ಐಆರ್ ನೇರವಾಗಿ ನಮ್ಮ ಪೌರತ್ವದ ಮೇಲೆ ಪರಿಣಾಮ ಬೀರುತ್ತದೆ, ನಾವು ಪೌರತ್ವ ವನ್ನು ಕಳೆದು ಕೊಂಡರೆ ದೇಶದ ಸಂವಿಧಾನ ನಮ್ಮ ರಕ್ಷಣೆಗೆ ಬರುವುದಿಲ್ಲ ಅವಾಗ ನಾವು ಎರಡನೇ ದರ್ಜೆಯ ನಾಗರಿಕರಾಗುತ್ತೇವೆ, ಸ್ವಾತಂತ್ರ್ಯ ಎಂದರೆ ಎಲ್ಲ ಬಗೆಯ ಗುಲಾಮಗಿರಿಯಿಂದ ಹೊರಬರುವುದು. ಕೇಂದ್ರ ಸರಕಾರದ ಎಸ್‌ಐಆರ್ ಎಂದರೆ ಕೇವಲ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ಮಾತ್ರವಲ್ಲದೆ ಇದು ಈ ದೇಶದ ನಾಗರಿಕರ ಪರಿಶೀಲನೆಯಾಗಿದೆ. ಎಸ್‌ಐಆರ್ ರದ್ದಾಗಬೇಕು. ಒಂದು ವೇಳೆ ಜಾರಿಯಾದರೆ ನಮ್ಮನ್ನು ರದ್ದು ಮಾಡುತ್ತದೆ. ಆದ್ದರಿಂದ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಬೇಕೆಂದು ಶಿವಸುಂದರ್ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಸಾಹಿತಿ ಕುಂವೀ ನಮ್ಮ ದೇಶದ ಆಕ್ಸಿಜನ್ ಅಲ್ಪಸಂಖ್ಯಾತರು, ಇಂಡಿಯಾ ಗೇಟ್‌ನಲ್ಲಿ ನಾವೂ ಇವಾಗೂ ದೇಶಕ್ಕೆ ಪ್ರಾಣ ತ್ಯಾಗ ಮಾಡಿದವರ ಹೆಸರನ್ನು ನೋಡಿದರೆ ಅದರಲ್ಲಿ ಅರ್ಧಕ್ಕೂ ಹೆಚ್ಚು ಹೆಸರುಗಳು ಮುಸ್ಲಿಂರದ್ದೆ, ಇಂತಹದರಲ್ಲಿ ಮೋದಿ ಏನು ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ನಮ್ಮ ಒಗಟ್ಟನ್ನು ಒಡೆತಲು ಸಾಧ್ಯವಿಲ್ಲ, ಇವೆಲ್ಲಾ ದುಃಸ್ವಪ್ನಗಳಂತೆ ಬರುತ್ತವೆ ಹೋಗುತ್ತವೆ, ಅಲ್ಪಸಂಖ್ಯಾತರು ದೃತಿಗೆಡಬಾರದು, ಯಾರು ಶಾಶ್ವತ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ, ಪರಸ್ಪರ ಸಹಕಾರದಿಂದ ಮಾತ್ರ ದೇಶ ಆರೋಗ್ಯವಾಗಿರಲು ಸಾದ್ಯ ಒಂದು ಅಂಗ ತೆಗೆದರೆ ದೇಹ ಕೆಡುತ್ತೋ ಹಾಗೆ ಒಂದು ಸಮುದಾಯವನ್ನು ಹೊರಗಿಟ್ಟರೆ ದೇಶ ಕೆಡುತ್ತೆ ಎಂದು ಎಚ್ಚರಿಕೆ ನೀಡಿದರು.

ಯಾರಿಂದಲೂ ದೇಶದ ಐಕ್ಯತೆ ಮತ್ತು ಭಾವೈಕ್ಯತೆ ಕೆಡಿಸಲು ಸಾಧ್ಯವಿಲ್ಲ ಏಕೆಂದರೆ ಈ ದೇಶಹ ಸಣ್ಣ ದೇಶವಲ್ಲಿ, ಈ ದೇಶದ ವಾಸ್ತು ತುಂಬಾ ಗಟ್ಟಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಮಾನವ ಬಂಧುತ್ವ ವೇದಿಕೆಯ ಟಿ. ರತ್ನಾಕರ್, ಶುಕ್ರಾಜ್ ತಾಳಕೇರಿ, ಮಹಿಳಾ ನಾಯಕಿಯರಾದ ಸಾವಿತ್ರಿ ಮುಜುದಾರ್, ಜ್ಯೋತಿ ಎಂ. ಗೊಂಡಬಾಳ, ಸಲೀಮ್ ಪಲ್ಲಾನ್, ಶರಣು ಶೆಟ್ಟರ್,

ಚನ್ನಬಸಪ್ಪ ಅಪ್ಪಣ್ಣವರ, ಶೈಲಜಾ ಹಿರೇಮಠ, ರಾಜ್ಯ ವೆಲ್ ಫೇರ್ ಪಕ್ಷದ ಮಹಿಳಾ ಘಟಕ ಅಧ್ಯಕ್ಷೆ ಸಭಿಹಾ ಪಟೇಲ್ ಇದ್ದರು.




# ಹಿಂಗಾರು ಜೋಳ ಖರೀದಿ ಪ್ರಾರಂಭಿಸಿ. ಮುಂಗಾರು ಖರೀದಿಸಿದ ಹಣ ಪಾವತಿಸಿ:ಬಸವರಾಜ ಗುಡಿಹಾಳ

ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು


ಹಿಂಗಾರು ಜೋಳ ಖರೀದಿ ಕೇಂದ್ರ ಶೀಘ್ರ ಪ್ರಾರಂಭಿಸುವ ಬಗ್ಗೆ ಮತ್ತು ಮುಂಗಾರು ಜೋಳ ಖರೀದಿ ಕೇಂದ್ರಕ್ಕೆ ಕೊಟ್ಟ ರೈತರಿಗೆ ಹಣ ಪಾವತಿಸುವಂತೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಸಮಿತಿ ವತಿಯಿಂದ ತಾಲೂಕು ತಹಶೀಲ್ದಾರ್ ಕಛೇರಿ ಮುಂದೆ ಪ್ರತಿಭಟನೆ ನಡೆಸಿದರು

ನಂತರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಗುಡಿಹಾಳ ಅವರು ಮುಂಗಾರು ಜೋಳ ಬೆಳೆದ ರೈತರು ಖರೀದಿ ಕೇಂದ್ರಕ್ಕೆ ನೀಡಿ ಒಂದುವರೇ ತಿಂಗಳು ಕಳೆದರೂ ಇನ್ನು ಹಣ ಪಾವತಿಯಾಗಿರುವುದಿಲ್ಲ. ಜೋಳ ಕಟಾವು ಮಾಡಿ 05 ತಿಂಗಳು ಕಳೆದರೂ ಖರೀದಿ ಕೇಂದ್ರ ತಡವಾಗಿ ಪ್ರಾರಂಭ ಮಾಡಿ ಮತ್ತು ಜೋಳ ಪಡೆದ ನಂತರ ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡದೇ ರೈತರ ಸಾಲದ ಸುಳಿಗೆ ಸಿಲುಕಿಸಿದಂತಾಗಿದೆ ಎಂದು ಹೇಳಿದರು

ಸರ್ಕಾರ ತಕ್ಷಣ ಹೆಚ್ಚೆತ್ತುಕೊಂಡು ರೈತರಿಗೆ ಹಣ ಪಾವತಿ ಮಾಡಬೇಕು. ಹಿಂಗಾರು ಜೋಳ ಬೆಳೆದ ರೈತರು ಕಟಾವು ಮಾಡಿ 05 ತಿಂಗಳು ಕೂಡ ಇದುವರೆಗೆ ಜೋಳ ಖರೀದಿ ಕೇಂದ್ರ ಪ್ರಾರಂಭ ಮಾಡದೇ ಇರುವುದರಿಂದ ಜೋಳ ನುಸಿ ಬರುವ ಹಂತಕ್ಕೆ ತಲುಪಿದ್ದು ಇನ್ನೂ ತಡ ಮಾಡಿದರೇ ಸಂಪೂರ್ಣ ನುಸಿ ಬಂದು ರೈತ ಬೆಳೆದ ಜೋಳ ಸಂಪೂರ್ಣ ಹಾಳಾಗುತ್ತದೆ. ಅದಕ್ಕೆ ಅವಕಾಶ ಕೊಡದೇ ಶೀಘ್ರದಲ್ಲೇ ಖರೀದಿ ಕೇಂದ್ರ ಪ್ರಾರಂಭ ಮಾಡಬೇಕು ಇಲ್ಲವಾದಲ್ಲಿ ರೈತರು ನಷ್ಟಕ್ಕೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ

ತಕ್ಷಣ ಹಿಂಗಾರು ಪ್ರಾರಂಭ ಮಾಡಬೇಕು ಇಲ್ಲದಿದ್ರೆ ರೈತರು ಬೀದಿಗೆ ಇಳಿದು ಹೋರಾಟ ಮಾಡಿ ಮಾಡಿಕೊಡುತ್ತದೆ ಎಂದು ತಾಲೂಕು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು

ಈ ಸಂದರ್ಭದಲ್ಲಿ ಅಧ್ಯಕ್ಷ ನಾಗರಾಜ ಬಿಂಗಿ. ನಿರುಪಾದಪ್ಪ. ಸೇರಿದಂತೆ ಇತರರು ಉಪಸ್ಥಿತರಿದ್ದರು.



# ತಾಳ್ಮೆಯಿಂದ ಬದುಕುವ ಸಾಮಾನ್ಯ ಮನುಷ್ಯನೂ ಮಹಾನ್ ಸಾಧಕನಾಗಬಲ್ಲ:ಡಾ.ಸೋಮನಾಥ ಯರನಾಳ

- ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಮೇ.3: ಜಗತ್ತಿನಲ್ಲಿ ಕೇವಲ ಸ್ವಾಮೀಜಿಗಳು ಅಥವಾ ಸನ್ಯಾಸಿಗಳು ಮಾತ್ರ ಸಾಧನೆ ಮಾಡಬೇಕೆಂದಿಲ್ಲ. ಪ್ರತಿಯೊಬ್ಬ ಸಾಮಾನ್ಯ ಮನುಷ್ಯನೂ ಜೀವನದಲ್ಲಿ ಬರುವ ಕಷ್ಟಗಳನ್ನು ತಾಳ್ಮೆಯಿಂದ ಎದುರಿಸಿ, ನಗುನಗುತ್ತಾ ಸಾಗಿದರೆ ಆತ ಪರಮಾತ್ಮನನ್ನು ಒಲಿಸಿಕೊಂಡು ದೊಡ್ಡ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯ, ಎಂದು ಹುಮನಾಬಾದ್‌ನ ಹಿರಿಯ ಸಾಹಿತಿ ಡಾ. ಸೋಮನಾಥ ಯರನಾಳ ಹೇಳಿದರು. ತಾಲೂಕಿನ ಸಂಗಮ ಗ್ರಾಮದಲ್ಲಿ ಆಯೋಜಿಸಲಾಗಿದ್ದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಅಭಿನಂದನಾ ಸಮಾರಂಭ, 'ಜನತೆಯ ಜಂಗಮ' ಗ್ರಂಥ ಲೋಕಾರ್ಪಣೆ ಹಾಗೂ 'ಅಮೃತಧಾರೆ' ಧ್ವನಿ ಸುರಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ನಿಸ್ವಾರ್ಥ ಸೇವೆಗೆ ಸಮಾಜದ ಬೆಂಬಲ: ಡಾ. ಬಸವಲಿಂಗ ಪಟ್ಟದ್ದೇವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಆಶೀರ್ವಚನ ನೀಡಿ, "ಸಮಾಜದಲ್ಲಿ ವ್ಯಕ್ತಿಯು ನಿಸ್ವಾರ್ಥ ಭಾವನೆಯಿಂದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ ಜನರೇ ಬೆನ್ನೆಲುಬಾಗಿ ನಿಂತು ಸಹಕರಿಸುತ್ತಾರೆ. ಮನಸ್ಸಿನ ತಪಸ್ಸು ಬೆಳೆಸಿಕೊಂಡಾಗ ಮಾತ್ರ ದೂರದೃಷ್ಟಿ ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಇತರರಿಗೆ ಮಾರ್ಗದರ್ಶಕರಾಗಬೇಕು," ಎಂದು ಕರೆ ನೀಡಿದರು. ಗ್ರಂಥ ಲೋಕಾರ್ಪಣೆ ಮತ್ತು ಧ್ವನಿ ಸುರಳಿ ಬಿಡುಗಡೆ ಇದೇ ಸಂದರ್ಭದಲ್ಲಿ ಹುಮನಾಬಾದ್ ರಾಜರಾಜೇಶ್ವರಿ ಟ್ರಸ್ಟ್ ಅಧ್ಯಕ್ಷೆ ಪ್ರೇಮಾ ರಾಜಶೇಖರ ಪಾಟೀಲ ಅವರು 'ಜನತೆಯ ಜಂಗಮ' ಗ್ರಂಥವನ್ನು ಲೋಕಾರ್ಪಣೆಗೊಳಿಸಿದರು. ಡಾ. ಸೋಮನಾಥ ಯರನಾಳ ಅವರು 'ಅಮೃತಧಾರೆ' ಧ್ವನಿ ಸುರಳಿಯನ್ನು ಬಿಡುಗಡೆ ಮಾಡಿದರು. ವೇದಿಕೆಯ ಮೇಲೆ ಗುರುಬಸವ ಪಟ್ಟದ್ದೇವರು: ಪೀಠಾಧಿಪತಿಗಳು, ಭಾಲ್ಕಿ ಹಿರೇಮಠ ಸಂಸ್ಥಾನ. ಡಾ. ಮಹಾದೇವಮ್ಮತಾಯಿ: ಖೇಡ್–ಸಂಗಮ ನೀಲಾಂಬಿಕಾಶ್ರಮ. ಗೀತಾ ಈಶ್ವರ ಖಂಡ್ರೆ: ನಿರ್ದೇಶಕರು, ಶಾಂತಿವರ್ಧಕ ಶಿಕ್ಷಣ ಸಂಸ್ಥೆ. ಡಾ. ಮಹೇಶ ಪಾಟೀಲ: ಡಿ.ಹೆಚ್.ಓ, ಯಾದಗಿರಿ. ಜೈಪ್ರಕಾಶ ಬಿರಾದಾರ, ಡಾ. ಭೀಮಸೇನ ಸಿಂಧೆ, ರಘು ಶಂಕರ ಹಾಗೂ ಪ್ರಮುಖರು ಉಪಸಿ ಥತರಿದ್ದರು.?ಕಾರ್ಯಕ್ರಮವನ ್ನ ಸಂಜೀವಕುಮಾರ ಜುಮ್ಮ ನಿರೂಪಿಸಿದರು, ನಾಗಯ್ಯ ಸ್ವಾಮಿ ಸ್ವಾಗತಿಸಿದರು ಮತ್ತು ಸುನೀತಾ ಶಂಭುಲಿಂಗ ಪಾಟೀಲ ವಂದನಾರ್ಪಣೆ ಮಾಡಿದರು.



# ಶೈನ್ ಸ್ಟಾರ್ ಕಿಡ್ಸ್ ಪ್ಲೇ ಹೋಮ್ ಗೆ ದಿ ಬೆಸ್ಟ್ ಪ್ರೀ ಸ್ಕೂಲ್ ಅವಾರ್ಡ್ ಪ್ರಶಸ್ತಿ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ.3: ಬೆಂಗಳೂರಿನ ಆರ್ ಜಿ ರಾಯಲ್ ಹೋಟೆಲ್ ನಲ್ಲಿ ನಡೆದ ಅನೆಲ್ಪ್ ಗ್ರೂಪ್ ಇಂಡಿಯನ್ ಎಜುಕೇಶನ್ ಕಾರ್ಯಕ್ರಮದಲ್ಲಿ ನಮ್ಮ ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಗಣೇಶ ನಗರದಲ್ಲಿರುವ ಶೈನ್ ಸ್ಟಾರ್ ಕಿಡ್ಸ್ ಪ್ಲೇ ಹೋಮ್ ಶಾಲೆಗೆ ದಿ ಬೆಸ್ಟ್ ಪ್ರೀ ಸ್ಕೂಲ್ ಅವಾರ್ಡ್ ಪ್ರಶಸ್ತಿ ನೀಡಿ ಗೌರವಿಸಿದೆ. ಭಾರತ ದೇಶಗಳಲ್ಲಿ ಪ್ರತಿ ರಾಜ್ಯದಲ್ಲಿ ಪ್ರತಿ ಜಿಲ್ಲೆ ಮತ್ತು ತಾಲ್ಲೂಕಿನ ಹಲವಾರು ಶಾಲೆಗಳು ಭಾಗವಹಿಸಿ ಪ್ರಶಸ್ತಿಯನ್ನು ತೆಗೆದುಕೊಂಡಿರುತ್ತವೆ. ನಮ್ಮ ಯಾದಗಿರಿ ಜಿಲ್ಲೆಯಲ್ಲೇ ನಮ್ಮ ತಾಲ್ಲೂಕಿನ ಶೈನ್ ಸ್ಟಾರ್ ಕಿಡ್ಸ್ ಪ್ಲೇ ಹೋಮ್ ಆಯ್ಕೆಯಾರುವುದು ನಿಜಕ್ಕೂ ಶ್ಲಾಘನಿಯ, ನಮ್ಮ ತಾಲ್ಲೂಕಿನ ಹೆಸರಾಂತ ಪ್ರೀ ಸ್ಕೂಲ್ ಗಳಲ್ಲಿ ಒಂದಾದ ಶೈನ್ ಸ್ಟಾರ್ ಕಿಡ್ಸ್ ಪ್ಲೇ ಹೋಮ್ ಸತತವಾಗಿ 4 ವರ್ಷದಿಂದ ಶೈಕ್ಷಣಿಕವಾಗಿ ಬೆಳಿಯುತ್ತಿದ್ದೂ 5ನೇ ವರ್ಷಕ್ಕೆ ಪಾದರ್ಪಣೆ ಮಾಡಿದೆ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸೃಜನಾತ್ಮಕ ಕಲಿಕೆ ನೀಡುತ್ತಿದ್ದು, ಸಂಸ್ಕಾರದ ಜೊತೆಗೆ ಕಲಿಕೆ ಇದು ಶಾಲೆಯ ಮೂಲ ಉದ್ದೇಶವಾಗಿದೆ, ಇಂಡಿಯನ್ ಎಜುಕೇಶನ್ ಅವಾರ್ಡ್ ಬಂದಿರೋದು ತುಂಬಾ ಹೆಮ್ಮೆಯ ವಿಷಯ

ಈ ಪ್ರಶಸ್ತಿ ನಮಗೆ ಜವಾಬ್ದಾರಿ ಹೆಚ್ಚಿಸಿದೆ ಶಾಲೆ ಎಂದರೆ ಜ್ಞಾನದ ದೇಗುಲ. ಇಲ್ಲಿ ಪ್ರತಿ ಮಗು ಒಂದು ದೀಪ, ನಾವು ಅದನ್ನು ಬೆಳಗಿಸುವವರು. ಪಠ್ಯಪುಸ್ತಕಕ್ಕಿಂತ ಪಾಠವೇ ಮುಖ್ಯ. ಜೀವನದ ಮೌಲ್ಯಗಳನ್ನು ಕಲಿಸುವುದೇ ನಿಜವಾದ ಶಿಕ್ಷಣ ಪ್ರತಿ ವಿದ್ಯಾರ್ಥಿಯಲ್ಲೂ ಒಂದು ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಬೆಳೆಸುವುದೇ ನಮ್ಮ ಜವಾಬ್ದಾರಿ

ಶಿಕ್ಷಣ ಎಂದರೆ ತುಂಬಿಸುವುದು ಅಲ್ಲ, ಬೆಳಗಿಸುವುದು.



# ಖಾಸಗಿ ಶಾಲಾ ಕಾಲೇಜು ಶುಲ್ಕದ ಹೊರೆ

## ಪತ್ರಕರ್ತರ ಮಕ್ಕಳಿಗೆ ಶೇ.50 ರಿಯಾಯಿತಿಗೆ ಡಿಸಿಗೆ ಕಾರ್ಯನಿರತ ಪತ್ರಕರ್ತರ ಸಂಘದ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೇ.3: ಜಿಲ್ಲೆಯ ಖಾಸಗಿ ಶಾಲೆ ಹಾಗೂ ಕಾಲೇಜುಗಳಲ್ಲಿ ಏರುತ್ತಿರುವ ಶುಲ್ಕದ ಭಾರದಿಂದ ಪತ್ರಕರ್ತರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ, ಕಾರ್ಯನಿರತ ಪತ್ರಕರ್ತರ ಮಕ್ಕಳಿಗೆ ಶೇ. 50 ರಷ್ಟು ಶುಲ್ಕ ರಿಯಾಯಿತಿ ನೀಡುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾ ಘಟಕ ಜಿಲ್ಲಾಧಿಕಾರಿಗಳಿಗೆ ಇಂದು ಮನವಿ ಸಲ್ಲಿಸಿದೆ.

ಸಂಘದ ಜಿಲ್ಲಾ ಅಧ್ಯಕ್ಷ ಎನ್. ವೀರಭದ್ರಗೌಡ ಅವರ ನೇತೃತ್ವದಲ್ಲಿ ,ಪದಾಧಿಕಾರಿಗಳು ಹಾಗು ಸದಸ್ಯರು ಸೇರಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದರು.

ಮನವಿಯಲ್ಲಿ, ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಪತ್ರಕರ್ತರಿಗೆ ನಿಗಧಿತ ವೇತನ ವ್ಯವಸ್ಥೆಯಿಲ್ಲದೆ ಆರ್ಥಿಕ ಅನಿಶ್ಚಿತತೆ ಎದುರಾಗುತ್ತಿದೆ ಎಂದು ತಿಳಿಸಲಾಗಿದೆ. ಸಮಾಜದ ಹಿತಕ್ಕಾಗಿ ನಿರಂತರವಾಗಿ ದುಡಿಯುವ ಪತ್ರಕರ್ತರ ಜೀವನಮಟ್ಟ ಸುಧಾರಣೆ ಅಗತ್ಯವಾಗಿದ್ದು, ಸರ್ಕಾರದಿಂದ ಸೂಕ್ತ ಬೆಂಬಲ ದೊರಕಬೇಕು ಎಂದು ಒತ್ತಾಯಿಸಲಾಗಿದೆ.

ಇಂದಿನ ದಿನಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕಗಳು ಗಣನೀಯವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪತ್ರಕರ್ತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಕಷ್ಟಕರವಾಗಿದೆ. ಈ ಕಾರಣದಿಂದ ಖಾಸಗಿ ಶಾಲಾ–ಕಾಲೇಜುಗಳಲ್ಲಿ ಶೇ. 50ರಷ್ಟು ಶುಲ್ಕ ರಿಯಾಯಿತಿ ನೀಡಲು ಸರ್ಕಾರದಿಂದ ಸ್ಪಷ್ಟ ಸೂಚನೆ ನೀಡಬೇಕು ಎಂದು ಸಂಘ ಮನವಿ ಮಾಡಿದೆ.

ಈ ಕ್ರಮ ಜಾರಿಯಾದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವ ಕುಟುಂಬಗಳಿಗೆ ಶಿಕ್ಷಣದ ಆರ್ಥಿಕ ಭಾರ ಕಡಿಮೆಯಾಗುವುದಲ್ಲದೆ, ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಲು ಸಹಕಾರಿಯಾಗಲಿದೆ ಎಂದು ಸಂಘ ವಿಶ್ವಾಸ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ,ನರಸಿಂಹಮೂರ್ತಿ ಕುಲಕರ್ಣಿ, ಬಸವರಾಜ್, ಗುರುಶಾಂತಪ್ಪ, ಹರಿಶಂಕರ್, ನಾಗರಾಜ್, ವಿನಸಯಕ ಬಡಿಗೇರ ಶ್ರೀನಿವಾಸ್ ಶೆಟ್ಟಿ, ನಂದೀಶ್, ಜಂಭುನಾಥ, ವೆಂಕೋಬಿ, ತಿಮ್ಮಪ್ಪ ಚೌದರಿ, ಕೆ.ಎಂ.ಮಂಜುನಾಥ, ರೇಣುಕಾರಾಧ್ಯ, ಶಿವು, ಸಿದ್ದಪ್ಪ ಪೂಜಾರ್, ವಿರೇಶ್, ಸಿದ್ದಿಕ್, ಶಿವರಾಮ್ , ನಾಗರಾಜ ಸ್ವಾಮಿ, ದಿವಾಕರರೆಡ್ಡಿ, ಮುರುಳಿಕಾಂತರಾವ್, ಪ್ರಭಾಕರ್, ಖಲಂದರ್, ರುದ್ರಮುನಿ ಸ್ವಾಮಿ, ಗೋವರ್ಧನ್ ರೆಡ್ಡಿ, ಪ್ರಸಾದ್, ಗುರುರಾಜ್, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಶಾಂತಿ- ಅಹಿಂಸೆ ಸಾರಿದ ಬುದ್ಧನ ನಾಡು ಭಾರತ:ಮುಂಡರಗಿ ನಾಗರಾಜ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೇ.3: ಭಾರತವು ಬುದ್ಧನ ನಾಡು. ಇದು ಯಾವುದೇ ಒಂದು ಧರ್ಮಕ್ಕೆ ಸೀಮಿತವಾದ ರಾಷ್ಟ್ರವಲ್ಲ, ಬದಲಾಗಿ ಶಾಂತಿ ಮತ್ತು ಅಹಿಂಸೆಯನ್ನು ಸಾರಿದ ಬುದ್ಧನ ನಾಡಾಗಿದೆ ಎಂದು ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತಿಹಾಸದ ಉಲ್ಲೇಖದಂತೆ ಕ್ರಿಸ್ತಪೂರ್ವ 563ರಲ್ಲಿ ಬುದ್ಧನು ಈ ದೇಶದಲ್ಲಿ ಜನಿಸಿ ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಇಂದು ಬೌದ್ಧ ಧರ್ಮವು ವಿಶ್ವದ ಮೂರನೇ ಅತಿದೊಡ್ಡ ಧರ್ಮವಾಗಿ ಹೊರಹೊಮ್ಮಿದೆ ಎಂದು ಅವರು ಸ್ಮರಿಸಿದರು.

ಗೌತಮ ಬುದ್ಧನು ಯುದ್ಧಕ್ಕಿಂತ ಶಾಂತಿಯೇ ಮೇಲು ಎಂಬ ತತ್ವವನ್ನು ಅಳವಡಿಸಿಕೊಂಡಿದ್ದರು. ಶಾಕ್ಯರಾಜ್ಯದ ಸಿದ್ಧಾರ್ಥನಾಗಿದ್ದಾಗ, ನದಿ ನೀರಿನ ವಿವಾದದ ಕುರಿತು ನಡೆದ ಸಂಘದ ಚರ್ಚೆಯಲ್ಲಿ ಯುದ್ಧದ ಬದಲು ಶಾಂತಿ ಮಾತುಕತೆಗೆ ಒತ್ತು ನೀಡಿದ್ದರು. ಅವರ ಈ ಶಾಂತಿ ಮಂತ್ರವು ಇಂದಿನ ಜಾಗತಿಕ ಯುದ್ಧಗಳ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೌದ್ಧಧರ್ಮದ ಜೀವಾಳವಾದ ಪಂಚಶೀಲ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದ ಅವರು ಬಳ್ಳಾರಿ ನಗರದ ಯಾವುದಾದರೂ ಒಂದು ಪ್ರಶಾಂತವಾದ ಪ್ರದೇಶದಲ್ಲಿ ಬುದ್ಧನ ಭವ್ಯ ಪ್ರತಿಮೆಯನ್ನು ನಿರ್ಮಾಣ ಮಾಡುವ ಆಶಯ ಹೊಂದಲಾಗಿದೆ ಎಂದರು.

ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಮಾತನಾಡಿ, ಗೌತಮ ಬುದ್ಧನು ಕೇವಲ ಒಬ್ಬ ವ್ಯಕ್ತಿಯಲ್ಲ, ಆತ ಅಹಿಂಸೆ ಮತ್ತು ಶಾಂತಿಯ ಜಾಗತಿಕ ಸಂಕೇತ. ತನ್ನ 29ನೇ ವಯಸ್ಸಿನಲ್ಲೇ ರಾಜ್ಯಭೋಗ, ಪತ್ನಿ, ಮಗು ಮತ್ತು ವೈಭವದ ಜೀವನವನ್ನು ತ್ಯಜಿಸಿ ಸಮಾಜದ ಶಾಂತಿಗಾಗಿ ಹಗಲಿರುಳು ಶ್ರಮಿಸಿದ ಮಹಾನ್ ಚೇತನ ಎಂದು ತಿಳಿಸಿದರು.

ಬುದ್ಧನು ಅರಮನೆಯ ಸುಖ–ಭೋಗಗಳನ್ನು ತೊರೆದು ಅಹಿಂಸೆಯ ಮಾರ್ಗವನ್ನು ಆಯ್ದುಕೊಂಡಿದ್ದು ಇಂದಿನ ತಲೆಮಾರಿಗೆ ದೊಡ್ಡ ಪ್ರೇರಣೆ. ನಮ್ಮ ದೇಶಕ್ಕೆ ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಗಾಂಧೀಜಿಯಂತಹ ಮಹಾನ್ ವ್ಯಕ್ತಿಗಳು ದಾರಿದೀಪವಾಗಿದ್ದಾರೆ. ಇವರಲ್ಲಿ ಬುದ್ಧನು ಪ್ರಾಚೀನ ಕಾಲದಲ್ಲೇ ಅಹಿಂಸೆಯ ಬುನಾದಿ ಹಾಕಿದವರು. ಇಂದಿನ ಅಶಾಂತಿಯ ವಾತಾವರಣದಲ್ಲಿ ಬುದ್ಧನ ಶಾಂತಿ ಮತ್ತು ಅಹಿಂಸೆಯ ತತ್ವಗಳನ್ನು ಪಾಲಿಸುವುದು ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಗಾಂಧೀಜಿಯವರು ಸಮಾಜದ ವಿವಿಧ ಕಾಲಘಟ್ಟಗಳಲ್ಲಿ ಶೋಷಣೆ ಮುಕ್ತ ಹಾಗೂ ಸಮಾನತೆಯ ಸಮಾಜಕ್ಕಾಗಿ ಶ್ರಮಿಸಿದ ಮಹಾನ್ ಚೇತನಗಳು. ಅವರ ವಿಚಾರಧಾರೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಅಭಿಪ್ರಾಯಪಟ್ಟರು.

ಬುದ್ಧ ಮತ್ತು ಗಾಂಧೀಜಿ ಇಬ್ಬರೂ ಅಹಿಂಸೆಯೇ ಪರಮ ಧರ್ಮ ಎಂದು ಸಾರಿದವರು. ಸಮಾಜದಲ್ಲಿ ಶಾಂತಿ ನೆಲೆಸಲು ಸತ್ಯದ ಹಾದಿ ಅನಿವಾರ್ಯ ಎಂಬುದನ್ನು ಅವರು ಒತ್ತಿ ತಿಳಿಸಿದ್ದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ಮತ್ತು ಚಾತುರ್ವರ್ಣ ಪದ್ಧತಿಯ ವಿರುದ್ಧ ಬುದ್ಧ ಮತ್ತು ಅಂಬೇಡ್ಕರ್ ಅವರು ಧ್ವನಿ ಎತ್ತಿದರು. ಬಡವರು ಮತ್ತು ಅನಕ್ಷರಸ್ಥರನ್ನು ಮೂಢನಂಬಿಕೆಗಳಿಂದ ಹೊರತರಲು ಅವರು ಶ್ರಮಿಸಿದರು ಎಂದರು.

ಕೇವಲ ಮದುವೆಯಾಗದಿರುವುದು ಬ್ರಹ್ಮಚರ್ಯವಲ್ಲ, ಬದಲಾಗಿ ಎಲ್ಲಾ ವಿಷಯಗಳಲ್ಲಿ ಶಿಸ್ತು ಮತ್ತು ಕಟ್ಟುನಿಟ್ಟಾದ ಜೀವನ ನಡೆಸುವುದು ನಿಜವಾದ ಬ್ರಹ್ಮಚರ್ಯ ಎಂದು ಬುದ್ಧನ ಬೋಧನೆಗಳನ್ನು ವಿಶ್ಲೇಷಿಸಿದರು.

ಬಳ್ಳಾರಿಯ ಎಸ್ ಎಸ್ ಎ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸೋಮನಾಥ್ ಸಿ.ಹೆಚ್ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಸಿರುಗುಪ್ಪ ದಳವಾಯಿ ಅಂಬಣ್ಣ ತಂಡ ಬುದ್ಧ ಗೀತೆಗಳನ್ನು ಪ್ರಸ್ತುತ ಪಡಿಸಿದರು.

*ಮೆರವಣಿಗೆ:*

ಜಯಂತಿ ಅಂಗವಾಗಿ ಸಂಜೆ ಆಕರ್ಷಕ ಮೆರವಣಿಗೆ ನಡೆಯಿತು. ಮೆರವಣಿಗೆಯು ಬಳ್ಳಾರಿ ನಗರದ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಆರಂಭಗೊಂಡು ಗಡಿಗೆ ಚನ್ನಪ್ಪ ವೃತ್ತ, ಡಾ.ರಾಜ್ ಕುಮಾರ್ ರಸ್ತೆ, ಇಂದಿರಾ ವೃತ್ತ ಮಾರ್ಗವಾಗಿ ಸಾಂಸ್ಕೃತಿಕ ಸಮುಚ್ಚಯದ ಸಭಾಂಗಣದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಕಮಲರತ್ನ ಬಂತೇಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮಾಜದ ಹಿರಿಯ ಮುಖಂಡರು, ಬುದ್ಧ ಅನುಯಾಯಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

# ತಾಳ್ಮೆವುಳ್ಳವರು ತಪಸ್ವಿಗಳಾಗಲು ಸಾಧ್ಯ



ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಮೇ.3:ಸಹನಶೀಲ,ತಾಳ್ಮೆವುಳ್ಳವರೂ ಕೂಡ ತಪಸ್ವಿಗಳಾಗಲು ಸಾಧ್ಯ ಎಂದು ಕಾಶಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಇಂಗಳೇಶ್ವರ ಹಿರೇಮಠದ ಲಿಂ. ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರ ಜನ್ಮ ಶತಮಾನೋತ್ಸವ ಸಮಾರಂಭದ ಹಿನ್ನಲೆಯಲ್ಲಿ ಶುಕ್ರವಾರ ರಾತ್ರಿ ಆಯೋಜಿಸಿದ್ದ ಧರ್ಮಸಭೆಯ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಅವರು, ನಾವೆಲ್ಲರೂ ದೇವರ ಮಕ್ಕಳು. ಯಾರೂ ಸಾಮಾನ್ಯ ಎಂದು ಭಾವಿಸಬೇಡಿ. ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದ್ದಲ್ಲಿ ಬಸವಣ್ಣ, ಶಿವಬಸವ ಸೇರಿದಂತೆ ಅನೇಕ ಮಹಾತ್ಮರಾಗಲು ಸಾಧ್ಯ. ಶರೀರ ಮಾಯ. ಕೀರ್ತಿ ಅಮರ. ಈಗಿನ ಮಠಾಧ್ಯಕ್ಷ ಭೃಂಗೀಶ್ವರ ಶಿವಾಚಾರ್ಯರು ತುಂಬಾ ದೂರದೃಷ್ಟಿಯುಳ್ಳವರು. ಈಗಾಗಲೇ ಬೆಂಗಳೂರು ಪಟ್ಟಣದಲ್ಲಿ ಆಂಗ್ಲ ಮಾಧ್ಯಮದಲ್ಲಿ ಬಡ ಹಾಗೂ ಪ್ರತಿಭಾವಂತ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿರುವ ಮನಗೂಳಿಯ ಪಟ್ಟಿಕಂಥಿ ಹಿರೇಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು ಉತ್ತರ ಭಾರತದಲ್ಲೂ ವಿದ್ಯಾಕೇಂದ್ರ ತೆಗೆಯುತ್ತಿರುವುದು ಶ್ಲಾಘನೀಯವಾದುದು ಎಂದರು.

ಬೆಂಗಳೂರಿನ ವಿಭೂತಿಪುರ ಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿ, ಶಿವಬಸವ ಶ್ರೀಗಳು ಜಾತ್ಯಾತೀತವಾಗಿ ಬದುಕು ಸಾಗಿಸಿದವರು. ಭಕ್ತರಿಗೆ ನೆಮ್ಮದಿ ನೀಡಿದವರು. ಇಂದು ಮುಸ್ಲಿಂ ಸಮುದಾಯದವರು ಶ್ರೀಗಳ ತುಲಾಭಾರ ಮಾಡಿದ್ದು ನೋಡಿದರೆ ಲಿಂ. ಶವಬಸವ ಶ್ರೀಗಳು ಭಕ್ತರ ಮೇಲೆ ಅಪಾರ ಪ್ರೀತಿಯುಳ್ಳವರಾಗಿದ್ದು ಕಂಡು ಬರುತ್ತದೆ ಎಂದರು.

ಕೆರೂರಿನ ಡಾ.ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ಬಸವನಬಾಗೇವಾಡಿಯ ಶಿವಪ್ರಕಾಶ ಸ್ವಾಮೀಜಿ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಈರಣ್ಣ ಚ ಪಟ್ಟಣಶೆಟ್ಟಿ, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸೋಮನಗೌಡ ಪಾಟೀಲ ಮಾತನಾಡಿದರು.

ಈ ಸಂದರ್ಭದಲ್ಲಿ ಡೋಣೂರಿನ ಡಾ. ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳು, ಸ್ಥಳೀಯ ಹಿರೇಮಠದ ಭೃಂಗೀಶ್ವರ ಶಿವಾಚಾರ್ಯರು, ಕರಿಭಂಟನಾಳಧ ಶಿವಕುಮಾರ ಸ್ವಾಮೀಜಿ, ಜಿಪಂ ಮಾಜಿ ಅಧ್ಯಕ್ಷ ಚಂದ್ರಶೇಖರ ಎಸ್ ಪಾಟೀಲ, ಜಿಜಿ ದೇವೂರ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತ ಸಮೂಹ ನೆರೆದಿತ್ತು. ಬಿಬಿ ಬಾಗೇವಾಡಿ ನಿರೂಪಿಸಿದರು. ಪಿಬಿ ಬಾಗೇವಾಡಿ ಸ್ವಾಗತಿಸಿದರು.

ಸಮಾರಂಭದ ಮುನ್ನ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವವು ಸುಮಂಗಲೆಯರಿಂದ ಸಕಲ ವಾದ್ಯ ವೈಭವದೊಂದಿಗೆ ಅದ್ದೂರಿಯಾಗಿ ನಡೆಯಿತು.

ಸಮಾರಂಭದ ನಂತರ ಜಗದ್ಗುರುಗಳ ತುಲಾಭಾರ ಹಾಗೂ ದಾನಿಗಳಿಗೆ ಸನ್ಮಾನ ಜರುಗಿತು.

# ಶಿಕ್ಷಣ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ದಾರಿಯಾಗಬೇಕು



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮೇ.3:ಶಿಕ್ಷಣವು ಕೇವಲ ಪಠ್ಯ ಪುಸ್ತಕಗಳಲ್ಲಿನ ಜ್ಞಾನಕ್ಕೆ ಸೀಮಿತವಾಗಿರದೆ, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ದಾರಿಯಾಗಬೇಕು ಎಂದು ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು.ತಾಲ್ಲೂಕಿನ ತಳವಾಡ (ಕೆ) ಗ್ರಾಮದ ಅಲ್ಲಮಪ್ರಭು ಬಿ. ಇಡಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗುರು ದರ್ಶನ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಸಿದ್ಧಾಂತಾಧಾರಿತ ಅಧ್ಯಯನಕ್ಕಿಂತಲೂ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ ಎಂದು ತಿಳಿಸಿದರು.ಪ್ರಾಯೋಗಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.ವಿಜ್ಞಾನ ಪ್ರಯೋಗಗಳು, ಕ್ರೀಡೆ, ಕಲಾ ಚಟುವಟಿಕೆಗಳು ಹಾಗೂ ಸಮೂಹ ಚರ್ಚೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದಲ್ಲದೆ, ತಂಡದಲ್ಲಿ ಕೆಲಸ ಮಾಡುವ ಮನೋಭಾವವನ್ನು ರೂಪಿಸುತ್ತವೆ ಎಂದು ಹೇಳಿದರು.

ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಪ್ರಾಚಾರ್ಯ ಪಾಂಡುರಂಗ ವಿ. ಕುಂಬಾರ ಮಾತನಾಡಿದರು.

ಹಿರೇಮಠ ಸಂಸ್ಥಾನದ ಶಿವಬಸವ ದೇವರು ಸೇರಿದಂತೆ ಸಿಬ್ಬಂದಿ ಇದ್ದರು.

ಸುಧಾರಾಣಿ ಸ್ವಾಗತಿಸಿದರು.ಮಹೇಶ, ಸಹನಾ ನಿರೂಪಿಸಿದರು.ಹಣಮಂತ ವಂದಿಸಿದರು.

# ಪೋಸ್ಟ್ ಮಾಸ್ಟರ ಮ.ಶಿ ಗಡೇದರಿಗೆ ಕಾಯಕಯೋಗಿ ಪ್ರಶಸ್ತಿ ಗರಿ



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಮೇ.3: ತಾಲೂಕಿನ ಹೂವಿನ ಹಿಪ್ಪರಗಿ ಗ್ರಾಮದ ಅಂಚೆ ಇಲಾಖೆಯಲ್ಲಿ ಸಬ್ ಪೋಸ್ಟ್ ಮಾಸ್ಟರ್ ಆಗಿ ಸೇವೆ ಸಲ್ಲಿಸುತ್ತಿರುವ ಮಹಾಬಳೇಶ್ವರ ಶಿವಲಿಂಗಪ್ಪ ಗಡೇದ ಅವರಿಗೆ ಮೇ.1ರಂದು ದೊಡ್ಡಬಳ್ಳಾಪುರದ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಕೊಡ ಮಾಡುವ 2026ನೇ ಸಾಲಿನ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶ್ರೀಯುತರು ಮುದ್ದೆಬಿಹಾಳ ತಾಲೂಕಿನ ನಾಲತವಾಡದವರಾದ ಇವರು ಮುದ್ದೇಬಿಹಾಳ ನಗರದಲ್ಲಿ ಹಸಿರುತೋರಣ ಗೆಳೆಯರ ಬಳಗ ಕಟಿಕೊಂಡು ಪಟ್ಟಣದ ಹಸಿರುಕಾಳಜಿ ತೋರಿದ ಇವರು ಎರಡು ದಶಕಗಳಕಾಲ ಪ್ರಜಾವಾಣಿ ವರದಿಗಾರರಾಗಿ ಸೇವೆ ಸಲ್ಲಿಸಿದ್ದಾರೆ.

# ವಕೀಲರು ಸಮಾಜದ ಪ್ರಮುಖ ಆಧಾರಸ್ತಂಭ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮೇ.3:ವಕೀಲರು ಸಮಾಜದ ಪ್ರಮುಖ ಆಧಾರಸ್ತಂಭ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶುಕ್ರವಾರ ತಾಲೂಕು ವಕೀಲರ ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ದೇಶದ ಸುರಕ್ಷತೆಯಲ್ಲಿ ವಕೀಲರ ಕೊಡುಗೆ ದೊಡ್ಡದಿದೆ. ನ್ಯಾಯದಾನ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಕಾನೂನಿನ ಸರಿಯಾದ ವ್ಯಾಖ್ಯಾನ ನೀಡಿ, ನಿರ್ಗತಿ–ಕರಿಗೆ ಉಚಿತ ಕಾನೂನು ನೆರವು ಒದಗಿಸುವ ಮೂಲಕ ಸಮಾಜದ ಸ್ವಾಸ್ಥ್ಯ ಮತ್ತು ಸಮಾನತೆಯನ್ನು ಕಾಪಾಡಲು ಅಪಾರ ಕೊಡುಗೆ ನೀಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ತಾಲೂಕು ವಕೀಲರ ಸಂಘದ ನೂತನ ಪದಾಧಿಕಾರಿಗಳು ವಕೀಲರ ಹಿತರಕ್ಷಣೆಗಾಗಿ ದುಡಿಯಲಿ ಎಂದು ಆಶಿಸಿದರು.ಸನ್ಮಾನ :ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮಹೇಶ್ ರಾಚೋಟೆ, ಉಪಾಧ್ಯಕ್ಷ ಮಕರಂದ ಮಾನಕಾರಿ, ಕಾರ್ಯದರ್ಶಿ ವಾಗೇಶ್ ಪಾಟೀಲ್ ಮತ್ತು ಜಂಟಿ ಕಾರ್ಯದರ್ಶಿ ನೀಲಕಂಠ ಬಿರಾದಾರ್ ಅವರನ್ನು ಪರಮ ಪೂಜ್ಯರು ಸನ್ಮಾನಿಸಿ, ಆಶೀರ್ವದಿಸಿದರು.ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ, ಮಲ್ಲಿಕಾರ್ಜುನ ತುಗಶೆಟ್ಟೆ ಸೇರಿದಂತೆ ಹಲವರು ಇದ್ದರು.

# ಶಾಂತಿನಿಕೇತನ ಶಾಲೆಯಲ್ಲಿ ಬೀಳ್ಕೊಡುಗೆ ಹಾಗೂ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಮೇ.3:ತಾಲೂಕಿನ ಚಪೆಟ್ಲಾ ಗ್ರಾಮದ ಶ್ರೀ ಮಹೇಶ್ವರಿ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ವತಿಯಿಂದ 2025–26ನೇ ಸಾಲಿನ ಬೀಳ್ಕೊಡುಗೆ ಸಮಾರಂಭ ಹಾಗೂ ಸನ್ಮಾನ ಸಮಾರಂಭವನ್ನು ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವಿಜೃಂಭಣೆಯಿಂದ ಶುಕ್ರವಾರ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಗೌರಿ ಶಂಕರ್ ಪಾಟೀಲ್, ಉಪಾಧ್ಯಕ್ಷರಾದ ರಘುಪತಿ ರೆಡ್ಡಿ ಪೊಲೀಸ್ ಪಾಟೀಲ್, ಖಜಾಂಚಿಗಳಾದ ಲಕ್ಷ್ಮಿ ರೆಡ್ಡಿ ಕೋಲ್ಕುಂದ ಹಾಗೂ ಸದಸ್ಯರಾದ ಸಂಗೀತಾ ಸಜ್ಜ ಅವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸುಗಯ ಸ್ವಾಮಿ ಅವರೊಂದಿಗೆ ಶಿಕ್ಷಕರಾದ ಕ್ರಾಂತಿ ಕುಮಾರ್ ,ಎಮ್ ಬಾಲರಾಜ್, ಶ್ರೀಮತಿ ಇಂದಿರಾ ಹಾಗೂ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗ ಸಕ್ರಿಯವಾಗಿ ಪಾಲ್ಗೊಂಡರು. ವಿದ್ಯಾರ್ಥಿಗಳು ಮತ್ತು ಪಾಲಕರು ಸಹ ಸಮಾರಂಭದಲ್ಲಿ ಹಾಜರಿದ್ದು ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಬೀಳ್ಕೊಡುಗೆ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಶುಭಾಶಯಗಳು ತಿಳಿಸಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

# ಹಜ್ ಸಮಿತಿ ಸಂಯೋಜಕರಾಗಿ ನೇಮಕ

ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಮೇ.3:ಕರ್ನಾಟಕ ರಾಜ್ಯ ಹಜ್ ಸಮಿತಿ ವ್ಯಾಪ್ತಿಗೆ ಒಳಪಡುವ ಮೈಸೂರು ಜಿಲ್ಲಾ ಹಜ್ ಸಮಿತಿಗೆ ಜಿಲ್ಲಾ ಸಂಯೋಜಕರಾಗಿ ಹುಣಸೂರು ತಾಲೂಕಿನ ರತ್ನಪುರಿ ದರ್ಗಾ ತಾ.ಪಂ.ಮಾಜಿ ಸದಸ್ಯರು ಹಾಗೂ ವಕ್ಫ್ ಬೋರ್ಡ್ ಜಿಲ್ಲಾ ಸಮಿತಿ ಸದಸ್ಯ ಅಜ್ಗರ್ ಪಾಷಾ ರವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಹಜ್ ಸಮಿತಿಯ ನಿರ್ದೇಶಕರು ಎಸ್ ಝುಲ್ಫ ಫೇರ್ ಅಹ್ಮದ್ ಖಾನ್ ರವರು ನೇಮಕ ಮಾಡಿ ಆದೇಶಿಸಿದ್ದಾರೆ. ಪತ್ರದಲ್ಲಿ ತಿಳಿಸಿದ್ದಾರೆ

# ಬಳ್ಳಾರಿಯಲ್ಲಿ ಎಎಸ್ಪಿಯಾಗಿದ್ದ ಲಾವಣ್ಯ ನಿಧನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮೇ.3: ಅನಾರೋಗ್ಯದಿಂದ ಬಳಲುತ್ತಿದ್ದ ಮಹಿಳಾ ಪೊಲೀಸ್ ಅಧಿಕಾರಿ ಲಾವಣ್ಯ ಅವರು ಚಿಕಿತ್ಸೆ ಫಲಕಾ ರಿಯಾಗದೇ ನಿನ್ನೆ ನಿಧನರಾಗಿದ್ದಾರೆ. ಇವರು ಈ ಮೊದಲು ಹಂಪಿ ಡಿವೈಎಸ್ಪಿಯಾಗಿ, ಬಳ್ಳಾರಿ ಜಿಲ್ಲಾ ಎಎಸ್ಪಿಯಾಗಿ ಕಾರ್ಯನಿರ್ವಹಿಸಿದ್ದರು.

ಸಧ್ಯ ಬೆಸ್ಕಾಂನ ವಿಜಿಲೆನ್ಸ್ ಎಸ್ಪಿಯಾಗಿದ್ದ ಬಿ.ಎನ್. ಲಾವಣ್ಯ (39) ಅವರು ಚಿಂತಾಮಣಿಯ ದೊಡ್ಡಗಂಜೂರು ಗ್ರಾಮದವರು. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಫಲಿಸದೆ ನಿನ್ನೆ ಮೃತಪಟ್ಟಿದ್ದಾರೆ. ಕರುಳಿನ (ಕೊಲೊನ್ ಕ್ಯಾನ್ಸರ್ನಿಂದ ಬಳಲುತ್ತಿದ್ದರು). 2010ರ ಬ್ಯಾಚ್ನ ಕೆಎಸ್ ಪಿಎಸ್ ಅಧಿಕಾರಿಯಾಗಿದ್ದರು. ಮಂಡ್ಯ, ಬಳ್ಳಾರಿ– ಹೆಚ್ಚುವರಿ ಪೊಲೀಸ್ ಅಧೀಕ್ಷರಾಗಿ, ಬೆಂಗಳೂರಿನಲ್ಲಿ ಇಂಟಲಿಜೆನ್ಸ್, ಡಿಸಿಆರ್ಇ ಎಸ್ಪಿಯಾಗಿ ಸೇವೆ ಸಲ್ಲಿಸಿದ್ದಾರೆ. 2023 ರಿಂದ ಬೆಸ್ಕಾಂ ಎಸ್ಪಿಯಾಗಿದ್ದರು. ಇವರಿಗೆ 10 ವರ್ಷದ ಪುತ್ರ, 3 ವರ್ಷದ ಪುತ್ರಿ ಇದ್ದಾರೆ.

# ಬಳ್ಳಾರಿ: ಜಿಲ್ಲಾಡಳಿತದಿಂದ ಮುಂದುವರೆದ ತೆರವು ಕಾರ್ಯಾಚರಣೆ

## ಸರ್ಕಾರದ ವಶಕ್ಕೆ 15.05 ಎಕರೆ ಜಮೀನು ಸ್ವಾಧೀನ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೇ.3:ಜಿಲ್ಲಾಡಳಿತದಿಂದ ಸರ್ಕಾರದ ಜಾಗ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆದಿದ್ದು, ಬಳ್ಳಾರಿ (ಗ್ರಾಮಾಂತರ) ಗ್ರಾಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 15.05 ಎಕರೆ ಜಮೀನನ್ನು ಜಿಲ್ಲಾಡಳಿತ ತನ್ನ ಸ್ವಾಧೀನಕ್ಕೆ ಪಡೆದುಕೊಂಡಿದೆ.

ಈಗಾಗಲೇ ಸರ್ಕಾರದ ಜಾಗ ಎಂದು ಗುರುತಿಸಲಾಗಿದ್ದ ಬಳ್ಳಾರಿ ಗ್ರಾಮಾಂತರ ವ್ಯಾಪ್ತಿಯ ಸರ್ವೆ ನಂಬರ್ 977 ರ 9.20 ಎಕರೆ, ಸರ್ವೆ ನಂಬರ್ 976 ರ 4.72 ಎಕರೆ ಮತ್ತು ಸರ್ವೆ ನಂಬರ್ 813 ರ 1.13 ಎಕರೆ ಸೇರಿದಂತೆ ಒಟ್ಟು 15.05 ಎಕರೆ ಜಮೀನುಗಳನ್ನು ಶನಿವಾರ ಅಧಿಕೃತವಾಗಿ ಜಿಲ್ಲಾಡಳಿತದ ಸುಪರ್ದಿಗೆ ಪಡೆಯಲಾಯಿತು.

ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ ಸೇರಿದಂತೆ ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಇತರರು ಇದ್ದರು.

# ಉಪ ಚುನಾವಣೆ : 2ನೇ ಹಂತದ ಮತ ಎಣಿಕೆ ತರಬೇತಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಮೇ 03 : ಬಾಗಲಕೋಟೆ ಉಪ ಚುನಾವಣೆ ಹಿನ್ನಲೆಯಲ್ಲಿ ಮತ ಎಣಿಕೆ ಸುಗಮವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಮತ ಎಣಿಕಯ 2ನೇ ಹಂತದ ತರಬೇತಿ ಕಾರ್ಯಕ್ರಮ ರವಿವಾರ ಜರುಗಿ–ತು.ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಉಪ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರ ಸಮ್ಮುಖದಲ್ಲಿ ಮತ ಎಣಿಕೆಯ 2ನೇ ಹಂತದ ತರಬೇತಿ ನೀಡಲಾಯಿತು. ತರಬೇತಿಯಲ್ಲಿ ಮತ ಎಣಿಕೆ ಸಿಬ್ಬಂದಿಗಳಿಗೆ ಮತ ಎಣಿಕಯ ಪ್ರಕ್ರಿಯೆ, ಇವಿಎಂ ಮತ್ತು ವಿವಿಪ್ಯಾಟ್ ಯಂತ್ರಗಳ ಬಳಕೆ, ಮತ ಎಣಿಕೆಯ ವೇಳೆ ಪಾಲಿಸಬೇಕಾದ ಮಾರ್ಗಸೂಚಿಗಳು ಹಾಗೂ ಮಾರ್ಗಸೂಚಿಯ ಕುರಿತು ವಿವರವಾದ ಮಾಹಿತಿ ನೀಡಲಾಯಿತು.

# ನಾಳೆ ತೋಟಗಾರಿಕೆ ವಿವಿಯಲ್ಲಿ ಮತ ಎಣಿಕೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಮತ ಎಣಿಕೆ ಮೇ.4 ರಂದು ನವನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೆಳಿಗ್ಗೆ 8 ರಿಂದ ನಡೆಯಲಿದ್ದು, ಮತ ಎಣಿಕೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತ ಎಣಿಕೆ ಕಾರ್ಯಕ್ಕೆ ಜಿಲ್ಲಾಡಳಿತದಿಂದ ಎಲ್ಲ ರೀತಿಯ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಅಭ್ಯರ್ಥಿಗಳು, ಚುನಾವಣಾ ಏಜೆಂಟರು ಹಾಗೂ ಮತ ಎಣಿಕೆ ಏಜೆಂಟರುಗಳು ಅಂದು ಬೆಳಿಗ್ಗೆ 7 ಗಂಟೆಗೆ ಹಾಜರಿರಲು ತಿಳಿಸಲಾಗಿದೆ. ಭದ್ರತಾ ಕೊಠಡಿಯನ್ನು ಬೆಳಿಗ್ಗೆ 7 ಗಂಟೆಗೆ ಚುನಾವಣಾ ವೀಕ್ಷಕರ, ಅಭ್ಯರ್ಥಿಗಳ, ಏಜೆಂಟರ ಸಮ್ಮುಖದಲ್ಲಿ ತೆರೆಯಲಾಗುತ್ತಿದೆ ಎಂದರು.

ಇವಿಎಂ ಮತ ಎಣಿಕೆ ಕಾರ್ಯಕ್ಕಾಗಿ ನೆಲ ಮಹಡಿಯ ರೂ.ನಂ.4 ರಲ್ಲಿ 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಂಚೆ ಮತ ಪತ್ರಗಳ ಎಣಿಕೆಗಾಗಿ ನೆಲ ಮಹಡಿಯ 9ರ ಕೊಠಡಿಯಲ್ಲಿ ಒಂದು ಟೇಬಲ್ ಹಾಗೂ ಇಟಿಪಿಬಿಎಸ್ ಸ್ಕ್ಯಾನಿಂಗ್‌ಕ್ಕಾಗಿ



ಕೊಠಡಿ ಸಂಖ್ಯೆ 9 ರಲ್ಲಿ ಒಂದು ಟೇಬಲ್ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ತಲಾ ಒಬ್ಬರು ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ಅಬ್ಸರವರ ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಓರ್ವ ಸಹಾಯಕ ಚುನಾವಣಾಧಿಕಾರಿಗಳು ಇರುತ್ತಾರೆ ಎಂದು ಅವರು ತಿಳಿಸಿದರು.

ಸೇವಾ ಮತದಾರರಿಂದ ಸ್ವೀಕರಿಸಲ್ಪಡುವ ಅಂಚೆ ಮತಪತ್ರಗಳ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಸಲುವಾಗಿ ಒಂದು ಟೇಬಲ್ ಮಾಡಲಾಗಿದ್ದು, ಓರ್ವ ಸ್ಕ್ಯಾನಿಂಗ್ ಮೇಲ್ವಿಚಾರಕರು, ಓರ್ವ ಅಸಿಸ್ಟಂಟ್ ಹಾಗೂ ಇಬ್ಬರು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಕಾಯ್ದಿಟ್ಟ ಸಿಬ್ಬಂದಿಗಳು ಸೇರಿದಂತೆ ಎಣಿಕೆ ಕಾರ್ಯಕ್ಕೆ ಒಟ್ಟು 63 ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಮತ ಎಣಿಕೆ ಕೇಂದ್ರದಲ್ಲಿ ಸುತ್ತುವಾರು ಮತ ಎಣಿಕೆಯಾದ ವಿವರವನ್ನು ಪಬ್ಲಿಕ್ ಅಡ್ರೆಸ್ ಸಿಸ್ಟಮ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಅಭ್ಯರ್ಥಿ ಹಾಗೂ ಅಭ್ಯರ್ಥಿಯ ಏಜೆಂಟರಿಗೆ ಮತ ಎಣಿಕೆ ಪೂರ್ವ ದಿಕ್ಕಿನಲ್ಲಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಮತ ಎಣಿಕೆ ಏಜೆಂಟರಿಗೆ ಮುಖ್ಯ ದ್ವಾರದಲ್ಲಿ ಪ್ರವೇಶ ಇರುವದಿಲ್ಲ. ಸದರಿ ವಾಹನಗಳಿಗೆ ಮುಖ್ಯ ದ್ವಾರದ 200 ಮೀಟರ್ ಮುಂಚಿತವಾಗಿ ಇರುವ ಜಿಲ್ಲಾ ಪಶು ಸಂಗೋಪನಾ ಆಸ್ಪತ್ರೆ ಎದುರುಗಡೆ ಹೋಗುವ ರಸ್ತೆ ಮುಖಾಂತರ ಮತ ಎಣಿಕೆ ಕೇಂದ್ರದಿಂದ ಸುಮಾರು 200 ಮೀಟರ್ ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮತ ಎಣಿಕೆ ಸಿಬ್ಬಂದಿಗಳಿಗೆ ಹಾಗೂ ಮಾಧ್ಯಮದವರಿಗೆ ಮಾತ್ರ ಮುಖ್ಯ ದ್ವಾರದಿಂದ ಪ್ರವೇಶವಿರುತ್ತದೆ. ಎಣಿಕೆ ಕೇಂದ್ರದಲ್ಲಿ ಮೊಬೈಲ್ ಫೋನ್ ನಿರ್ಬಂಧಿಸಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

### ನಿಷೇದಾಜ್ಞೆ ಜಾರಿ...

**ಮೇ 4ರ ಬೆಳಿಗ್ಗೆ 6 ಗಂಟೆಯಿಂದ ಮೇ 5ರ ಬೆಳಿಗ್ಗೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ನ್ನು ಜಾರಿ ಮಾಡಿ ಆದೇಶಿಸಲಾಗಿದೆ. ಅಲ್ಲದೇ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ 10 ಕಿ.ಮೀ ವ್ಯಾಪ್ತಿಯಲ್ಲಿ ಮೇ 4ರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟಲ್, ಕ್ಲಬ್, ಡಾಬಾ ಮತ್ತು ಇನ್ನಿತರ ಸ್ಥಳಗಳಲ್ಲಿ ಮದ್ಯ ಮಾರಾಟ ಹಾಗೂ ಸರಬರಾಜು ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ.**

# ಯಾವುದೇ ರಾಜಕೀಯ ಬಣ್ಣ ಬೇಡ



• ಮಲ್ಲಮ್ಮ ನುಡಿ ವಾರ್ತೆ ಮೈಸೂರು

ಬಿಎಸ್‌ವೈ ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಯಾವುದೇ ರಾಜಕೀಯ ಬಣ್ಣ ಕಟ್ಟಬೇಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ವರದಿಗಾರರ ಜೊತೆ ಮಾತನಾಡಿ, ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮೀಜಿಯವರಿಗೆ ಆಹ್ವಾನ ನೀಡಿದ್ದೇವೆ. ಚಿತ್ರದುರ್ಗದ ಕಾರ್ಯಕ್ರಮಕ್ಕೆ ಬರಲು ಅವರು ಒಪ್ಪಿದ್ದಾರೆ. ನಾಡು ಕಂಡ ಅಪ್ರತಿಮ ಹೋರಾಟಗಾರ, ರೈತನಾಯಕ, ಬಡವರ ಬಂಧು, ಮಾಜಿ ಮುಖ್ಯಮಂತ್ರಿ ಅವರ ಅಭಿಮಾನೋತ್ಸವ ಅದ್ದೂರಿಯಾಗಿ, ಐತಿಹಾಸಿಕವಾಗಿ ನೆರವೇರಲಿದೆ. ಬಿಎಸ್‌ವೈ ಅವರನ್ನು ಸ್ವಾಗತಿಸಲು ನಾಡಿನ ರೈತರು, ತಾಯಂದಿರು ಆಗಮಿಸಲಿದ್ದಾರೆ ಎಂದು ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಪಯಣದ ಐವತ್ತು ವರ್ಷಗಳ ಸಂಭ್ರಮಾಚರಣೆ ಅಭಿಮಾನೋತ್ಸವದ ಅಂಗವಾಗಿ ಬಿಎಸ್‌ವೈ ಅವರು 8ರ ಸಂಜೆ 5ಕ್ಕೆ ಚಿತ್ರದುರ್ಗ ನಗರಕ್ಕೆ ಪುರಪ್ರವೇಶ ಮಾಡಲಿದ್ದಾರೆ. ಅದ್ದೂರಿಯಾಗಿ ಮಿನಿ ದಸರಾ ರೀತಿ ಮೆರವಣಿಗೆ ನಡೆಸಲಾಗುವುದು. 25 ಕ್ಕೂ ಹೆಚ್ಚು ಕಲಾತಂಡಗಳು ಭಾಗವಹಿಸಲಿವೆ ಎಂದಿದ್ದಾರೆ.

# ಸಿಲಿಂಡರ್ ದರ ಏರಿಕೆ: ಸಚಿವ ಖಂಡ್ರೆ ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪಂಚ ರಾಜ್ಯಗಳ ಮತದಾನ ಮುಗಿದ ಕೂಡಲೇ, ಕೇಂದ್ರ ಬಿಜೆಪಿ ಸರ್ಕಾರ ವಾಣಿಜ್ಯ ಬಳಕೆ ಅಡುಗೆ ಸಿಲಿಂಡರ್ ಹಾಗೂ ಆಟೋ ಗ್ಯಾಸ್ ದರ ಹೆಚ್ಚಳ ಮಾಡಿದ್ದು ತನ್ನ ಬಡವರ ವಿರೋಧಿ ನೀತಿಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮಾರ್ಚ್ 1ರಿಂದ ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ದರ 1300 ರೂ. ಹೆಚ್ಚಳವಾಗಿದೆ. ಹೊಟೆಲ್ ಮಾಲೀಕರು ಅನಿವಾರ್ಯವಾಗಿ ಊಟ, ತಿಂಡಿ, ಕಾಫಿ, ಟೀ ದರ ಹೆಚ್ಚಳ ಮಾಡುತ್ತಾರೆ. ಇದರ ಹೊರೆ ಶ್ರೀಸಾಮಾನ್ಯನ ಮೇಲೆ ಬೀಳಲಿದೆ. ಮತದಾನ ಮುಗಿದ ಕೂಡಲೇ ಕೇಂದ್ರ ಬಿಜೆಪಿ ಸರ್ಕಾರ ಬಡ, ಮಧ್ಯಮವರ್ಗದವರ ಬದುಕನ್ನು ದುರ್ಬರ ಮಾಡಲು ಹೊರಟಿದೆ ಎಂದು ತಿಳಿಸಿದ್ದಾರೆ. ಮಧ್ಯಪ್ರಾಚ್ಯದ ಸಂಘರ್ಷದ ಹಿನ್ನೆಲೆಯಲ್ಲಿ ಸಮರ್ಪಕವಾಗಿ ಆಡುಗೆ ಅನಿಲ ಪೂರೈಕೆ ಆಗದೆ ಈಗಾಗಲೇ ಹಲವು ಹೊಟೆಲ್ ಗಳು ಬಂದ್ ಆಗಿದ್ದು, ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಈ ಸನ್ನಿವೇಶದಲ್ಲಿ 993 ರೂ. ಪ್ರತಿ ಸಿಲಿಂಡರ್ ಗೆ ಹೆಚ್ಚಳ ಮಾಡುವ ಮೂಲಕ ಕಾರ್ಮಿಕ ದಿನದಂದು ಕೇಂದ್ರ ಸರ್ಕಾರ ತನ್ನ ಕಾರ್ಮಿಕ ವಿರೋಧಿ ನೀತಿ ಪ್ರದರ್ಶಿಸಿದೆ ಎಂದಿದ್ದಾರೆ.

# ದುಡಿಯುವ ವರ್ಗದ ಮೇಲಿನ ದಬ್ಬಾಳಿಕೆಯನ್ನು ತಡೆಗಟ್ಟಿ



**ಕಲಬುರಗಿ:** ಪ್ರತಿ ವರ್ಷ ಮೇ 1 ರಂದು ಭಾರತ ಸೇರಿದಂತೆ ವಿಶ್ವದಾದ್ಯಂತ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತದೆ. ದುಡಿಯುವ ವರ್ಗದ ಮೇಲಿನ ದಬ್ಬಾಳಿಕೆಯನ್ನು ತಡೆಗಟ್ಟಿ, ಅವರ ಹಕ್ಕುಗಳ ಹಾಗೂ ಸಾಮರ್ಥ್ಯದ ಅರಿವು ಮೂಡಿಸುವುದು ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಹೇಳಿದರು.

ಶನಿವಾರ ನಗರದ ಶಹಾಬಾದ ರಸ್ತೆಯ ನಂದೂರು ವಸತಿ ಪ್ರದೇಶದ ಶ್ರೀ ವೆಂಕಟೇಶ್ವರ ಪ್ರೈಮರಿ ಸ್ಕೂಲ್‌ನಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಅಂಗವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲೂ ಕಾರ್ಮಿಕರ ಬೆವರಿನ ಶ್ರಮ ಅಡಗಿದೆ. ಕಾರ್ಮಿಕರು ತಮ್ಮ ದುಡಿಮೆಯಿಂದ ಕುಟುಂಬವನ್ನು ಪೋಷಿಸುವುದರ ಜೊತೆಗೆ ಸಂಸ್ಥೆಯ ಮತ್ತು ದೇಶದ ಅಭಿವೃದ್ಧಿಗೂ ಕಾರಣರಾಗುತ್ತಾರೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಶರಣಪ್ಪ ಆರ್. ಹಳಮನಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾರ್ಮಿಕ ದಿನಾಚರಣೆಯು ಕಾರ್ಮಿಕರ ಸಂಘಟಿತ ಚಳುವಳಿಯ ಫಲವಾಗಿ ಹುಟ್ಟಿಕೊಂಡಿದೆ. ದುಡಿಮೆಗೆ ಎಂಟು ಗಂಟೆ, ಮನರಂಜನೆಗೆ ಎಂಟು ಗಂಟೆ ಮತ್ತು ವಿಶ್ರಾಂತಿಗೆ ಎಂಟು ಗಂಟೆ ಎಂಬ ತತ್ವವನ್ನು ಇದು ಪ್ರತಿಪಾದಿಸುತ್ತದೆ. ಭಾರತದಲ್ಲಿ ಮೊದಲ ಬಾರಿಗೆ 1923ರಲ್ಲಿ ಚೆನ್ನೈನಲ್ಲಿ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಈ ದಿನವನ್ನು ಆಚರಿಸಿತ್ತು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಫುಡ್ ಪ್ರಾ.ವೇಟ್ ಲಿಮಿಟೆಡ್, ವೆಂಕಟೇಶ್ವರ, ಮ್ಯಾನೆಜರ್ ಹೇಮಚಂದ್ರಬಾಬು, ಅಸ್ಪಾಕ್, ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರುಗಳಾದ ರವೀಂದ್ರಕುಮಾರ, ಪ್ರಸನ್ನ ಕೆ.ಎಸ್, ಕವಿತಾ, ವೆಂಕಟೇಶ್ವರ ಪ್ರಾ.ಲೀ, ಕಾರ್ಮಿಕರು ಮತ್ತು ಸಿಬ್ಬಂದಿಗಳ ಭಾಗವಹಿಸಿದರು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೋಸೈಟಿ ಯೋಜನ ನಿರ್ದೇಶಕ ಸಂತೋಷ ಕುಲಕರ್ಣಿ ಕಾರ್ಯಕ್ರಮ ಸ್ವಾಗತಿಸಿದರು. ರವೀಂದ್ರಕುಮಾರ ವಂದಿಸಿದರು.

# ಎನ್‌ಪಿಎ ಭತ್ಯೆ ಹಠಾತ್ ತಡೆ: ಆತಂಕ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪಶುವೈದ್ಯಕೀಯ ಶಿಕ್ಷಕರಿಗೆ ಏಳು ವರ್ಷಗಳಿಂದ ನೀಡಲಾಗುತ್ತಿದ್ದ ನಾನ್ ಪ್ರಾಕ್ಟಿಸಿಂಗ್ ಅಲೋವನ್ಸ್ (ಎನ್‌ಪಿಎ) ಭತ್ಯೆಯನ್ನು ಹಠಾತ್ತನೆ ನಿಲ್ಲಿಸುವಂತೆ ಸರ್ಕಾರ ನೀಡಿರುವ ನಿರ್ದೇಶನ ಶಿಕ್ಷಕರನ್ನು ಆರ್ಥಿಕ ಸಂಕಷ್ಟಕ್ಕೆ ದೂಡಿದೆ ಎಂದು ಕರ್ನಾಟಕ ಪಶು ವೈದ್ಯಕೀಯ ಪಶು, ಮೀನುಗಾರಿಕೆಗಳ ವಿಶ್ವವಿದ್ಯಾಲಯ ಬೀದರ್ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಚನ್ನಪ್ಪಗೌಡ ಬಿರಾದಾರ ಕಳವಳ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತು ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆಗಳ ವಿಶ್ವವಿದ್ಯಾಲಯ ಬೀದರ ಶಿಕ್ಷಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಶುವೈದ್ಯಕೀಯ ಶಿಕ್ಷಕರು ಪಡೆಯುತ್ತಿರುವ ಎನ್‌ಪಿಎ ಭತ್ಯೆ ನಿಯಮಬಾಹಿರವಾಗಿಲ್ಲ. ಸಂಪೂರ್ಣ ಕಾನೂನುಬದ್ಧವಾಗಿದೆ ಎಂದು ತಿಳಿಸಿದ್ದಾರೆ.

ಸಂಘದ ಸಂಘಟನಾ ಕಾರ್ಯದರ್ಶಿ ವಿದ್ಯಾಸಾಗರ, ಸಂಘದ ಕಲ್ಯಾಣ ಕರ್ನಾಟಕ ವಿಭಾಗದ ಉಪಾಧ್ಯಕ್ಷ ಡಾ. ಶ್ರೀನಿವಾಸ ಶೆಟ್ಟಿ, ಮಹಿಳಾ ಘಟಕದ ಶಿಕ್ಷಕರಾದ ಡಾ. ಮಾಲಾಶ್ರೀ ಇತರರು ಹಾಜರಿದ್ದರು.

**ಮೂಕವೇದನೆ ಆಲಿಸುವವರು ಯಾರು?**

ಮಹಾವಿದ್ಯಾಲಯಗಳು ರೈತರಿಗೆ ಉಚಿತ ಚಿಕಿತ್ಸೆ, ರೋಗಪತ್ತೆ ಸೇರಿದಂತೆ ಹಲವು ರೀತಿಯ ಸೇವೆಯು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡುತ್ತಿವೆ. ಕೇಂದ್ರ ಸರ್ಕಾರದ 2016ರ ವಿಸಿಐ, ಐಸಿಎಆರ್ ಆದೇಶಗಳು ಪಶುವೈದ್ಯಕೀಯ ಬೋಧಕ ಸಿಬ್ಬಂದಿಗಳು ಎನ್‌ಪಿಎ ಪಡೆಯಲು ಅರ್ಹರು ಎಂದು ಹೇಳುತ್ತವೆ. 2017ರಲ್ಲಿ ಹಣಕಾಸು ಸಚಿವಾಲಯ ಶೇ. 20 ರಷ್ಟು ಭತ್ಯೆ ನೀಡಬೇಕೆಂದು ಆದೇಶ ನೀಡಿದೆ. ಇದೀಗ ಹಠಾತ್ತನೆ ವೇತನ ಕಡಿತಗೊಳಿಸಿದರೆ ಮೂಕ ಪ್ರಾಣಿಗಳ ಸೇವೆ ಮಾಡುವ ಪಶುವೈದ್ಯಕೀಯ ಶಿಕ್ಷಕರ ಮೂಕವೇದನೆ ಆಲಿಸುವವರು ಯಾರು ಎಂದು ಬಿರಾದಾರ ಪ್ರಶ್ನಿಸಿದ್ದಾರೆ.

### ಎನ್‌ಪಿಎ ಘಟಕ ಸೇರಿಸಲು ಸೂಚನೆ

**7ನೇ ಕೇಂದ್ರ ವೇತನ ಆಯೋಗದ ಅಡಿಯಲ್ಲಿ ರಾಜ್ಯದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯು ವೇತನ ಪರಿಷ್ಕರಣೆ ಜಾರಿಗೊಳಿಸುವಾಗ ಬೋಧಕರಿಗೆ ಎನ್‌ಪಿಎ ಘಟಕ ಸೇರಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ವಿ.ವಿ.ಗೆ ಸೂಚನೆ ನೀಡಿದೆ. ಅದರಂತೆ ಅಂತೀಮವಾಗಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಆದೇಶ ಹೊರಡಿಸಿ 01-04-2019 ರಂದು ವೇತನದಲ್ಲಿ ಎನ್‌ಪಿಎ ಸೇರಿಸುವುದು ವಿಶ್ವವಿದ್ಯಾಲಯದ ಏಕಪಕ್ಷೀಯ ನಿರ್ಧಾರವಾಗಿರಲಿಲ್ಲ. ಇದು ಕರ್ನಾಟಕ ಸರ್ಕಾರದ ಪಶಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಯ ನಿರ್ದೇಶನದ ಮೇಲೆಯೇ ಆರಂಭಗೊಂಡಿದೆ ಎಂದು ಬಿರಾದಾರ ವಿವರಿಸಿದ್ದಾರೆ.**

# ವಿವಾಹ ಮಹೋತ್ಸವ



**ಹುಣಸೂರು:** ಉಪ ವಿಭಾಗಧಿಕಾರಿ ಕಾವ್ಯರಾಣಿ ರವರ ವಿವಾಹ ಮಹೋತ್ಸವವು ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿಯ ಸಮತಾ ಕಲ್ಯಾಣ ಮಂಟಪದಲ್ಲಿ ನೇರವೇರಿದ್ದು, ವಿವಾಹ ಮಹೋತ್ಸವದಲ್ಲಿ ಹುಣಸೂರಿನ ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಭಾಗವಹಿಸಿ ನೂತನ ವಧು-ವರರಿಗೆ ಶುಭ ಕೋರಿದರು. ಈ ವೇಳೆ ಮಾಜಿಶಾಸಕರಾದ ಎಚ್ ಪಿ ಮಂಜುನಾಥ್ ರವರನ್ನು ಸನ್ಮಾನಿಸಿ ಗೌರವಿಸಿದರು.

ಹುಣಸೂರು ತಹಸಿಲ್ದಾರ್ ಮಂಜುನಾಥ್ ಜೆ., ಉಪವಿಭಾಧಿಕಾರಿಗಳ ಕಚೇರಿ ತಹಸಿಲ್ದಾರ್ ಯಧುಗಿರೀಶ್ ಶ್ರೀ ಪಾದ ಸೇರಿದಂತೆ ಕಂದಾಯ ಇಲಾಖೆ ಸಿಬ್ಬಂದಿಗಳು ಇದ್ದರು.

# ಬೀರೇಶ್ವರ ದೇವಾಲಯದಲ್ಲಿ ದಿನಂಪ್ರತಿ ವಿಶೇಷ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಸುತ್ತೂರು

ವರುಣಾ ಕ್ಷೇತ್ರಕ್ಕೆ ಸೇರಿರುವ ವರಕೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 48 ಗಡಿಗಳ ದೊರೆ ಎಂದೇ ಪ್ರಸಿದ್ದಿಯಾಗಿರುವ ಶ್ರೀ ಬೀರೇಶ್ವರ ದೇವಾಲಯದಲ್ಲಿ 48 ದಿನಗಳ ಮಂಡಲ ಪೂಜಾ ಕಾರ್ಯಕ್ರಮ ಸಂಪನ್ನಗೊಂಡ ಬೆನ್ನಲ್ಲೇ, ಈ ಭಾಗದಲ್ಲಿ ಸುರಿದ ಭಾರೀ ಮಳೆ ಸ್ಥಳೀಯರಲ್ಲಿ ಹರ್ಷವನ್ನುಮಟು ಮಾಡಿದೆ.

ಈ ಬಗ್ಗೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮುದ್ದುರಾಮೇಗೌಡ ಮತ್ತು ಬಸವರಾಜು ಅವರು ಜಂಟಿಯಾಗಿ ಮಾತನಾಡಿ, ಶ್ರೀ ಬೀರೇಶ್ವರ ಸ್ವಾಮಿಯ ಕೃಪೆ, ಆಶೀರ್ವಾದದಿಂದ ವರುಣನ ಆಗಮನವಾಗಿದೆ. ಪೂಜಾ ಕಾರ್ಯ ಮುಗಿದ ಬೆನ್ನಲ್ಲೇ ವರುಣಾ ಕ್ಷೇತ್ರ ವ್ಯಾಪ್ತಿಯಲ್ಲಿ ಭರ್ಜರಿ ಮಳೆ ಬಿದ್ದಿದ್ದು, ರೈತಾಪಿ ವರ್ಗ ಸಹ ಸಂತಸದಲ್ಲಿದೆ. ಅಲ್ಲದೇ$ ಕೃಷಿ ಚಟುವಟಿಕೆಯಲ್ಲೂ ಅನ್ನದಾತರು



ತೊಡಗಿಕೊಂಡಿದ್ದಾರೆ ಎಂದರು.

ಈ ಮುಂಗಾರು ಮಳೆ ಹಿನ್ನಲೆಯಲ್ಲಿ ದಿನನಿತ್ಯ ಶ್ರೀ ಸ್ವಾಮಿಗೆ ವಿಶೇಷ ಪೂಜಾ-ಕೈಂಕರ್ಯಗಳು ಜರುಗಲಿದ್ದು, ಪ್ರತಿದಿನವೂ ದೇವಾಲಯ ತೆರೆದಿರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದೇವರ ದರ್ಶನ ಪಡೆದು ಪುನೀತರಾಗಬೇಕೆಂದು ಇದೇ ವೇಳೆ ಮನವಿ ಮಾಡಿದರು. ಮಂಡಲ ಪೂಜೆಯು ಮನಸ್ಸು ಮತ್ತು ದೇಹದ ಶುದ್ಧೀಕರಣಕ್ಕೆ, ಹಾಗೂ ಜೀವನದ ಸಮಸ್ಯೆಗಳ ನಿವಾರಣೆಗೆ ಮಾಡಲಾಗುತ್ತದೆ ಎಂದ ಅವರು, ಹಿಂದೂ ಧರ್ಮದಲ್ಲಿ, ವರುಣ ದೇವನು ಜಲರಾಶಿಗಳು ಮತ್ತು ಮಳೆಗೆ ಅಧಿಪತಿಯಾಗಿದ್ದಾನೆ. ಆದ್ದರಿಂದ ಮಳೆಗಾಗಿ ನಡೆಸುವ ಪೂಜೆಗಳಲ್ಲಿ ವರುಣನಿಗೆ ವಿಶೇಷ ಪ್ರಾಮುಖ್ಯತೆ ನೀಡಲಾಗುತ್ತದೆ ಎಂದರಲ್ಲದೇ, ಇದು ಧಾರ್ಮಿಕ ನಂಬಿಕೆಯಾಗಿದೆ ಎಂದು ವಿವರಿಸಿದರು. ಮಂಡಲ ಪೂಜೆಯನ್ನು ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಒಮ್ಮೆ ಕೈಗೊಳ್ಳಬಹುದಾದ ಪೂಜಾ ವಿಧಾನ ಎಂದು ಹೇಳಲಾಗುತ್ತದೆ. ಅತ್ಯಂತ ಶಕ್ತಿ ಹಾಗೂ ಪವಿತ್ರತೆಯಿಂದ ಕೂಡಿರುವ ಈ ಮಂಡಲ ಪೂಜೆಯನ್ನು ಭಕ್ತನು ಅತ್ಯಂತ ಭಕ್ತಿ ಭಾವದಿಂದ ನಿರ್ವಹಿಸಬೇಕು. ಆಗ ಮಾತ್ರ ಅವನು ಜೀವನದಲ್ಲಿ ಬಯಸಿದ್ದು ದೊರೆಯುತ್ತದೆ. ಇದೇ ರೀತಿ ಬೀರೇಶ್ವರ ದೇವಾಲಯದಲ್ಲಿ ಪೂಜೆ ನೆರವೇರಿಸಿ, ಅದು ಸಂಪನ್ನಗೊಂಡ ಮಾರನೇ ದಿನವೇ ವರಕೋಡು ಸೇರಿದಂತೆ ಇನ್ನಿತರ ಭಾಗಗಳಲ್ಲಿ ಮಳೆಯಾಗಿರುವುದು ದೇವರ ಆಶೀರ್ವಾದದ ಸಂಕೇತ ಎಂದು ನಂಬಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಡೈರಿ ಅಧ್ಯಕ್ಷ ಶಿವಣ್ಣ, ಪಶು ಇಲಾಖೆ ಸ್ವಾಮಿ, ಮುದ್ದುಬಸವ, ಕೃಷ್ಣ, ದೊಡ್ಡರಾಮೇಗೌಡ, ಎಂಡಿಸಿಸಿ ಬ್ಯಾಂಕ್ ಚಂದ್ರು, ಯುವ ಕಾಂಗ್ರೆಸ್ ಮುಖಂಡರಾದ ರಾಜ ನಾಗರಾಜು, ಬೀರಪ್ಪ, ಬೋರಪ್ಪ, ಶಿವಣ್ಣ, ಮಹದೇವು. ನಾಗರಾಜು, ಸಿದ್ದರಾಮಯ್ಯಗೌಡ, ಸಾಕಪ್ಪ, ವರಕೊಡು ಉಮೇಶ್, ಜವರೇಗೌಡ, ಹಳ್ಳಿಕಾರ್ ಹೋರಿ ಮಹದೇವ್, ಬಸವರಾಜು, ಶಿವನಂಜೇಗೌಡ, ಗಡಿ ಕಟ್ಟಿ ಯಜಮಾನರು ಹಾಜರಿದ್ದರು.

# ಗೌತಮ ಬುದ್ಧರ ತತ್ವ ಸಿದ್ಧಾಂತಗಳು ವಿಶ್ವದಲ್ಲೇ ಶ್ರೇಷ್ಠ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಭಗವಾನ್ ಗೌತಮ ಬುದ್ಧರ ತತ್ವಸಿದ್ಧಾಂತಗಳು ವಿಶ್ವದಲ್ಲಿ ಪ್ರಭಾವ ಬೀರಿದ್ದು, ನಾಗರಿಕತೆ ಬದಲಾವಣೆಯಲ್ಲಿಯೂ ಅವರ ಮೂಲ ಸಿದ್ಧಾಂತಗಳು ಅಪಾರ ಕೊಡುಗೆ ನೀಡಿವೆ ಎಂದು ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೇಳಿದರು.

ನಗರದ ಲುಂಬಿನಿ ಉದ್ಯಾನವನದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಭಗವಾನ್ ಬುದ್ಧ ಜಯಂತ್ಯೋತ್ಸವ ಸಮಿತಿ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಭಗವಾನ್ ಬುದ್ಧರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಬೋಧಿ ಸಸಿಗೆ ನೀರುಣಿಸಿ ಉದ್ಘಾಟಿಸಿ, ಭಗವಾನ್ ಬುದ್ಧರ ಭಾವಚಿತ್ರ ಹಾಗೂ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿದರು.

ಜಾತಿ ವ್ಯವಸ್ಥೆಯನ್ನು ಪ್ರಪ್ರಥಮ ಬಾರಿಗೆ ವಿರೋಧಿಸಿದವರು ಗೌತಮ ಬುದ್ಧರು. ಭಗವಾನ್ ಬುದ್ಧರ ಅಹಿಂಸಾ ಮಾರ್ಗ, ತತ್ವಜ್ಞಾನವು ಎಲ್ಲರ ಜೀವನಕ್ಕೆ ಸಂದೇಶವಾಗಿದೆ. ಹದಿಮೂರನೇ ಶತಮಾನದಲ್ಲಿ ವಿಶ್ವದ ಭಾರತ, ದಕ್ಷಿಣ ಪೂರ್ವ ಏಷಿಯಾ, ಅಫ್ಘಾನಿಸ್ತಾನ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಬೌದ್ದ ಧರ್ಮ



ಹೆಚ್ಚಾಗಿ ಹರಡಿತ್ತು ಎಂದು ಅವರು ಸಾಮ್ರಾಟ ಅಶೋಕರ ಕಾಲಾವಧಿಯಲ್ಲಿ ಇವರ ಸಂದೇಶಗಳು, ಕ್ರಾಂತಿಕಾರಿ ವಿಚಾರಧಾರೆಗಳು ಸ್ಥಳಿಯ ಭಾಷೆಯಲ್ಲಿ ಎಲ್ಲೆಡೆ ವ್ಯಾಪಿಸಿದವು. ಡಾ.ಅಂಬೇಡ್ಕರ್ ಅವರ ಅವಧಿಯಲ್ಲಿ ದೇಶ, ವಿಶೇಷವಾಗಿ ಕರ್ನಾಟಕ, ಮಹಾರಾಷ್ಟ್ರದಲ್ಲೂ ಹೆಚ್ಚಿನ ಖ್ಯಾತಿ ಪಡೆದವು. ಧಿಕ್ಷಾ ಭೂಮಿಗೆ ಹೋಗುವ ನಾಗರಿಕರಿಗೂ ಸರ್ಕಾರ ಇಂದು ಅನುವು ಮಾಡಿಕೊಟ್ಟಿದ್ದು, ಈ ಧರ್ಮ ಸಮಾಜದ ಮೇಲೂ ಅಗಾಧವಾದ ಪ್ರಭಾವ ಬೀರುತ್ತಿದೆ ಎಂದು ಹೇಳಿದರು.

ಭಗವಾನ್ ಗೌತಮ್ ಬುದ್ಧರ ತತ್ವ ಸಿದ್ಧಾಂತ, ಸಂದೇಶಗಳನ್ನು ಸಮಾನತೆ, ಸರ್ವಾಂಗೀಣ ಅಭಿವೃದ್ಧಿಗೆ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಎಲ್ಲರೂ ಚಿಂತನೆ ನಡೆಸುವಂತೆ ಅವರು ಈ ಸಂದರ್ಭದಲ್ಲಿ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ, ಸಾಹಿತಿ ರವೀಂದ್ರನಾಥ ಹೊಸಮನಿ ಅವರು ಭಗವಾನ್ ಗೌತಮ್ ಬುದ್ಧರ 2570ನೇ ಜಯಂತ್ಯೋತ್ಸವ ಇದಾಗಿದೆ. ಲುಂಬಿನಿವನದಲ್ಲಿ ಜನಿಸಿದ್ದ ಗೌತಮ್ ಬುದ್ಧ ಮುಂದೆ ವಿಶ್ವಕ್ಕೆ ಶಾಂತಿ, ಜ್ಞಾನ ತೋರಿದರು. ಪಂಚಶೀಲ ತತ್ವ ಸಿದ್ಧಾಂತ ,ಅಷ್ಟಾಂಗ ಮಾರ್ಗ ಹಾಗೂ 22 ಪ್ರತಿಜ್ಞೆಗಳನ್ನು ಬೋಧಿಸಿ, ಜೀವನದ ಯಶಸ್ಸಿಗೆ ದಾರಿ ತೋರಿದರು. ವಿಶ್ವಕ್ಕೆ ಜ್ಞಾನದ ಬೆಳಕನ್ನು ನೀಡಿ ಜಾತಿ, ಅಸಮಾನತೆ,ಲಿಂಗ ಅಸಮಾನತೆ, ಅಸ್ಪೃಶ್ಯತೆ ನಿವಾರಣೆ ಬಗ್ಗೆಯೂ ಸಾಮಾಜಕ್ಕೆ ಸನ್ಮಾರ್ಗ ತೋರಿದರು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಬುದ್ಧನ ಆವಶ್ಯಕತೆಗಳ ಬಗ್ಗೆಯೂ ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು, ಭಗವಾನ್ ಗೌತಮ್ ಬುದ್ಧ ವಿಶ್ವಕ್ಕೆ ಶಾಂತಿ ಸಂದೇಶ ಸಾರಿದರು. ಸತ್ಯ, ಅಹಿಂಸೆ, ಶಾಂತಿಮಂತ್ರ, ಪ್ರೀತಿ, ಕರುಣೆ, ಪ್ರಜ್ಞೆಗಳ ಬಗ್ಗೆ ದಾರಿ ತೋರಿದರು. ಬೌದ್ಧ ಧರ್ಮ ವಿಶ್ವದ ಅನೇಕ ದೇಶಗಳಲ್ಲಿ ವ್ಯಾಪಿಸಿದೆ. ಭಾರತ ಮಹಾನ್ ದೇಶ ಎಂದೆನಿಸಲು ಗೌತಮ್ ಬುದ್ಧ ಅವರು ಕಾರಣ ಎಂದು ಹೇಳಿ ಬುದ್ಧನ ಆದರ್ಶ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಪಾಲಿಸಿದಲ್ಲಿ ಜೀವನ ಯಶಸ್ವಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಬೌದ್ಧ ಧರ್ಮ ಗುರು ಬಂತೇಜಿ, ಭಗವಾನ್ ಗೌತಮ ಬುದ್ಧ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಾಬುರಾವ್ ಬುತಾಳೆ, ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)

## ಹಜ್ ಯಾತ್ರಾರ್ಥಿಗಳಿಗೆ ಸನ್ಮಾನ



**ಕೆಂಭಾವಿ:** ಪವಿತ್ರ ಮೆಕ್ಕಾ-ಮದೀನಾ ಯಾತ್ರೆಗೆ ತೆರಳುತ್ತಿರುವ ಪಟ್ಟಣದ ಮುಸ್ಲಿಂ ಬಾಂಧವರಾದ ಮಹ್ಮದ್ ರಫೀಕ್ ವಡಕೇರಿ, ಗೂಡುಸಾಬ್ ಮಳ್ಳಿ, ಮತ್ತು ಮಹೀಮೂದ್ ವಡಕೇರಿ, ಮೌಲಾನಾ ಗಾಲೀಬಖಾನ್ ಅವರಿಗೆ ಪಟ್ಟಣದ ದಸರಾ ಉತ್ಸವ ಸಮಿತಿ ಸಹಯೋಗದಲ್ಲಿ ಅದ್ದೂರಿ ಸನ್ಮಾನ ಹಮ್ಮಿಕೊಳ್ಳುವ ಮೂಲಕ ಮೈಸೂರು ದಸರೆಯ ಸಂಭ್ರಮದಂತೆಯೇ ಇಲ್ಲಿನ ದಸರಾ ಉತ್ಸವ ಸಮಿತಿಯು ಸಮಾಜಕ್ಕೆ ಸೌಹಾರ್ದತೆಯ ಸಂದೇಶ ರವಾನಿಸಲಾಗಿದೆ.

ಉತ್ಸವ ಸಮಿತಿಯ ಅಧ್ಯಕ್ಷರಾದ ಮಹಿಪಾಲರಡ್ಡಿ ಡಿಗ್ಗಾವಿ ನೇತೃತ್ವದಲ್ಲಿ ಅವರ ನಿವಾಸದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಯಾತ್ರಿಕರಿಗೆ ಹೂಮಾಲೆ ಹಾಕಿ, ಶಾಲು ಹೊದಿಸಿ ಆತ್ಮೀಯವಾಗಿ ಸತ್ಕರಿಸಲಾಯಿತು. ಬಳಿಕ ಮಾತನಾಡಿದ ಮಹಿಪಾಲರಡ್ಡಿ ಡಿಗ್ಗಾವಿ ಅವರು, "ಧರ್ಮ ಯಾವುದಾದರೂ ಗುರಿ ಒಂದೇ. ಹಜ್ ಯಾತ್ರೆಯು ಇಸ್ಲಾಂನಲ್ಲಿ ಅತ್ಯಂತ ಶ್ರೇಷ್ಠವಾದುದು. ನಮ್ಮ ಕೆಂಭಾವಿ ಪಟ್ಟಣವು ಮೊದಲಿನಿಂದಲೂ ಸರ್ವಧರ್ಮಗಳ ಶಾಂತಿಯ ತೋಟವಾಗಿ ಬೆಳೆದು ಬಂದಿದೆ. ಭಾರತದ ಶಾಂತಿ, ಸಮೃದ್ಧಿ ಹಾಗೂ ಈ ಭಾಗದ ಜನರ ಏಳಿಗೆಗಾಗಿ ಪ್ರಾರ್ಥಿಸಿ," ಎಂದು ಕೋರಿದರು.

ಈ ಸೌಹಾರ್ದ ಕೂಟದಲ್ಲಿ ಮುಸ್ಲಿಂ ಧರ್ಮಗುರುಗಳು, ದಸರಾ ಸಮಿತಿಯ ಪದಾಧಿಕಾರಿಗಳು ಹಾಗೂ ಗ್ರಾಮದ ಹಿರಿಯ ಮುಖಂಡರು ಭಾಗವಹಿಸಿ ಯಾತ್ರಿಕರಿಗೆ ಶುಭ ಹಾರೈಸಿದರು. ಯಾತ್ರೆಗೆ ಹೊರಡುವ ಮುನ್ನವೇ ದಸರಾ ಸಮಿತಿಯು ತೋರಿದ ಈ ಪ್ರೀತಿ ಮತ್ತು ಆದರಕ್ಕೆ ಯಾತ್ರಿಕರು ಮನಸಾರೆ ಧನ್ಯವಾದ ಅರ್ಪಿಸಿದರು.

## ಶೈಕ್ಷಣಿಕ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿ



**ಗಡಿಭಾಗದ ಸ್ವರ್ತೋಮುಖ ಅಭಿವೃದ್ಧಿಗಾಗಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ವಿದ್ಯಾ ದೇಗುಲ ತೆರೆದು ವೇದಿಕೆ ಕಲ್ಪಿಸಿ ಕೊಟ್ಟಿದ್ದಾರೆ. ಇದರ ಸದ್ಬಳಕೆ ಮಾಡಿಕೊಂಡು ಗ್ರಾಮೀಣ ಭಾಗದ ಬಡವರು, ರೈತರ ಮಕ್ಕಳು ನೀಟ್-ಜೆಇಇ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಪಡೆದು ಹೆಮ್ಮೆಯ ಸಾಧನೆ ಮಾಡುತ್ತಿದ್ದಾರೆ.**
**-ಗುರುಬಸವ ಪಟ್ಟದ್ದೇವರು, ಹಿರೇಮಠ ಸಂಸ್ಥಾನ ಭಾಲ್ಕಿ**

**ಭಾಲ್ಕಿ:** ಹಿಂದುಳಿದ ಹಣೆಪಟ್ಟಿ ಹೊತ್ತಿದ್ದ ಗಡಿಭಾಗ ಇದೀಗ ಶೈಕ್ಷಣಿಕ ಕ್ಷೇತ್ರದಲ್ಲಿ ಬಹುದೊಡ್ಡ ಕ್ರಾಂತಿ ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಅನುಭವ ಮಂಟಪದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಸೋಮವಾರ ಆಯೋಜಿಸಿದ್ದ 2027ನೇ ಸಾಲಿನ ಜೆಇಇ ಮೇನ್ಸ್ ಸಾಧಕರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಭಾಗದ ಸ್ವರ್ತೋಮುಖ ಅಭಿವೃದ್ಧಿ ದೃಷ್ಟಿಯಿಂದ ಡಾ.ಬಸವಲಿಂಗ ಪಟ್ಟದ್ದೇವರು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಯಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರಕ್ಕೆ ಒತ್ತು ನೀಡಲಾಗುತ್ತಿದೆ. ಹಾಗಾಗಿ ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅದ್ಭುತ ಸಾಧನೆಗೈಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಚನ್ನಬಸವೇಶ್ವರ ಗುರುಕುಲ ಜೆಇಇ ಮತ್ತು ನೀಟ್ ಸಾಧಕರ ಕೇಂದ್ರವಾಗಿ ಹೊರ ಹೊಮ್ಮುತ್ತಿದೆ. ಈ ರ್ವ 200 ವಿದ್ಯಾರ್ಥಿಗಳು ತರ್ಗಡೆ ಆಗಿರುವುದು ಹೆಮ್ಮೆ ತರಿಸಿದೆ. ಒಂದು ಕಾಲದಲ್ಲಿ ಜಿಲ್ಲೆಯಿಂದ ರ್ವಕ್ಕೆ ಕೇವಲ 15-20 ವಿದ್ಯಾರ್ಥಿಗಳು ಮಾತ್ರ ವೈದ್ಯಕೀಯ ಕ್ಷೇತ್ರ ಪ್ರವೇಶ ಪಡೆಯುತ್ತಿದ್ದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಈ ಭಾಗದ ಮಕ್ಕಳು ಬೆಂಗಳೂರು, ಮೈಸೂರು ಸೇರಿ ಮುಂತಾದ ಕಡೆಗಳಿಗೆ ತೆರಳುತ್ತಿದ್ದರು.

ಇದೀಗ ಪರಿಸ್ಥಿತಿ ಸಂಪರ್ಣ ಬದಲಾಗಿದೆ. ಎಲ್ಲರೂ ಪರಮ ಪೂಜ್ಯರು ಸ್ಥಾಪಿಸಿದ ವಿದ್ಯಾ ಸಂಸ್ಥೆಯ ಕಡೆಗೆ ಮುಖ ಮಾಡಿದ್ದಾರೆ. ಪೂಜ್ಯರ ಸಂಸ್ಥೆಯಲ್ಲಿ ಕಲಿಕೆಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ.

ಹಾಗಾಗಿ ಪ್ರತಿರ್ವ ಈ ಸಂಸ್ಥೆಯ ಒಂದರಿಂದಲೇ ಸುಮಾರು 200ಕ್ಕೂ ಅಧಿಕ ಮಕ್ಕಳು ವೈದ್ಯಕೀಯ ಕ್ಷೇತ್ರ ಪ್ರವೇಶ ಪಡೆಯುತ್ತಿದ್ದಾರೆ. ನೂರಾರು ಮಕ್ಕಳು ಜೆಇಇ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿ ಐಐಟಿ, ಎನ್‌ಐಟಿ, ಐಐಐಟಿಯಲ್ಲಿ ಪ್ರವೇಶ ಪಡೆದು ಈ ಭಾಗದ ಕರ್ತಿ ಹೆಚ್ಚಿಸುತ್ತಿದ್ದಾರೆ.

ಗ್ರಾಮೀಣ ಭಾಗದ ಬಡ ಮಕ್ಕಳು ಎಸ್ಸೆಸ್ಸೆಲ್ಸಿ-ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಪಡೆದು ಗಡಿ ಜಿಲ್ಲೆ ಬೀದರ್ ಕರ್ತಿ ರಾಜ್ಯ ಮತ್ತು ರಾಷ್ಟ್ರದಾದ್ಯಂತ ಪಸರಿಸುತ್ತಿದ್ದಾರೆ ಎಂದು ಹೆಮ್ಮೆ ವ್ಯಕ್ತ ಪಡಿಸಿದರು.

ಜೆಇಇಯಲ್ಲಿ ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳು ಯಾವುದೇ ವ್ಯಸನಗಳಿಗೆ ಬಲಿಯಾಗದೇ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿ ಕಲಿತ ವಿದ್ಯಾ ಸಂಸ್ಥೆ ಮತ್ತು ಹೆತ್ತವರಿಗೆ ಗೌರವ ತಂದು ಕೊಡಬೇಕು ಎಂದು ತಿಳಿಸಿದರು.

ಪ್ರಾಚರ್ಯ ಬಸವರಾಜ ಮೊಳಕೀರೆ ಮಾತನಾಡಿ, ಜೆಇಇ ಮೇನ್ಸ್ ಪರೀಕ್ಷೆಗೆ ದೇಶದಾದ್ಯಂತ ಸುಮಾರು 11 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ ನಮ್ಮ ಸಂಸ್ಥೆಯಿಂದ ಸುಮಾರು 200ಕ್ಕೂ ಅಧಿಕ ವಿದ್ಯಾರ್ಥಿಗಳು ತರ್ಗಡೆ ಆಗಿದ್ದಾರೆ.

ವಿದ್ಯಾರ್ಥಿ ವಿಶ್ವರಾಜ ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದು ಸಂಸ್ಥೆಯ ಕರ್ತಿ ಹೆಚ್ಚಿಸಿದ್ದಾರೆ ಎಂದು ತಿಳಿಸಿದರು. ಆಡಳಿತಾಧಿಕಾರಿ ಮೋಹನ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಸಾನ್ನಿಧ್ಯ ವಹಿಸಿದ್ದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಿದ್ಯಾರ್ಥಿಗಳು ಓದಿನ ಜತೆಗೆ ಉತ್ತಮ ಆಚಾರ, ವಿಚಾರ, ನಯ, ವಿನಯತೆ ಮೈಗೂಡಿಸಿಕೊಂಡು ನಾಡಿನ ಉತ್ತಮ ನಾಗರಿಕರಾಗಿ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದರು.

ಈ ಸಂರ್ದಭದಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಡಿವಾಳಪ್ಪ ಮಂಗಲಗಿ, ಉದ್ಯಮಿ ಜಯರಾಜ ಖಂಡ್ರೆ, ಬೀದರ್ ಲೋಕೋಪಯೋಗಿ ಇಲಾಖೆಯ ಕರ‍್ಯನರ‍್ವಾಹಕ ಅಭಿಯಂತರ ಶಿವಶಂಕರ ಕಾಮಶೆಟ್ಟಿ, ಪುಣೆಯ ಆದಾಯ ತೆರಿಗೆ ಆಯುಕ್ತ ಮಲ್ಲಿಕರ‍್ಜುನ ಉತ್ತುರೆ, ಬೆಂಗಳೂರಿನ ಟೆಕ್ನಿಕಲ್ ಸೇಲ್ಸ್ ಡಿಪರ‍್ಟ್‌ಮೆಂಟ್‌ನ ಜಿಎಂ ಸಂತೋಷ ವಿ ಸೇರಿದಂತೆ ಹಲವರು ಇದ್ದರು. ಮಧುಕರ್ ಗಾಂವಕರ್ ನಿರೂಪಿಸಿ, ವಂದಿಸಿದರು.

**ಜೆಇಇ ಸಾಧಕರಿಗೆ ಸನ್ಮಾನ:**

ಜೆಇಇ ಮೇನ್ಸ್‌ನಲ್ಲಿ ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದ ವಿಶ್ವರಾಜ, ಪ್ರೀತಂ, ಓಜಾಸ್ ಜೈನ್, ಶಿವಾಂಗ, ವಿವೇಕ, ಉಲ್ಲಾಸ್, ಆಜಿಂಕ್ಯ, ನಾರಾಯಣ ರೆಡ್ಡಿ, ಜಯಂತ, ಆರ್‍ತರೆಡ್ಡಿ, ಅರುಣ, ನಿಧಿ, ರವಿಕುಮಾರ, ಶ್ರೀಶೈಲ್, ಸೋಹನಕುಕಾರ, ರಿಷಬ್, ಋಗ್ವೇದ, ಆದಿತ್ಯ, ಸಾಕ್ಷಿ, ಶಿವಕುಮಾರ್, ಕರ‍್ತಿಕಿ, ಕಿಶನ ಸಿಂಗ್, ಶ್ರೇಯಸ್, ವೈಭವ ಮತ್ತು ಅನಂತ ಅವರನ್ನು ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸನ್ಮಾನಿಸಿ, ಅಭಿನಂದಿಸಿದರು.

# ಆಲ್ ಇಂಡಿಯಾ ಇಂಡಸ್ಟ್ರಿಯಲ್ ಎಗ್ಸಿಬಿಷನ್ ಚಾಲನೆ





• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ನಗರದ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್ ರಹಮತುಲ್ಲಾಹ್ ಅಲೈಹ್ ಅವರ 622ನೇ ಉರ್ಸ್ ಶರೀಫ್ ಅಂಗವಾಗಿ ಆಲ್ ಇಂಡಿಂ-ಯಾ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ನ್ನು ಭವ್ಯವಾಗಿ ಉದ್ಘಾಟಿಸಲಾಯಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ಹಜರತ್ ಡಾ. ಹಾಫಿಜ್ ಸಯ್ಯದ್ ಮೊಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್, ಸಜ್ಜಾದಾ ನಶೀನ್ ಅವರು ವಹಿಸಿದ್ದರು. ವಿಶೇಷ ಅತಿಥಿಗಳಾಗಿ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕರಾದ ಶ್ರೀ ಅಲ್ಲಂಪ್ರಭು ಪಾಟೀಲ್ ಹಾಗೂ ಏಗಲಾಂ ಅಧ್ಯಕ್ಷರಾದ ಜನಾಬ್ ಮಜ್ಹರ್ ಅಲ್ಲಂ ಖಾನ್ ಭಾಗವಹಿಸಿದರು.

ಕಾರ್ಯಕ್ರಮದ ವೇಳೆ ಹಜರತ್ ಡಾ. ಹಾಫಿಜ್ ಸಯ್ಯದ್ ಮೊಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್ ಅವರು ಇಬ್ಬರು ಗಣ್ಯ ಅತಿಥಿಗಳನ್ನು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ದರ್ಗಾ ಶರೀಫ್ ಕಾರ್ಯದರ್ಶಿಗಳಾದ ಜನಾಬ್ ಅಬ್ದುಲ್ ಬಸಿತ್ ಸಾಹೇಬ್ ಅವರು ಎಲ್ಲ ಗಣ್ಯ ಅತಿಥಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಇದಾದ ಬಳಿಕ ಎಗ್ಸಿಬಿಷನ್‌ನ ವಿವಿಧ ಪ್ರಮುಖ ಸ್ಟಾಲ್‌ಗಳನ್ನು ವೀಕ್ಷಿಸಲಾಯಿತು. ಈ ಸಂದರ್ಭದಲ್ಲಿ ವ್ಯಾಪಾರಿಗಳು ಹೂಮಾಲೆ ಹಾಗೂ ಶಾಲುಗಳನ್ನು ಅರ್ಪಿಸಿ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಡಾ. ಸಯ್ಯದ್ ಮುಸ್ತಫಾ ಹುಸೈನಿ ಸಾಹೇಬ್, ಜನಾಬ್ ಸಯ್ಯದ್ ಶಾಹ್ ತುಖಿಯುಲ್ಲಾ ಹುಸೈನಿ ಸಾಹೇಬ್, ಜನಾಬ್ ಸಯ್ಯದ್ ಮೊಹಮ್ಮದ್ ಹುಸೈನಿ ಸಾಹೇಬ್, ಜನಾಬ್ ಸಯ್ಯದ್ ಶಾಹ್ ಮುರ್ತುಜಾ ಹುಸೈನಿ ಸಾಹೇಬ್, ಜನಾಬ್ ಸಯ್ಯದ್ ಅಕೀಬ್ ಹುಸೈನಿ ಸಾಹೇಬ್, ಜನಾಬ್ ಮಿರ್ ರೌಫ್ ಅಲಿ ಖಾನ್ ಸೇರಿದಂತೆ ಖಾನ್ವಾಡಾ-ಎ-ಬಂದೇನವಾಜ್ ಕುಟುಂಬದ ಅನೇಕರು ಉಪಸ್ಥಿತರಿದ್ದರು.

ಇದೇ ವೇಳೆ ಕಾರ್ಪೊರೇಟರ್ ಖುಸ್ರೋ ಜಗೀರ್ದಾರ್, ಜನಾಬ್ ಮಜ್ಹರ್ ಹುಸೇನ್, ಜನಾಬ್ ಸಜ್ಜಾದ್ ಹುಸೇನ್ ಮನಿಯಾಲ್, ಡಾ. ಮಜೀದ್ ದಾಗಿ ಸೇರಿದಂತೆ ಉಲಮಾ, ಮಶಾಯಿಖ್, ಮುರೀದೀನ್, ಪಂಡಿತರು, ವೈದ್ಯರು, ಕಾರ್ಪೊರೇಟರ್‌ಗಳು ಹಾಗೂ ನಗರ ಮತ್ತು ಸುತ್ತಮುತ್ತಲಿನ ಸಾವಿರಾರು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಶಿವಶರಣೆ ಮಲ್ಲಮ್ಮಳ ವೈಭವದ ತೊಟ್ಟಿಲೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**



ಪಟ್ಟಣದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ 11ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಮಲ್ಲಮ್ಮನ ಪುರಾಣದ ಕಥಾನುಸಾರ ಮಲ್ಲಮ್ಮಾಂಬೆಯ ತೋಟಲೋತ್ಸವ ರವಿವಾರ ಸಂಜೆ ಸಂಭ್ರಮದಿಂದ ಜರುಗಿತು. ಈ ಸಂದರ್ಭದಲ್ಲಿ ತಾಯಿಯಂದಿರು ಮಲ್ಲಮ್ಮಾಂಬೆಗೆ ನಾಮಕರಣ ಮಾಡಿ, ಸಂಪ್ರದಾಯದಂತೆ ಸಾಮೂಹಿಕವಾಗಿ ತೊಟ್ಟಿಲು ಗೀತೆಗಳನ್ನು ಹಾಡುವ ಮೂಲಕ ಭಕ್ತಿ ಮೆರೆದರು.

ತೊಟ್ಟಿಲೋತ್ಸವದ ನಂತರ ಶಹಾಪುರದ ಏಕದಂಡಿಗಿ ಮಠದ ಪೀಠಾಧಿಪತಿಗಳಾದ ಪೂಜ್ಯ ಕಾಳಹಸ್ತೇಂದ್ರ ಮಹಾಸ್ವಾಮಿಗಳು ಮಲ್ಲಮ್ಮಾಂಬೆಯ ಚರಿತ್ರೆಯನ್ನು ಉಲ್ಲೇಖಿಸುತ್ತಾ "ಭಕ್ತಿಯಿಂದ ಭಜಿಸಿದರೆ ಭಗವಂತನ ಸಾಕ್ಷಾತ್ಕಾರ ಸಾಧ್ಯ ಎಂಬುದಕ್ಕೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಬದುಕೇ ಸಾಕ್ಷಿ. ಆಕೆ ಮನುಕುಲದ ಒಳಿತಿಗಾಗಿ ಜನಿಸಿ ಬಂದ ಪಾರ್ವತಿ ದೇವಿಯ ಪ್ರತಿರೂಪ. ಧರ್ಮ, ನೀತಿ, ಸಂಸ್ಕಾರ ಮತ್ತು ಸಂಸ್ಕೃತಿಯ ಶ್ರೇಷ್ಠತೆಯನ್ನು ಸಾರಿದ ಮಲ್ಲಮ್ಮನ ಬದುಕು ಇಂದಿನ ಮಹಿಳೆಯರಿಗೆ ಮಾದರಿಯಾಗಲಿ," ಎಂದು ಕರೆ ನೀಡಿದರು.

ಪುರಾಣದಲ್ಲಿ ಖ್ಯಾತ ಗಾಯಕ ಬಸವರಾಜ ಬಂಟನೂರ ಹಾಗೂ ತಬಲಾ ವಾದಕ ಯಮನೇಶ ಯಾಳಗಿ ಅವರಿಂದ ಜರುಗಿದ ಸಂಗೀತ ಕಾರ್ಯಕ್ರಮವು ಕೇಳುಗರ ಮನಸೂರೆಗೊಂಡಿತು. ಕಾರ್ಯಕ್ರಮದಲ್ಲಿ ಶ್ರೀಧರ ಸ್ವಾಮಿ ಹಿರೇಮಠ ಗೌರವ ಉಪಸ್ಥಿತಿ ವಹಿಸಿದ್ದರು. ನಂದಿಯ ಸ್ಥಾನದಲ್ಲಿ ಸಿದ್ದಣ್ಣ ಆಲ್ದಾಳ ಅವರೂ ಸೇರಿದಂತೆ ಸಂಸ್ಥೆಯ ಅಧ್ಯಕ್ಷರು, ಆಡಳಿತ ಮಂಡಳಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು.

## ಭಗವಂತನ ಸ್ಮರಣೆ ಮಾಡಬೇಕು: ಶ್ರೀ

• **ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ**



ಭಗವಂತ ಸುಂದರವಾದ ಪರಿಸರ ಪ್ರಕೃತಿಯನ್ನು ನಮಗೆಲ್ಲರಿಗೂ ಕೊಟ್ಟಿರುತ್ತಾನೆ, ಆ ಭಗವಂತನ ಉಪಕಾರವನ್ನು ನಾವುಗಳು ಸದಾ ಸ್ಮರಿಸುವ ಕಾಯಕ ನಮ್ಮದಾಗಬೇಕು ಎಂದು ಮಕ್ಕಳ್ಳಿಯ ಶಿವಾನಂದ ಸ್ವಾಮೀಜಿ ಅವರು ಆಗಿ ಹುಣ್ಣಿಮೆಯ ದಿನದ 81ನೇ ಶಿವಾನುಭವ ಗೋಷ್ಠಿಯಲ್ಲಿ ದಿವ್ಯ ಸಾನಿದ್ಯವಹಿಸಿ ಮಾತನಾಡಿ, ಇನ್ನೋಬ್ಬರಿಗೆ ಕೆಡಕನ್ನು ಬಯಸದೆ, ಅವರ ಮನಸ್ಸಿಗೆ ನೂವುಂಟು ಮಾಡಲಾರದೆ ಒಳಿತು ಮಾಡುವ ಕಾರ್ಯಮಾಡುವಲ್ಲಿ ಮುಂದಾಗಬೇಕು ಎಂದರು.

ದಮ್ಮೂರಿನ ಶ್ರೀ ಭೀಮಾಂಬಿಕಾದೇವಿ ಮಠದ ಒಡೆಯರಾದ ಹನುಮಂತಪ್ಪಜ್ಜ ಧರ್ಮರಮಠ ಸಾನಿದ್ಯವಹಿಸಿದ್ದರು. ಭಕ್ತನಾದೊಡೆ ಬಾಳೆಹಣ್ಣಿನಂತೆ ಇರಬೇಕು ಎಂಬ ವಚನದ ಸಾರಂಶದ ಬಗ್ಗೆ ಹಿರೇವಂಕಲಕುಂಟಾದ ಯೋಗಗುರು ಹರ್ಷಾನಂದ ಅವರು ಮಾತನಾಡಿ ಮಕ್ಕಳು ಶಿಕ್ಷಣದೊಂದಿಗೆ ಸಂಸ್ಕಾರವಂತರಾಗಬೇಕು ಶಿಕ್ಷಣ ಕಲಿತ ಮಕ್ಕಳು ಹಾಳಗ ಬಹುದು ಸಂಸ್ಕಾರ ಕಲಿತ ಮಕ್ಕಳು ಎಂದು ಹಾಳಗುವದಿಲ್ಲ ಎಂದರು.

ವಿದ್ಯಾರ್ಥಿಗಳು ಕೇವಲ ಅಂಕಗಳಿಗೆ ಸಿಮಿತ ವಾಗಬಾರದು, ಗುರು ಹಿರಿಯಲ್ಲಿ ವಿನಯದಿಂದ ಬಾಗಿದಾಗ ಉನ್ನಮಟ್ಟದಲ್ಲಿ ಬೆಳೆಯಲು ಸಾದ್ಯ ಎಂದು ದಮ್ಮೂರ ಶ್ರೀ ಭೀಮಾಂಬಿಕಾದೇವಿ ಶಿವಾನುಭವ ಸೇವಾ ಸಮಿತಿ ಅದ್ಯಕ್ಷ ಶರಣಬಸಪ್ಪ ದಾನಕೈ ಅವರು ಪ್ರಶಸ್ತಿ ಪತ್ರ ವಿತರಿಸಿ ಮಾತನಾಡಿದರು.

## ಹುಟ್ಟು ಹಬ್ಬದ ಪ್ರಯುಕ್ತ ಕಾಯಕ ಶೀಲಾ ಪ್ರಶಸ್ತಿ ಪ್ರಧಾನ ಸಮಾರಂಭ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನ ಸಮಿತಿ ಹಾಗೂ ಬಸವ ಜಯಂತಿ ಉತ್ಸವ ಸಮಿತಿ ಇವರು ನೇತೃತ್ವದಲ್ಲಿ ಕಾಯಕ ದಿನಾಚರಣೆ ಹಾಗೂ ಪರಣ್ಣ ಮುನವಳ್ಳಿ ಅವರ ಹುಟ್ಟು ಹಬ್ಬದ ಪ್ರಯುಕ್ತ ಕಾಯಕ ಶೀಲಾ ಪ್ರಶಸ್ತಿ ಪ್ರಧಾನ ಸಮಾರಂಭ. ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದಂತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಗೌರವ ಸನ್ಮಾನಿಸಲಾಯಿತು.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ಹತ್ತಿರವಿರುವ ಹೂವನೂರು ಗ್ರಾಮದ ರುದ್ರಮ್ಮ ಮತ್ತು ಚೆನ್ನಮಲ್ಲಪ್ಪ ದಂಪತಿಗಳಿಗೆ ಜನಿಸಿದ ಶ್ರೀ ಭರಮಪ್ಪ ಕುಂಬಾರ್ ಅವರದು ಅತ್ಯಂತ ಕಡು ಬಡತನದ ಕುಟುಂಬ.1950 ರಲ್ಲಿ ಜನಿಸಿದ ಇವರಿಗೆ ಪ್ರಸ್ತುತ 76 ವರ್ಷ ವಯಸ್ಸು.ತಂದೆಯವರ ಕಾಲದಲ್ಲಿ ಕುಂಬಾರಿಕೆಯ ಕಾಯಕವನ್ನೇ ನೆಚ್ಚಿಕೊಂಡ ಕುಟುಂಬಕ್ಕೆ ಕ್ರಮೇಣ ವಿದ್ಯುತ್, ಗ್ಯಾಸ್ ಸಿಲೆಂಡರ್ ಹಾಗೂ ಲೋಹದ ಪಾತ್ರೆಗಳು ಬಳಕೆ ಹೆಚ್ಚಿದಂತೆಲ್ಲಾ ಬೇಡಿಕೆ ಮತ್ತು ಆದಾಯ ಕಡಿಮೆಯಾಗಿ ಅನ್ನಕ್ಕೆ (ದುಡಿಮೆಗೆ) ಅನ್ಯಮಾರ್ಗ ಹುಡುಕಬೇಕಾಗಿದೆ.

'ಚಿನ್ನಕ್ಕಿಂತ ಅನ್ನಲೇಸು ಅನ್ನಕ್ಕಿಂತ ಅಕ್ಷರ ಲೇಸು' ಎಂಬ ನಾಣ್ಣುಡಿ ಕೇಳಲು ಚೆಂದ. ಆದರೆ ತುತ್ತಿನ ಚೀಲ ತುಂಬಲು ಪರದಾಡಬೇಕಾದ ಸಂದರ್ಭದಲ್ಲಿ ನೆತ್ತಿಯ ಚೀಲ (ಅಕ್ಷರ) ತುಂಬಿಸಿಕೊಳ್ಳಲು ಕಷ್ಟಸಾಧ್ಯವಾಗಿ ಮೂರನೇ ತರಗತಿಯ ಶಾಲೆ ಬಿಡಲಾಗುತ್ತದೆ. ಮುಂದೆ ಪಿತ್ರಾರ್ಜಿತವಾಗಿತ್ತು ತುಂಡು ಭೂಮಿಯಲ್ಲಿ ದುಡಿಯುತ್ತಾ ಅವರ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರಿಗೆ ಹಾಗೂ ದನ ಕಾಯುವ ಕಾಯಕದ ಮೂಲಕ ಬಾಲ್ಯವನ್ನು ಕಳೆಯಬೇಕಾಯಿತು. ಮುಂದೆ ತೀವ್ರ ಬರಗಾಲ ಉಂಟಾಗಿ ಕೃಷಿ ಉತ್ಪನ್ನ ಕುಂಠಿತಗೊಂಡು ಪರಿಸ್ಥಿತಿ ತೀರ ಹದಗೆಟ್ಟಾಗ ಗಂಗಾವತಿ ಹತ್ತಿರದ ವಡ್ಡರಹಟ್ಟಿ ತಂದೆ-ತಾಯಿಯವರೊಂದಿಗೆ ವಲಸೆ ಬರಬೇಕಾಯಿತು. ನೀರಾವರಿ ಪ್ರದೇಶದಲ್ಲಿ ಕೃಷಿ ಕಾರ್ಮಿಕರಾಗಿ ದುಡಿಮೆ ಮುಂದುವರೆಯಿತು.ಕೆಲ ವರ್ಷಗಳ ನಂತರ ಸ್ವಂತಕ್ಕೆ ಮರಳಿದರಾದರೂ ಆಗಿಂದಾಗ್ಗೆ ಪುನರಾವರ್ತನೆಯ ಬರಗಾಲಗಳು ಇವರನ್ನು ಕುಟುಂಬ ಸಮೇತರಾಗಿ ಗಂಗಾವತಿಗೆ ಬಂದು ಶಾಶ್ವತವಾಗಿ ನೆಲೆಸುವಂತೆ ಮಾಡಿದವು ಗಂಗಾವತಿ ಪಟ್ಟಣದ ಜಯನಗರದ ಹತ್ತಿರ ಗುಡ್ಡದ ಏರಿಯಾದಲ್ಲಿ ನೆಲೆಯೂರಿ ತೆ-ೂೕಟ ಕಾಯುವ ಕೆಲಸದ ಮೂಲಕ ಬದುಕು ಕಟ್ಟಿಕೊಂಡರು. ಈ ನಡುವೆ ಗೂಡಂಗಡಿಯಲ್ಲಿ ಬದುಕಿಗೆ ಆಸರೆಯಾಗಿಸಿಕೊಂಡರೂ ಅಷ್ಟೇನೂ ಕೈ ಹಿಡಿಯದ ಪ್ರಯುಕ್ತ ತೋಟ ಕಾಯುವ ಕಾಯಕ ಮುಂದುವರೆಸಿದರು ಆದಾಯದಲ್ಲಿ ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡಿ, ಇನ್ನಿಬ್ಬರು ಗಂಡು ಮಕ್ಕಳನ್ನು ಸ್ವಾವಲಂಬಿಗಳಾಗಿಸಿ. ಜವಾಬ್ದಾರಿಯ ರಾಗಿ ಬಾಳುವಂತೆ. ತೀರ ಚಿಕ್ಕಂದಿನಲ್ಲಿ ಇಳಕಲ್ ಮಹಾಂತ ಸ್ವಾಮಿಗಳಿಂದ ಲಿಂಗ ದೀಕ್ಷೆ ಪಡೆದು ಇವರು ಅದೇ ಪರಂಪರೆಯಲ್ಲಿ ಬೆಳೆದು ಬಂದು ಪ್ರಸ್ತುತ ಶರಣ ಸಾಹಿತ್ಯದ ಬಹುತೇಕ ಕಾರ್ಯಕ್ರಮಗಳಲ್ಲಿ ಅರ್ಪಣೆಯೊಂದಿಗೆ ಭಾಗಿಯಾಗುತ್ತ ಜೀವನದ ಸಂಧ್ಯಾಕಾಲದಲ್ಲಿ ಯಾವುದೇ ಬಿಪಿ ಶುಗರ್ ಕಾಯಿಲೆಗಳಿಲ್ಲದೇ ಆರೋಗ್ಯಯುತ ಜೀವನ ಸಾಗಿಸುತ್ತಿದ್ದು ಎಲ್ಲರಿಗೂ ಮಾದರಿಯಾಗಿದ್ದಾರೆ. ಆ ಪ್ರಯುಕ್ತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಶ್ರೀಯುತರಿಗೆ 2026 ನೇ ಸಾಲಿನ ಕಾಯಕ ಶೀಲ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.


## 2 ಲಕ್ಷ 80 ಸಾವಿರ ಸಸಿ ತಯಾರಿ, ರೈತರ ಮೊಗದಲ್ಲಿ ಮೈಯೂರಿ



**ವರ್ತಮಾನ-ವಿಜಯ**
**● ಮಧೂರ ತಿಳಗೂಳಕರ**
**ಜಿಲ್ಲಾ ವರದಿಗಾರರು**

ಅನುದಾನದ ಕೊರತೆಯಿಂದ ಕಳೆದ ಎರಡ್ಮೂರು ವರ್ಷಗಳಿಂದ ಇಲ್ಲಿ ಸಸಿ ಬೆಳೆಸಲು ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಿರಲಿಲ್ಲ. ಈಗ ಸರ್ಕಾರ ಮತ್ತೆ 2 ಕೋಟಿ 29 ಲಕ್ಷ ಅನುದಾನದ ಬಿಡುಗಡೆ ಮಾಡಿದ ಕಾರಣ 2 ಲಕ್ಷ 80 ಸಾವಿರ ಸಸಿಗಳನ್ನು ಬೆಳೆಸುತ್ತಿದ್ದಾರೆ. ಮೂರು ವರ್ಷದ ನಂತರ ಕೈ ಸೇರಲಿವೆ ಸಸಿಗಳು ಇನ್ನೂ ಕಳೆದ ಎರಡು ವರ್ಷಗಳಿಂದ ಟೆಂಗಿನ ಸಸಿ ಬೆಳೆಸುವದು ಸ್ಥಹಿತ ಸ್ಥಗಿತಗೊಂಡಿತ್ತು, ಆದರೆ ಈ ವರ್ಷ 8 ಸಾವಿರ ಟೆಂಗಿನ ಸಸಿಗಳನ್ನು ಕೂಡಾ ಬೆಳೆಸಲು ಮುಂದಾಗಿದ್ದು ಇದು ರೈತರ ಮೊಗದಲ್ಲಿ ಸಂತಸ ತರಿಸಿದೆ. ಈ ಕುರಿತಾದ ಒಂದು ವರದಿ ಇಲ್ಲಿದೆ ನೋಡಿ.

ಹೌದು 2022-2023 ರಲ್ಲಿ ವಿಜಯಪುರ ಜಿಲ್ಲೆಯ ಆಲಮಟ್ಟಿ ಅರಣ್ಯ ಇಲಾಖೆ ವತಿಯಿಂದ 6 ಲಕ್ಷ ಸಸಿಗಳನ್ನು ಬೆಳೆಸಿ ಕಡಿಮೆ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗಿತ್ತು. ಬಳಿಕ ಅನುದಾನದ ಕೊರತೆಯಿಂದ ಸಸಿ ಬೆಳೆಸುವದನ್ನು ಬಂದ್ ಮಾಡಿದ್ದರು. ಆದರೆ ಈ ವರ್ಷ ಮತ್ತೆ ಆಲಮಟ್ಟಿಯ ಕೆಬಿಜೆಎನ್ ಎಲ್ ಅರಣ್ಯ ಇಲಾಖೆ ವತಿಯಿಂದ ರೈತರಿಗೆ ಸಿಹಿ ಸುದ್ದಿ ಸಿಕ್ಕಿದ್ದು ರೈತರು ಸಂತಸಗೊಂಡಿದ್ದಾರೆ. ಸರ್ಕಾರದಿಂದ ಒಟ್ಟು 2 ಕೋಟಿ 29 ಲಕ್ಷ ಅನುದಾನದ ಬಿಡುಗಡೆಯಾದ ಕಾರಣ 2 ಲಕ್ಷ 80 ಸಾವಿರ ಸಸಿಗಳನ್ನು ಬೆಳೆಸುತ್ತಿದ್ದಾರೆ. ಇನ್ನೂ ಕಳೆದ ಎರಡು ವರ್ಷಗಳಿಂದ ಟೆಂಗಿನ ಸಸಿ ಬೆಳೆಸುವದು ಸ್ಥಹಿತ ಸ್ಥಗಿತಗೊಂಡಿತ್ತು, ಆದರೆ ಈ ವರ್ಷ 8 ಸಾವಿರ ಟೆಂಗಿನ ಸಸಿಗಳನ್ನು ಕೂಡಾ ಬೆಳೆಸುವಲ್ಲಿ ಮುಂದಾಗಿದ್ದು ಇದು ರೈತರ ಮೊಗದಲ್ಲಿ ಸಂತಸ ತರಿಸಿದೆ.






ಈಗಾಗಲೇ ಮಣ್ಣು, ಗೊಬ್ಬರ ಸೇರಿಸುವದರ ಮೂಲಕ ವಿಶೇಷ ಆರೈಕೆಯೊಂದಿಗೆ ಸಸಿಗಳನ್ನು ಬೆಳೆಸಲಾಗುತ್ತಿದೆ. ಆಲಮಟ್ಟಿ ನರ್ಸರಿ ಒಂದು ತರಹದ ತನ್ನದೇ ಆದ ಪ್ರಾಮುಖ್ಯತೆ ಹೊಂದಿದೆ. ಬೇರೆ ಭಾಗದಲ್ಲಿ ಅರಣ್ಯ ಸಸಿ ಬೆಳೆಸುತ್ತಾರೆ ಆದರೆ ರೈತರಿಗೆ ಅದು ಪ್ರಯೋಜನವಾಗುತ್ತಿಲ್ಲ ಎಂದು ಹೇಳಿದ ಕಾರಣ, ರೈತರ ಅನಿಸಿಕೆ ಅನುಗುಣವಾಗಿ ಒಳ್ಳೆಯ ವಾತಾವರಣಕ್ಕೆ ಅನುಕೂಲವಾಗುವ ಮಾವು ಶ್ರೀಗಂಧ, ಹೆಬ್ಬೇವು, ಮಹಾಗಣಿ, ರಕ್ತಚಂದನ, ಗಾಳಿ ಮರ, ಹಾಗೂ ಹಣ್ಣಿನ ಸಸಿಗಳಾದ ಮಾವು, ಚಿಕ್ಕು, ಸೀತಾಫಲ, ಪೇರು, ಹಲಸು, ದಾಳಿಂಬೆ, ಲಿಂಬೆ, ರಾಮಫಲ, ಲಕ್ಷ್ಮಣ ಫಲ ಸೇರಿದಂತೆ ಹಲವು ವಿವಿಧ ಸಸಿ ಬೆಳೆಸುತ್ತಿದ್ದಾರೆ. ಹಿಂದೆ ರೈತರು ತಗೆದು ಕೊಂದ ಸಸಿಗಳಿಂದ ಒಳ್ಳೆಯ ಫಲ ಪಡೆಯುತ್ತಿದ್ದಾರೆ. ಉತ್ತಮ ಗುಣಮಟ್ಟದ ಸಸಿ ಕೊಡಲು ಆಲಮಟ್ಟಿಯ ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ...

ಒಟ್ಟಿನಲ್ಲಿ ಕಳೆದ ಎರಡ್ಮೂರು ವರ್ಷಗಳಿಂದ ಬಂದ್ ಆಗಿದ್ದ ಸಸಿ ಉತ್ಪತ್ತಿ ಕಾರ್ಯ ಮತ್ತೆ ಆರಂಭ ಮಾಡಿದ್ದು ಇದು ರೈತರ ಮೊಗದಲ್ಲಿ ಸಂತಸ ತರಿಸಿದೆ. ಆದಷ್ಟು ಬೇಗಾ ಉತ್ತಮ ಗುಣಮಟ್ಟದ ಸಸಿಗಳನ್ನು ರೈತರಿಗೆ ವಿತರಣೆ ಮಾಡಲಿ ಎಂಬುದೇ ರೈತರ ಆಶಯ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)